the Budget. We have already started Budget discussion. I only hope the Hon'ble House will support my Bill Sir.

Mr. SPEAKER.—The question is :

"That the Mysore Appropriation Bill, 1963 be taken into consideration."

The motion was adopted.

Mr. SPEAKER.—There are no amendment and I will put the clauses. The question is :

"That Clauses 2 and 3 stand part of the Bill"

The motion was adopted.

Clauses 2 and 3 were added to the Bill.

Mr. SPEAKER.—The question is :

"That Schedule stand part of the Bill."

The motion was adopted.

The schedule was added to the Bill.

Mr. SPEAKER.—Title and Preamble. The question is :

"That Clause I, The Title and the Preamble stand part of the Bill."

The motion was adopted.

Clause 1, The title and the preamble were added to the Bill.

Motion to pass.

Sri B. D. JATTI.—Sir, I move :

"That the Mysore Appropriation Bill, 1963 be passed."

Mr. SPEAKER.—The question is :

"That the Mysore Appropriation Bill 1963 be passed."

The motion was adopted.

BUDGET ESTIMATES FOR 1963-64—GENERAL DISCUSSION

(Debate continued.)

ಶ್ರೀ ಟಿ. ಹುಚ್ಚೇಗೌಡ.—(ತುರುವೇಕೆರೆ) ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ಟಿನ ವಿಚಾರದಲ್ಲಿ ನಾನೂ ಕೂಡ ನಮ್ಮ ನಾಯಕರಾದ ಶಿವಪ್ಪನವರು ಹೇಳಿದಂತೆ ಸಪ್ಪೆ ಎಂದು ಹೇಳಬೇಕಾಗಿದೆ. ನಾವು ಮೊದಲಿನಿಂದ ಕೇಳುತ್ತಿರುವುದು ಜನಗಳಿಗೆ ಅನ್ನ, ಬಟ್ಟೆ, ವಸತಿಗಳನ್ನು ಒದಗಿಸುವುದಕ್ಕೆ, ಅದರಲ್ಲಿಯೂ ಸಾಮಾನ್ಯ ಪ್ರಜೆ ತನ್ನ ಕಾಲಮೇಲೆ ತಾನು ನಿಂತು ಸುಖವಾಗಿ ಜೀವನ ಮಾಡಿ ಕೊಳ್ಳುವಷ್ಟು ಮಟ್ಟಿಗಾದರೂ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಅತ್ಯಾವಶ್ಯಕವಾದ ಸಹಾಯವನ್ನು ಕೊಡಬೇಕು ಎಂದು. ಆದರೆ ಈ ಬಡ್ಜೆಟ್ಟಿನಲ್ಲಿ ಅದು ಯಾವ ರೀತಿಯಲ್ಲಿಯೂ ಕೂಡ

(ಶ್ರೀ ಬಿ. ಹುಚ್ಚೇಗೌಡ

ಆಶಾದಾಯಕವಾಗಿಲ್ಲ. ಮತ್ತು ಗ್ರಾಮಾಂತರ ವಾಸಿಗಳಿಗೆ ಸ್ಕೂಲು, ಕುಡಿಯುವ ನೀರಿನ ಬಾವಿ, ಆಸ್ಪತ್ರೆ ಮತ್ತು ಸಂಚಾರ ಸೌಲಭ್ಯಗಳು ಕೂಡ ಸಿಕ್ಕಿಲ್ಲ. ವಿದ್ಯುಚ್ಛಕ್ತಿಯನ್ನಂತೂ ಗ್ರಾಮಸ್ಥರು ನೋಡುವ ಹಾಗೆಯೇ ಇಲ್ಲ. ಉದಾಹರಣೆಗೆ ಪ್ರಾಥಮಿಕ ವಿದ್ಯಾಭ್ಯಾಸದ ಅವಶ್ಯಕತೆ ನಮ್ಮ ಜನ ಜೀವನದಲ್ಲಿ ಎಷ್ಟು ಇದೆ, ಅದು ಎಷ್ಟು ಅಮೂಲ್ಯವಾದುದು, ಅದರಲ್ಲಿಯೂ ಪ್ರಜಾಪ್ರಭುತ್ವಕ್ಕೆ ಅದು ಎಷ್ಟರಮಟ್ಟಿಗೆ ಅವಶ್ಯಕವಾದುದು ಎನ್ನುವುದನ್ನು ಯಾರೂ ಕೂಡ ಪ್ರಶ್ನೆಮಾಡುವಹಾಗಿಲ್ಲ. ಮೈಸೂರಿನಲ್ಲಿ ಕಡ್ಡಾಯ ಶಿಕ್ಷಣ ಸುಮಾರು 15 ವರ್ಷಗಳಿಂದ ಇದ್ದರೂ ಕೂಡ, ಇನ್ನೂ ಅನೇಕ ಗ್ರಾಮಗಳಲ್ಲಿ ಎಂದರೆ 272 ಗ್ರಾಮಗಳಲ್ಲಿ ಶಾಲೆಗಳಿಲ್ಲವೆಂದು ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿದ್ದಾರೆ. ಇದು ತುಂಬ ದುಃಖಕರವಾದುದು. ವಿದ್ಯೆಯಲ್ಲಿ ಮುಂದುವರೆದಿರುವ ಸ್ಥಳಗಳಿಗೆ ಶಾಲೆಗಳನ್ನು ಕೊಟ್ಟು, ಬಹಳ ಹಿಂದೆಬಿದ್ದು, ಗ್ರಾಮಗಳಲ್ಲಿ ನಿರ್ಗತಿಕರಾಗಿರುವವರಿಗೆ ಸಾಕಾದಷ್ಟು ಸಹಾಯ ಮಾಡಿ ಒಂದು ಸ್ಕೂಲನ್ನು ಕಟ್ಟಿಸಿ ಕೊಡಬೇಕು. ಎಂದರೆ ಈಗಿನ ಕಾಲದಲ್ಲಿ ಕಟ್ಟಿಸುತ್ತ ಮೂರು ಸಾವಿರ ಶಾಲೆಗಳನ್ನು ಕಟ್ಟಿಸಲು ಸುಮಾರು 60-70 ಲಕ್ಷ ರೂಪಾಯಿ ಬೇಕಾಗಬಹುದು. ಸರ್ಕಾರದವರು ನಿರೀಕ್ಷೆ ಮಾಡಿರುವುದಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸೇರಿದರೆ ಸಾಕಾವಷ್ಟು ಉಪಾಧ್ಯಾಯರನ್ನು ಮತ್ತು ಕಟ್ಟಡಗಳನ್ನು ಒದಗಿಸಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ. 1961-62ರಲ್ಲಿ ಐದು ಸಾವಿರ ಉಪಾಧ್ಯಾಯರು ಬೇಕಾಗಿರುವಾಗ ಕೇವಲ ಒಂದು ಸಾವಿರ ಜನರನ್ನು ನೇಮಕ ಮಾಡಿದ್ದಾರೆ.

ಬೇಸಿಕ್ ಶಾಲೆಗಳ ವಿಚಾರದಲ್ಲಿ ಕಳೆದ ವರ್ಷ 500 ಶಾಲೆಗಳನ್ನು ತೆರೆದರು. ಈ ವರ್ಷ ಯಾವ ಸ್ಕೂಲನ್ನು ಹೊಸದಾಗಿ ತೆರೆಯುವ ಯೋಜನೆಯನ್ನಿಟ್ಟುಕೊಂಡಿಲ್ಲ. ಮತ್ತು ಈ ವರ್ಷ ಪ್ರೈಮರಿ 7 ಮತ್ತು 8ನೆಯ ತರಗತಿಯ ವಿದ್ಯಾರ್ಥಿಗಳು ಹೈಸ್ಕೂಲಗೆ ಸೇರಬೇಕಾಗಿರುವ ಕಾಲದಲ್ಲಿ ಹೆಚ್ಚು ಹೈಸ್ಕೂಲುಗಳಿಗೆ ಪ್ರಾವಿಷನ್ ತೋರಿಸಿಲ್ಲ.

ಸ್ವಾಮಿ, ನಮ್ಮ ನೆರೆ ರಾಜ್ಯಗಳಾದ ಕೇರಳ ಮತ್ತು ಮದ್ರಾಸ್‌ಗಳಲ್ಲಿ ಎಷ್ಟೋ ಸೌಕರ್ಯಗಳನ್ನು ಅನಾಥರಿಗೆ, ಮುದುಕರಿಗೆ ಪೆನ್ಷನ್ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಕೇರಳದಲ್ಲಿ destitutes ಮತ್ತು widowsಗೆ ಪೆನ್ಷನ್ ಕೊಡುವ ಏರ್ಪಾಡು ಮಾಡಿದ್ದಾರೆ, orphanages ಹೆಚ್ಚು ಹೆಚ್ಚು ಗ್ರಾಂಟ್ ಕೊಟ್ಟಿದ್ದಾರೆ. ಪರೀಕ್ಷೆಗೆ financial assistance free ಆಗಿ ಕೊಡುತ್ತಿದ್ದಾರೆ. ಉನ್ನತ ವ್ಯಾಸಂಗ ಮಾಡತಕ್ಕ ಬಡ ಹುಡುಗರಿಗೆ ಮತ್ತು ಮೇಧಾವಿಗಳಿಗೆ interest free loans ಕೊಡುತ್ತಿದ್ದಾರೆ, Postgraduate Coursesಗೆ ಹೋಗುವವರಿಗೆ ಕೂಡ ಈ ರೀತಿಯ ಸೌಲಭ್ಯಗಳಿವೆ. ನಮ್ಮಲ್ಲಿ ಇಷ್ಟು ಪುಸ್ತಕಗಳನ್ನು ತಿರುವಿಹಾಕಿದರೂ ನಮ್ಮಲ್ಲಿ ಏನೂ ಕಾಣುತ್ತಿಲ್ಲ.

ತುರ್ತು ಪರಿಸ್ಥಿತಿಯಿಂದ ಒಂದು ಮುಖ್ಯ ಸಾಧನೆಯಾಗಿದೆ. ಇದ್ದರಿಂದ ಒಳ್ಳೆಯ ಪ್ರಭಾವವಾಗಿದೆ. ದೇಶದಲ್ಲಿ ಜನರೆಲ್ಲ ಒಗ್ಗಟ್ಟಾಗಿ ಮನೋಸ್ಥೈರ್ಯವನ್ನು ಪ್ರದರ್ಶಿಸುವ ಕಾಲಬಂದಿತ್ತು. ಇಂಥದನ್ನು ಸದುಪಯೋಗ ಮಾಡಿಕೊಳ್ಳದೆ ದುರುಪಯೋಗವಾಗುತ್ತಿದೆ. ರಕ್ಷಣಾ ನಿಧಿಯನ್ನು ವಸೂಲು ಮಾಡುವುದರಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ, ಹಣವನ್ನು ತೆಗೆದುಕೊಂಡು ರಸೀತಿ ಕೊಡದೆ ಇರುವ ಸಂದರ್ಭಗಳು ಎಷ್ಟೋ ಇವೆ. ಅದೂ ಅಲ್ಲದೆ ಪ್ರತಿಯೊಂದು ಗ್ರಾಮಕ್ಕೂ ಇಷ್ಟಿಷ್ಟು ಹಣ ಕೊಡಬೇಕು ಎಂದು ಹಂಚಿದ್ದಾರೆ. ಆ ಗ್ರಾಮಗಳ ಮುಖಂಡರು ಎಲ್ಲರಿಂದಲೂ ವಸೂಲ್ಮಾಡಿ ತಾವು ಮಾತ್ರ ಕೊಡದೆ ಹಾಗೆಯೇ ಇರುತ್ತಾರೆ. ಹಣದ ವಸೂಲಿಗೆ ಏಜೆಂಟರನ್ನು ಇಟ್ಟುಕೊಂಡಿರುವ ಈ ಸರ್ಕಾರ ಬಂಡವಾಳಗಾರರಿಗೆ ಮಾತ್ರ ಸೌಲಭ್ಯವನ್ನು ಕೊಡತಕ್ಕ ಈ ಸರ್ಕಾರ ನಮ್ಮ ದುರಾದೃಷ್ಟದಿಂದ ಬಂದಿದೆ.

ಒಂದು ಕೆಲಸಕ್ಕೆ ಏಳು ಸಾವಿರ, ಎಂಟು ಸಾವಿರದಷ್ಟು ಕೊಡಬೇಕೆಂದರೆ ಹೇಗೆ? ಒಂದು ಸಿಮೆಂಟು ಮೂಟೆಗೆ ಇಷ್ಟು, ಹೀಗೆ ಯಾವುದೇ ಒಂದು ಕಾರ್ಯಕ್ಕಾಗಿಯಾಗಲೀ ಇಷ್ಟು ಕೊಡಬೇಕೆಂದು ಹೋಗುತ್ತಾರೆ. ಏನೋ ವಾಲಂಟಿಯರಾಗಿ ಕೊಡುವವರೂ ಇದ್ದಾರೆ. ಆದರೆ ಬಡಬಗ್ಗರಿಂದ ಕಂದಾಯವನ್ನು ಹೇಗೆ ವಸೂಲು ಮಾಡುತ್ತಾರೋ ಹಾಗೆ ವಸೂಲಿ ಮಾಡುವುದು ಅಷ್ಟು ಸರಿಯಿಲ್ಲ. ಇದರಲ್ಲಿ ಎಷ್ಟೋ ಜನರು ಬಹಳ ಹಿಂದುಳಿದವರು; ಆದುದರಿಂದ ಅವರೂ ಇನ್ನೂ ಹಿಂದಕ್ಕೆ ಹೋಗುವ ಪರಿಸ್ಥಿತಿ ಬಂದಿದೆ.

ಇನ್ನು ಕುಡಿಯುವ ನೀರಿನ ಬಾವಿಗಳಿಗಾಗಿ ಸಹಾಯ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇವರು ಕೊಟ್ಟಿರುವ ಅಂಕಿಗಳಂತೆ ನಮಗೆ ಇನ್ನೂ 5,000 ಭಾವಿಗಳು ನಮ್ಮ ದೇಶಕ್ಕೆ ಬೇಕಾಗುತ್ತಿದೆ. ಬಾವಿಗೇನೋ ಹಣವನ್ನು ಕೊಡುತ್ತಾರೆ. ಆದರೆ ಕೆಲವರಿಗೆ ದುಡ್ಡು ಕೊಟ್ಟಿದ್ದರೂ ಅವರಿಗೆ ವಾಪಸು ಕೊಡಲು ಶಕ್ತಿ ಇಲ್ಲದಿದ್ದರೆ ಏನು ಮಾಡುವುದು, ಆಯಾ ಪ್ರದೇಶದ ಆರ್ಥಿಕ ಸ್ಥಿತಿಯು

ಮೇಲೆ ಸರಕಾರ ನೋಡುತ್ತಿಲ್ಲ. ಕೇವಲ ಗುಣಾಕಾರದ ಮೇಲೆ, ಗಣಿತದ ಮೇಲೆ ಇಷ್ಟು ಕೋಟಿ ರೂಪಾಯಿಗಳಷ್ಟು ಎಂದು ಹಂಚಿದ್ದೇವೆಂದು ಹೇಳುತ್ತಾರೆ. ಅನೇಕ ಕಡೆ ಜನ ಒಂದು ಎಕರೆಯಷ್ಟು ತರಿಯಾಗಲೀ, ಬಾಗಾಯತಾಗಲೀ, ಇಲ್ಲದೆ ಕಲ್ಲುಮುಳ್ಳುಗಳು ನಿಂತಿರುವ ಪ್ರದೇಶದ ಮೇಲೆ ಇದ್ದಾರೆ. ಅಂತಹವರಿಗೆ ಶೇಕಡಾ 50 ರಷ್ಟು ಕಾಂಟ್ರಿಬ್ಯೂಷನ್ನು ಕೊಡಬೇಕೆಂದರೆ, ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ, ಬೆಂಗಳೂರಿನಲ್ಲಿ ನೀರಿಲ್ಲ ಎಂದು ಹದಿಮೂರು ಕೋಟಿಯಷ್ಟು ಸಾಲವನ್ನು ಸೆಂಟ್ರಲ್ ಗವರ್ನಮೆಂಟಿನಿಂದ ತರಲು ಹೋಗುವುದಕ್ಕೆ ಸಾಧ್ಯವಿದೆ. ಆದರೆ ಸುಮಾರು ಐದು ಸಾವಿರ ಬಾವಿಗಳನ್ನು ಮಾಡಲು ಸುಮಾರು ಹನ್ನೊಂದು ಸಾವಿರದಷ್ಟು ಹಣವನ್ನು ವೆಚ್ಚಮಾಡಲು ಇವೊತ್ತಿನ ಪರಿಸ್ಥಿತಿಯಿಂದ ಆಗಲಿಲ್ಲ. ಜನ ಇಲ್ಲಿ ಬಹುದಿನಗಳಿಂದಲೂ ಕೊಚ್ಚೆ ನೀರನ್ನು ಪಯೋಗಿಸಿ ಕೊಂಡು ಕಷ್ಟಪಡುತ್ತಿರುವ ಪರಿಸ್ಥಿತಿ ಮೊದಲಿನಿಂದಲೂ ಸರಕಾರಕ್ಕೆ ಗೊತ್ತಿದ್ದರೂ ಇದರ ಬಗ್ಗೆ ಸರ ಕಾರ ಸರಿಯಾಗಿ ನೋಡಲಿಲ್ಲ.

ಇನ್ನು ಮನೆಗಳು ಎಂದರೆ ವಸತಿ ಸೌಕರ್ಯದ ಕಡೆಗೆ ನೋಡಿದರೆ, ಇಂಡಸ್ಟ್ರೀಸುಗಳು ಎಲ್ಲೆ ಲ್ಲಿವೆಯೋ ಅಲ್ಲಿನ ಜನಕ್ಕೆ ವಸತಿ ಸೌಕರ್ಯ ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಷ್ಟು ಇಲ್ಲ. ನಮ್ಮ ದೇಶದಲ್ಲಿ ಸುಮಾರು 25,000 ಗ್ರಾಮಗಳಿವೆ. ಸುಮಾರು ೨೦೦ ಗ್ರಾಮಗಳಲ್ಲಿ ಸರ ಕಾರದವರು ಕೆಲವು ಮನೆಗಳನ್ನು ಕಟ್ಟಿ ಅನುಕೂಲ ಮಾಡಿಕೊಟ್ಟಿದ್ದಾರೆ. ಇದೂ ಅಲ್ಲದೆ ಮೂರನೇ ಪ್ಲಾನಿನಲ್ಲಿ ಇವರ ಗುರಿ 5,000 ಮನೆಗಳಿರಬೇಕು ಎಂದಿದೆ. ಎಂದರೆ ಐದು ಊರಿಗೆ ಒಂದು ಮನೆ ಯಂತಾಯಿತು. ಹೀಗಾದರೆ ಯಾವ ಕಾಲಕ್ಕೆ ಈ ಮನೆಯ ಪರಿಸ್ಥಿತಿಯನ್ನು ಪರಿಹರಿಸಲು ಸಾಧ್ಯ ಮತ್ತು ಎಲ್ಲ ಹಳ್ಳಿಗಳ ಕಡೆಗೂ ಗಮನ ಕೊಡುವುದಕ್ಕೆ ಸಾಧ್ಯ.

ಇನ್ನು ದವಸ ಧಾನ್ಯಗಳನ್ನು ಪಡೆಯುವಾಗ ಎಲ್ಲ ರೈತರಿಗೂ ಲಾಭದಾಯಕವಾಗಿ ಮಾಡ ಬೇಕೆಂದು ಸರಕಾರದ ಮುಂದೆ ಈ ಪ್ರಶ್ನೆ ಅನೇಕ ವರ್ಷದಿಂದಲೂ ಇದೆ. ಈಗ ರೈತನು ಬೆಳೆದು ತಂದ ಸುಗ್ಗಿ ಕಾಲ ಕಳೆದು ತಿಂಗಳುಗಳ ಮೇಲಾಯಿತು. ಅವರ ಧಾನ್ಯಗಳೆಲ್ಲಾ ವರ್ತಕರ ಕೈಸೇರಿದ ಮೇಲೆ ಸರಕಾರ ದವಸ ಧಾನ್ಯಗಳ ರೇಟನ್ನು ನಿಗದಿ ಮಾಡುತ್ತಿದ್ದಾರೆ. ಎಷ್ಟೋ ಪಲ್ಲ ಭತ್ತವನ್ನು ವರ್ತಕರು ಕಡಿಮೆ ಬೆಲೆಯಲ್ಲಿ ತೆಗೆದುಕೊಂಡು ಇಟ್ಟಿರುವುದನ್ನು ಪೇಟೆಗೆ ತಂದು ನಮಗೆ ಮಾತ್ರ ರೂಪಾಯಿಗೆ ಒಂದೂಕಾಲು ಸೇರಿನಂತೆ ಅಕ್ಕಿ ಎಂದರೆ ಪಲ್ಲಕ್ಕೆ ಎಂಬತ್ತು ರೂಪಾಯಿನಂತೆ ಮಾರುತ್ತಿದ್ದಾರೆ. ಎಲ್ಲ ದವಸ ಧಾನ್ಯಗಳೂ ವರ್ತಕರ ಕೈ ಸೇರಿದ ಮೇಲೆ ಸರಕಾರ ಗ್ರಾಮಾಂತ ರದ ಜನಕ್ಕೆ ಅನುಕೂಲವಾಗಬೇಕೆಂದು ರೇಟನ್ನು ನಿಗದಿ ಮಾಡುತ್ತಾರೆ. ಕುಡಿಯುವ ನೀರಿನ ಬಾವಿ ಬೇಕೆಂದು ಕೇಳಿದರೆ ಅವನು ಸತ್ತುಹೋದಮೇಲೆ ಅವನಿಗೆ ಬಾವಿಯನ್ನು ಕೊಡುತ್ತಾರೆ. ಈ ರೀತಿಯ ಅವ್ಯವಸ್ಥೆಗೆ ಗುರಿಯಾಗುತ್ತಿರುವಾಗ Top Priority ಯನ್ನು ವ್ಯವಸಾಯಕ್ಕೆ, ವ್ಯವ ಸಾಯಗಾರರಿಗೆ, ಎನ್ನುವುದರಲ್ಲಿ ಏನೇನೂ ಅರ್ಥವಿಲ್ಲ. ಯಾವ ಕಾಲಕ್ಕೂ ಸಹಾಯ ಕೊಡುವುದಿಲ್ಲ. ಯಾವ ಯಾವ ಕಾಲಕ್ಕೆ ಸರಿಯಾಗಿ ಕೊಡಬೇಕೋ ಅವರಿಗೆ ಕೊಡುತ್ತಿಲ್ಲ. ಬೀಜಗಳೇ ಆಗಲಿ, ಗೊಬ್ಬ ರವೇ ಆಗಲಿ, ಕಬ್ಬಿಣದ ಗುಳಗಳೇ ಆಗಲೀ, ಯಾವುದನ್ನೂ ಸಕಾಲದಲ್ಲಿ ಕೊಡುತ್ತಿಲ್ಲ. ಪೈರನ್ನು ಬೆಳೆದ ಮೇಲೆ ಬೀಜಗಳನ್ನು ಕೊಡಲು ಬರುತ್ತಾರೆ. ಸುಗ್ಗಿಯ ಕಟಾವು ಆದಮೇಲೆ ಗೊಬ್ಬರವನ್ನು ಕೊಡಲು ಬರುತ್ತಾರೆ.

ಇನ್ನು ಸೊಸೈಟಿಗಳ ವ್ಯವಹಾರ ನೋಡಿದರೆ ಅವು ಹೇಗೆ ನಡೆಯುತ್ತಿವೆ ಎನ್ನುವುದನ್ನು ಹೇಳು ವುದಕ್ಕೆ ಅಸಾಧ್ಯ. ಅಲ್ಲೆಲ್ಲಾ ಒಬ್ಬೊಬ್ಬ ಲೀಡರಿನ ಹಕ್ಕಾಗಿದೆ. ಬೇರೆಯವರಿಗೆ ಯಾವ ಸೌಕ ರ್ಯವೂ ಇದರಿಂದ ಸಿಗುತ್ತಿಲ್ಲ. ಗೊಬ್ಬರಕ್ಕಾದರೂ ಹೋಗಲಿ, ಕಬ್ಬಿಣಕ್ಕಾದರೂ ಹೋಗಲೀ, ಅವು ಬರುತ್ತವೆ. ಎಲ್ಲೋ ಬ್ಲಾಕುಮಾರ್ಕೆಟ್ಟಿನಲ್ಲಿ ಎಲ್ಲವೂ ಹೊರಟುಹೋಗುತ್ತವೆ. ಎಷ್ಟೋ ಸೊಸೈಟಿಗಳಲ್ಲಿ ಏಳೆಂಟು ವರ್ಷದಿಂದ ಆಡಿಟ್ಟೇ ಆಗಿಲ್ಲ. ಸರಕಾರದಿಂದಲೇ ನೇಮಿತವಾದ ಆಡಿಟ್ಟು ಕಮಿಟಿಯ ರಿಪೋರ್ಟು ಈ ಸಭೆಯಲ್ಲೇ ಬಂದಿರುವುದನ್ನು ಉದಾಹರಣೆಯಾಗಿ ಹೇಳಬಹುದು. ಅಲ್ಲದೇ ಯಾವುದಾದರೂ ಸೊಸೈಟಿಯಲ್ಲಿ ಯಾರಾದರೂ ಒಬ್ಬರು ಆಡಿಟರು ಬಂದು ಸ್ಟ್ರಿಕ್ಟ್ ಆಗಿ ಆಡಿಟ್ ಮಾಡಿ ಲೆಕ್ಕ ತನಿಖೆ ಮಾಡಿದವರನ್ನು ಬಿದರ್ ಕಡೆಗೋ ಅಥವಾ ಇನ್ಯಾವುದಾದರೂ ದೂರದ ಜಾಗಕ್ಕೆ ಅವರನ್ನು ಟ್ರಾನ್ಸ್‌ಫರು ಮಾಡಿಬಿಡುತ್ತಾರೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿಶಾಖೆಗಳ ಮಂತ್ರಿಗಳು).—ಯಾವ ಊರಿನಲ್ಲಿ ?

ಶ್ರೀ ಬಿ. ಹುಚ್ಚೇಗೌಡ.—ನಾನು ಹೇಳುತ್ತಿರುವುದೆಲ್ಲಾ ತುಮಕೂರು ಜಿಲ್ಲೆಗೆ ಸಂಬಂಧ ಪಟ್ಟದ್ದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ನೂರಾರು ಜನರ ಮೇಲೆ ಎಷ್ಟೋ ಕಂಪ್ಲೇಂಟ್ ಗಳಿದ್ದರೂ ಅಂಥಹವರ ಫೋಟೋಗಳನ್ನು ಅನಾವರಣ ಮಾಡುತ್ತಾರೆ. (ನಗು).

ಶ್ರೀ ಬಿ. ಹುಚ್ಚೇಗೌಡ.—ಇನ್ನೊಂದು ವಿಚಾರ ಹೇಳುತ್ತೇನೆ. ನಮ್ಮಲ್ಲಿ ಸುಮಾರು 2000 ಟಿನ್ನುಗಳಷ್ಟು ಮಿಲ್ಕ್‌ಪೌಡರು ಬಂದು ಇವನ್ನು ಸೊಸೈಟಿ ಮೂಲಕ ಹಂಚಬೇಕೆಂದು ಬಂದಾಗ ಏನೋ ಒಂದುನೂರು ಟಿನ್ನುಗಳಷ್ಟು ಹಂಚಿಕೆಯಾಯಿತು. ಇನ್ನು ಇತರರ್ಯಾರಾದರೂ ಬಂದು ಕೇಳಿದರೆ ಅದಕ್ಕೆ ಡೆಪ್ಯುಟೀ ಕಮಿಷನರಿಂದ ಪರ್ಮಿಟ್ಟನ್ನು ತರುವಂಥವರಿಗೆ ಮಾತ್ರ ಕೊಡುತ್ತೇವೆಂದು ಹೇಳಿದ್ದರಿಂದ ಎಷ್ಟೋ ಜನ ಅದನ್ನು ತೆಗೆದುಕೊಳ್ಳಲು ಹೋಗಲೇ ಇಲ್ಲ. ಆದರೆ ಆಗ ತಮಗೆ ಬೇಕಾದವರಿಗೆ ಮಾತ್ರ ನಾಲ್ಕೈದು ರೂಪಾಯಿಗೊಂದರಂತೆ ಒಬ್ಬರಿಗೇನೆ ಸುಮಾರು ಎಂಟನೂರು ಟಿನ್ನುಗಳಷ್ಟು ಮಾರಿದರು. ಇದನ್ನು ಇವೊತ್ತಿನ ವರೆಗೂ ಪ್ರೊಸೀಡು ಮಾಡಿ ಯಾವ ವಿಧವಾದ ಎನ್‌ಕ್ವೈರಿಯನ್ನೂ ಮಾಡಲಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಾಡುವುದರಿಂದ ಪ್ರಯೋಜನವೇನುತಾನೇ ಆಗುತ್ತದೆ ?

ಶ್ರೀ ಬಿ. ಹುಚ್ಚೇಗೌಡ.—ನಾವು ಹೇಳುತ್ತಿದ್ದರೂ ಇವೊತ್ತಿನವರೆಗೂ ತನಿಖೆ ಮಾಡಿ ಇದರ ಬಗ್ಗೆ ಆಡಿಟ್ಟಿನ ವರದಿಯನ್ನು ತರಿಸಿಕೊಂಡು ನೋಡಿಲ್ಲ. ಅಲ್ಲದೆ ಇಲಾಖೆಯುಲ್ಲಿರುವ ಯಾರನ್ನೂ ಕಳುಹಿಸಿ ಚೆಕ್ ಮಾಡಲಿಲ್ಲ.

ಇನ್ನೂ ಒಂದು ಹೇಳುತ್ತೇನೆ. ಈಗ ಒಂದು ಸ್ಕೀಮೆಂದು ಮಾಡುತ್ತಾರೆ. ಅದಕ್ಕೆ ಬೇಕಾಗು ವಂತಹ ಸ್ಟಾಫ್‌ನ್ನೆಲ್ಲಾ ನೇಮಕ ಮಾಡಿಕೊಳ್ಳುತ್ತಾರೆ. ಅರ್‌ಬನ್ ಏರಿಯಾದಲ್ಲಿ ಎಲ್ಲಿ 50,000 ಜನಸಂಖ್ಯೆಗಿಂತ ಹೆಚ್ಚಾಗಿದೆಯೋ ಅಂತಹ ಕಡೆಗಳಲ್ಲಿ 240 ಪ್ರೈಮರಿ ಸೊಸೈಟಿಗಳನ್ನು 12 ಹೋಲ್‌ಸೇಲ್ ಸ್ಟೋರ್ಸ್‌ಗಳನ್ನು ಮಾಡಬೇಕೆಂದು ಇದಕ್ಕೋಸ್ಕರ ಒಬ್ಬರು ಜಾಯಿಂಟು ಡೈರೆಕ್ಟರು ಮತ್ತಿತರ ಸಿಬ್ಬಂದಿಗಾಗಿ ಎಂದು 2,60,000 ರೂಪಾಯಿಗಳಷ್ಟು ವೆಚ್ಚ ಬಂದಿದೆ. ಇದಕ್ಕಾಗಿ ಈಗಿ ರುವ ಡೈರೆಕ್ಟರುಗಳು ; ಜಾಯಿಂಟು ಡೈರೆಕ್ಟರುಗಳು ಏನುಮಾಡುತ್ತಿದ್ದಾರೆ. ಹಾಗಿದ್ದರೂ ಎಷ್ಟೋ ಜನ ಡೈರೆಕ್ಟರುಗಳೂ, ಜಾಯಿಂಟು ಡೈರೆಕ್ಟರುಗಳು ಇದ್ದರೂ ಈಗ ಒಂದು ಸ್ಕೀಮನ್ನು ಮಾಡಿ ಅಲ್ಲಿ ಇಷ್ಟು ಜನರನ್ನು ನೇಮಕ ಮಾಡುವುದರಿಂದ ಏನು ಪ್ರಯೋಜನವಾಗುತ್ತದೆ ?

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನು ಮಾಡಿ ಜನರಿಗೆ ಸೌಕರ್ಯ ಮಾಡಿಕೊಡಬೇಕೆಂದು ತಂದರು. ಆದರೆ ಇಲ್ಲಿ ವ್ಯಾಪಾರ ಮಾಡಲು ಬರುವವರು ಐದುಕಡೆ ರಶೀತಿ ತೆಗೆದು ತೆಗೆದು ಕೊಂಡು ಹೋಗಬೇಕು. ಇದಲ್ಲದೆ ಸೇಲ್ಸ್‌ಟ್ಯಾಕ್ಸ್ ಬೀಳುತ್ತದೆ. ಇದನ್ನೆಲ್ಲಾ ತಪ್ಪಿಸಿಕೊಳ್ಳ ಬೇಕೆಂದು ಜನ ಈ ಮಾರುಕಟ್ಟೆಯ ಹೊರಗಡೆಯೇ ಎಲ್ಲವನ್ನೂ ಮಾರಿಬಿಡುತ್ತಾರೆ. ಇದರಿಂದ ಜನಕ್ಕೆ ಅನುಕೂಲ ಮಾಡಬೇಕೆಂದು. ವ್ಯಾಪಾರ ಮಾಡುವ ಜನಕ್ಕೆ ಸರಿಯಾದ ಕಾಂಪಿಟಿಷನ್ ದೊರೆತು ಮಾರಲು ಅನುಕೂಲ ಮಾಡುವುದಕ್ಕೋಸ್ಕರ ಇಷ್ಟೆಲ್ಲಾ ಮಾಡುತ್ತಿದ್ದಾರೆ. ಆ ಮೇಲೆ ನೀರಾ ಮತ್ತು ಪಾಣೀ ಬೆಲ್ಲ ತಯಾರಿಕೆ ಬಗ್ಗೆ ಏನೇನೋ ಹೇಳಿದ್ದಾರೆ. ನೀರಾ ತೆಗೆ ಯುವ ಬಗ್ಗೆ ಲೈಸೆನ್ಸ್ ತೆಗೆದುಕೊಳ್ಳುವವರಿಗೆ ಅಷ್ಟೇ ಅನುಕೂಲವಾಗುತ್ತದೆ. ಉಳಿದವರಿಗೆ ಅನು ಕೂಲವಿಲ್ಲ. ನೀರಾ ಸಹ ಸರಿಯಾಗಿ ದೊರೆಯುವುದಿಲ್ಲ. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವದಾದರೆ, ಅದಕ್ಷತೆಗೆ ಮಾರ್ಗಮಾಡಿಕೊಟ್ಟು ಹಾಗಿದೆ. ಮರ್ಯಾದಸ್ಥರು ಬೀದಿಗಳಲ್ಲಿ ತಿರು ಗಾಡುವುದು ಸಾಧ್ಯವಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ಮೊನ್ನೆತಾನೆ ತಾನೆ ಒಂದು ಊರಿನಲ್ಲಿ 12ಜನ ಪೋಲೀಸರು ಇದ್ದರೂ ಸಹ ಬೀದಿಗಳಲ್ಲಿ ತಿರುಗುವುದಕ್ಕಾಗುವದಿಲ್ಲ ಎಂಬುದು ಕಂಡುಬಂದಿದೆ. ಜನರಿಗೆ ಸಂರಕ್ಷಣೆಯಿಲ್ಲ, ಪೋಲಿಸ್ ಅಧಿಕಾರಿಗಳಿಗೆ ತಿಳಿಸಿದರೆ ಏನೂಕ್ರಮ ತೆಗೆದುಕೊಳ್ಳುವುದಿಲ್ಲ. ಪುಂಡ ಪೋಕರಿಗಳನ್ನು ಅರೆಸ್ಟುಮಾಡುವದಿಲ್ಲ. ಗಲಾಟೆಯಾದ ಸ್ಥಳಕ್ಕೆ ಪೋಲೀಸರು ಬಂದರೂ ಸಹ ಅವರು ಏನೂ ಮಾಡುವದಿಲ್ಲ. ಅಷ್ಟು ಬೇಜವಾಬ್ದಾರಿಯಿಂದ ಪೋಲಿಸ್ ಇಲಾಖೆಯ ಕೆಲಸ ನಡೆದಿದೆ. ಪೋಲಿಸರಿಗೆ ದೂರು ಹೇಳುವುದು ಸಾಧ್ಯವಿಲ್ಲ, ಒಂದು ವೇಳೆ ಹೇಳಿ ದರೂ ಅದರಿಂದ ಏನೂ ಪ್ರಯೋಜನವಾಗುವದಿಲ್ಲ. ಪೋಲಿಸ್ ಇಲಾಖೆಯಲ್ಲಿ ಹತೋಟಿ ಇಲ್ಲ.

2.30 P. M.

ತುಮಕೂರು ಜಿಲ್ಲೆಯಲ್ಲಿ ಹಣದುರುಪಯೋಗಪಡಿಸಿಕೊಂಡ ಮೂಲಕ 66 ಸೊಸೈಟಿಗಳು ಲಿಕ್ವಿ ಡೇಷನ್‌ನಲ್ಲಿ ಬಿದ್ದುಹೋಗಿವೆ. ಕಾಲಕಾಲಕ್ಕೆ ಸರಿಯಾಗಿ ಆಡಿಟ್ ಆಗುತ್ತಾ ಇಲ್ಲ. ಆಡಿಟರ್ ನೇಮಕಮಾಡಿದ್ದರೂ ಸಹ ಏನೂ ಪ್ರಯೋಜನವಾಗಿಲ್ಲ, ಡಿಫಾಲ್ಟರ್ ಅದಂಥವರನ್ನು ಈ ಸೊಸೈಟಿಗಳ ಡೈರೆಕ್ಟರ್ ಆಗಿ ನೇಮಕಮಾಡುತ್ತಾರೆ. ಆಡಳಿತ ಈ ರೀತಿ ನಡೆದಿದೆ. ಆದ್ದರಿಂದ ನಾವು ಹೇಳುವ ಇಂಥ ಮಾತನ್ನು ಲಘುವಾಗಿ ತೆಗೆದುಕೊಳ್ಳಬಾರದು. ಸರಕಾರದ ಯೋಗ್ಯತೆ ಎಷ್ಟಿದೆ ಎನ್ನುವುದು ಜನಗಳಿಗೆ ಗೊತ್ತಿದೆ. ಇದರಿಂದ ದೇಶಕ್ಕೆ ಕ್ಷೇಮವಿಲ್ಲ. ಇಂಥ ಸರಕಾರ ಇರುವವರೆಗೆ ಅನುಭವಿಸ ಬೇಕಾದುದು ಜನರ ಹಣೇಬರಹ.

ಮೂರನೇ ಯೋಜನೆಯ ಅವಧಿಯಲ್ಲಿ ಮೈಸೂರು ರಾಜ್ಯಕ್ಕೆ ಮೈನರ್ ಪೋರ್ಟ್ಸ್ ಡೆವಲಪ್ ಮೆಂಟ್ ವಿಚಾರದಲ್ಲಿ 280.3 ಲಕ್ಷ ರೂಪಾಯಿ ಖರ್ಚಾಗುವ ಅಂದಾಜಿದೆಂದೂ ಮತ್ತು ಮೊದಲಿನ ಎರಡು ವರ್ಷಗಳಲ್ಲಿ 55ಲಕ್ಷ ರೂಪಾಯಿ ಖರ್ಚಾಗಿದೆ ಎಂಬು ಹೇಳಿದ್ದಾರೆ ನಮ್ಮಲ್ಲಿರುವ ಎಲ್ಲ ಪೋರ್ಟ್ಸ್ ಅಭಿವೃದ್ಧಿಯಾಗಬೇಕಾದುದು ಅಗತ್ಯ. ಈಗ ಒಂದಾದರೂ ಕೂಡ ಉತ್ತಮಸ್ಥಿತಿಯಲ್ಲಿಲ್ಲ. ಪ್ರತಿಯೊಂದನ್ನು ಅಭಿವೃದ್ಧಿಪಡಿಸಬೇಕೆಂದು ಸೂಚನೆ ಮಾಡುತ್ತೇನೆ.

ಈ ವರ್ಷ ರಾಜ್ಯದ ಸಾಲ ಹೆಚ್ಚಾಗಿದೆ, ಅದರಜೊತೆಗೆ ಬಡ್ಡಿಸಹ ಏರುತ್ತಿದೆ. ಸುಮಾರು ಎರಡು ಕೋಟಿ ರೂಪಾಯಿ ಹೆಚ್ಚಾಗುತ್ತದೆಂದು ಲೆಕ್ಕಹಾಕಬಹುದು. ಸರಕಾರಿ ನಿವೃತ್ತ ನೌಕರರಿಗೆ ಕೊಡುವ ಪೆನ್‌ಷೆನ್ ಒಂದು ವರ್ಷಕ್ಕೆ 50ಲಕ್ಷ ರೂಪಾಯಿ ಜಾಸ್ತಿಯಾಗುತ್ತದೆ.

Mr. SPEAKER.—Is he suggesting that Pensions are paid wrongly ?

ಶ್ರೀ ಬಿ. ಹುಚ್ಚೇಗೌಡ.—ನಿವೃತ್ತ ನೌಕರರಿಗೆ ಪೆನ್‌ಷನ್ ಕೊಡಬೇಕೆಂದು ನಾನು ಹೇಳುತ್ತೇನೆ. ಯಾವರೀತಿ ಆಡಳಿತದಲ್ಲಿ ಎಷ್ಟರಮಟ್ಟಿಗೆ ಮಿತವ್ಯಯ ಸಾಧಿಸಬೇಕು ಎನ್ನುವುದನ್ನು ಪರಿಶೀಲನೆ ಮಾಡಿ ಕಾರ್ಯಗತಮಾಡುವುದಕ್ಕೆ ಪ್ರಯತ್ನಮಾಡಬೇಕಾದುದು ಅಗತ್ಯ. ನೀವು ಈಗ ಯಾವುದನ್ನು ಕಡಿಮೆ ಮಾಡಿರುತ್ತೀರಿ? ಮಂತ್ರಿಗಳು, ಉಪ ಮಂತ್ರಿಗಳು ಮನೆಯ ಬಾಡಿಗೆ 500-600 ರೂಪಾಯಿ ಕೊಡುತ್ತಿದ್ದೀರಿ. ಇದನ್ನು ಕೇಳಿದರೆ ಏನಾದರೂ ಒಂದು ಜವಾಬು ಕೊಡುತ್ತೀರಿ. ಈ ರೀತಿ ಖರ್ಚು ಹೆಚ್ಚಾಗುತ್ತಿದೆ. ನಾನು ಹೇಳುವುದು ಇಷ್ಟೇ. ಯಾವಾಗಲೂ ನಾವು ನಮ್ಮ ಹಾಸಿಗೆ ಇದ್ದಷ್ಟು ಕಾಲುಚಾಚಬೇಕು. ಸಾಲ ಜಾಸ್ತಿ ಮಾಡುವುದರಿಂದ ಬಡ್ಡಿ ದಿನೇ ದಿನೇ ಹೆಚ್ಚಾಗುತ್ತಿದೆ. ಇಂದು ಸುಮಾರು ಎರಡು ಕೋಟಿ ರೂಪಾಯಿಯಷ್ಟು ಏರಿರುತ್ತದೆ. ಇದರಿಂದ ನಮ್ಮ ರಾಜ್ಯದ ಆರ್ಥಿಕಸ್ಥಿತಿ ಕೆಡುತ್ತಿದೆ. ಸಾಲವಾಗಿದೆ ಎಂದರೆ ನೀರಾವರಿ ಯೋಜನೆ ಮುಂತಾದ ಅಸೆಟ್ಸ್ ಇದೆ ಎಂದು ಹೇಳುತ್ತೀರಿ, ಇದು ಸರಿಯಲ್ಲ ಈ ರೀತಿ ಸಾಲ ಜಾಸ್ತಿ ಮಾಡುವದರಿಂದ ಆರ್ಥಿಕ ಭದ್ರತೆ ಉಳಿಯುವದಿಲ್ಲ. ಇದಕ್ಕೆ ಸರಕಾರ ಹೆಚ್ಚು ಗಮನ ಕೊಡುವುದು ಅವಶ್ಯ. ರಾಜ್ಯದ ಹಿತದೃಷ್ಟಿಯಿಂದ ಲುಕ್ಸಾನ ಆಗದ ಹಾಗೆ ನೋಡಿಕೊಳ್ಳಬೇಕು. ಈಗ ನಮಗೆ ಸಾಲ ಇರತಕ್ಕದ್ದು 278 ಕೋಟಿ ರೂಪಾಯಿ, ಇಷ್ಟು ಸಾಲ ಏತಕ್ಕೋಸ್ಕರ ಮಾಡಬೇಕಾಯಿತು? ತುರ್ತು ಪರಿಸ್ಥಿತಿಯ ಮೂಲಕ ರಸ್ತೆ ರಚನೆಕಾರ್ಯ ನಿಲ್ಲಿಸಿದ್ದೇನೆ. ಇರಿಗೇಷನ್ ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಿ. ಮೋಟಾರ ವೆಹಿಕಲ್ಸ್ ಟ್ಯಾಕ್ಸನಿಂದ ಬರತಕ್ಕ ಹಣವನ್ನು ರಸ್ತೆ ರಚನೆ ಕೆಲಸಕ್ಕೆ ಹಾಕಿದರೆ ಸಾಕು.

ಇನ್ನು ವಿದ್ಯುಚ್ಛಕ್ತಿ ಯೋಜನೆಗೆ 14-15ಕೋಟಿ ರೂಪಾಯಿ ಕೊಟ್ಟಿದ್ದೀರಿ. ಹೊಸ ಟ್ಯಾಕ್ಸ ಹಾಕಿಲ್ಲ, ಸಾಲ ಮಾಡಲಿಲ್ಲ ಎಂದು ಹೇಳುತ್ತೀರಿ. ಕೇಂದ್ರ ಸರಕಾರದಿಂದ 7ಕೋಟಿ ರೂಪಾಯಿ ತೆಗೆದುಕೊಳ್ಳುತ್ತೀರಿ. ಟ್ಯಾಕ್ಸ ಹಾಕಿಲ್ಲವೆಂದು ಹೇಗೆ ಹೇಳುವುದು ? ಲ್ಯಾಂಡ್ ರೆವೆನ್ಯೂ ಮೇಲೆ ಸರಚಾರ್ಜ್ ಹಾಕಿ ನಾಲ್ಕುಕೋಟಿ ರೂಪಾಯಿ ತೆಗೆದುಕೊಳ್ಳುತ್ತೀರಿ, ಸೇಲ್ಸ್‌ಟ್ಯಾಕ್ಸ್ ಇದೆ. ನೀರಾವರಿ ಮೇಲೆ ಟ್ಯಾಕ್ಸ್ ಇದೆ. ಕೇಂದ್ರ ಸರಕಾರದಿಂದ ನಮಗೆ ದೊರೆಯಬೇಕಾದ ನಮ್ಮ ಪಾಲು ಸರಿಯಾಗಿ ಬರುತ್ತದೆಯೆ ? ಟ್ಯಾಕ್ಸ್ ಹಾಕಿಲ್ಲವೆಂದು ಅಂದರೆ ಏನು ಅರ್ಥ ?

ನಿನ್ನೆತಾನೇ ಇನ್ನೂ ಬಿಲ್ಲು ಪಾಸುಮಾಡಿದ್ದೇವೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮೊರಾರ್ಜಿಯವರು ಇವರಿಗೆ ಟ್ಯಾಕ್ಸ್ ಹಾಕುವುದಕ್ಕೆ ಅವಕಾಶ ಕೊಡಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈವಾಗ ಇವತ್ತು 4ಕೋಟಿ ರೂಪಾಯಿ ಲ್ಯಾಂಡ್ ರೆವಿನ್ಯು ಸೆಸ್ ಇವರಿಗೆ ಕೊಡುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಕೊಡಬಾರದು ಎಂದು ಮಾಡಿದ್ದೀರಾ ?

ಶ್ರೀ ಬಿ. ಹುಚ್ಚೇಗೌಡ.—ಕೊಟ್ಟಿದ್ದನ್ನು ಸರಿಯಾಗಿ ವಿನಿಯೋಗಮಾಡಿ. ಕೊಡುವುದಿಲ್ಲ ಅನ್ನುವವರು ಯಾರು ? ನೀವು ಎಲ್ಲಿಯವರೆಗೆ ಸರಿಯಾಗಿ ಖರ್ಚುಮಾಡುವುದಿಲ್ಲವೇ, ಅಲ್ಲಿಯವರೆಗೆ ವಿರೋಧ ತೋರಿಸುತ್ತೇವೆ.

ಸ್ಪೆಷಲ್ ಡಿವಿಜನ್ನಿಗೆ ಇರುವುದು 175ಮೈಲಿ ಮಾತ್ರ ಆದರೂ ಅದಕ್ಕೆ ಎಕ್ಸಿಕ್ಯೂಟೀವ್ ಇಂಜನಿಯರುಗಳು ಮತ್ತು ಒಬ್ಬ ಸರ್ಕಲ್ Superintending Engineer. ಇನ್ನೊಂದು ವಿಶೇಷವೇನೆಂದರೆ Superintending Engineer Officeಗೆ 52ಜನ ಸಿಬ್ಬಂದಿ ಸ್ಯಾಂಕ್ಷನ್ ಮಾಡಿದ್ದಾರೆ. 52ಜನಕ್ಕೆ ಎಲ್ಲಿ ಮನೆ ದೊರೆಯುವುದು ? ಅದರಜೊತೆಗೆ, 170ಮೈಲಿಗೆ ನಾಲ್ಕು Executive Engineerಗಳ ಹಿಂದೆ ಒಬ್ಬ Executive Engineer ನೋಡಿಕೊಳ್ಳುತ್ತಿದ್ದ ಒಂದು ಡಿಸ್ಟ್ರಿಕ್ಟಿನ ಜವಾಬ್ದಾರಿ ಇವರಿಗಿಲ್ಲ. ಅಂತಹುದರಲ್ಲಿ 13 Assistant Engineerಗಳೂ ನೂರಾರು Overseerಗಳು, Sub-Overseerಗಳು: ಇದಕ್ಕೆ ಪರ್ಯವಸಾಯವೇ ಇಲ್ಲ. ಈರೀತಿ ಹಣ ಖರ್ಚಾಗುತ್ತಾ ಹೋದರೆ ಗತಿಏನು ? ಒಬ್ಬರಿಗೆ ಕೆಲಸಕೊಡುವ ಉದ್ದೇಶದಿಂದ ಹೊಸ ಸರ್ಕಾರಗಳನ್ನು ನಿರ್ಮ

(ಶ್ರೀ ಟಿ. ಹುಚ್ಚೇಗೌಡ)

ಸುತ್ತಿದ್ದೇವೆಯೇ ಹೊರತು, ಬೇರೆ ಉದ್ದೇಶದಿಂದ ಅಲ್ಲ. ತಿಪಟೂರಿನಲ್ಲಿ ಮೂರುಜನ Executive Engineerಗಳು ಇದ್ದಾರೆ? ಮೊದಲು ಡಿಸ್ಟ್ರಿಕ್ಟಿಗೆ ಒಬ್ಬರು ಇರುತ್ತಿರಲಿಲ್ಲ. ಇಷ್ಟು ಸಿಬ್ಬಂದಿಗೆ ಆಫೀಸು, ಫರ್ನಿಚರ್, ಮನೆ ಗ್ಯಾರೇಜು ಎಲ್ಲಿ ಹುಡುಕುತ್ತೀರ !

ಇನ್ನು ವೇಸ್ಟೇಜ್ ವಿಚಾರ ಹೇಳಬೇಕಾಗಿದೆ. ಮಂತ್ರಿಗಳ ಟೂರಿನಿಂದ ಆಗುವ ಖರ್ಚಿರಲಿ. ಒಬ್ಬೊಬ್ಬ ಮಂತ್ರಿಗಳ ಟೂರ್ ಪ್ರೋಗ್ರಾಂ ಕಾಪಿಗಳು 185 ಹೋಗುತ್ತಿವೆ. ಈ ಟೂರಿನಿಂದ ಆಗುವ ಪ್ರಯೋಜನ ಪ್ರೋಗ್ರಾಂ ಪೇಪರಿನ ಬೆಲೆಯಷ್ಟು ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಒಂದು ಡಿಸ್ಟ್ರಿಕ್ಟಿಗೆ 10 ಜನ ಮಂತ್ರಿಗಳು ಬಂದರೆ 1,850 ಪುಟ ಕಾಗದ ಖರ್ಚಾಗುತ್ತದೆ ; ಹೋಗದೆ ಇದ್ದರಾದರೂ ಅಷ್ಟು ಸ್ಟೇಷನರಿ ಉಳಿತಾಯಮಾಡುತ್ತೀರಾ.

ಎ. ಜಿ. ಆರ್. ಕಮಿಟಿಯವರು ಅನೇಕ ಎಕಾನಮಿ ಸಲಹೆಗಳನ್ನು ಕೊಟ್ಟಿದ್ದಾರೆ. ವೆಹಿಕಲ್ಲು ಗಳು 78 ಇವೆ. ಇವತ್ತು ಅವುಗಳ ಸಂಖ್ಯೆ 1,000ಕ್ಕೆ ಮೀರಬಹುದು. ಇಷ್ಟು ವೆಹಿಕಲ್ಲುಗಳ ಅವಶ್ಯಕತೆ ಏನು ? ಇವತ್ತು ಹಳೆ ವೆಹಿಕಲ್ಲುಗಳು 10ರೂಪಾಯಿ ಮೇಲೆ ಹೋಗಲಾರವು ; ಅವು ಗಳನ್ನು ಅಷ್ಟು ಹಾಳುಮಾಡಿದ್ದಾರೆ. ಸರ್ಕಾರದವರಲ್ಲದೆ, ಬೇರೆ ಖಾಸಗಿಯವರು ಒಂದು ಕೆಲಸ ಮಾಡಿದರೆ ಎಷ್ಟು ಖರ್ಚಾಗುತ್ತದೆ, ಇಷ್ಟು Executive Engineerಗಳು, Superintending Engineerಗಳು ವಗೈರೆ ಕೆಲಸಮಾಡಿದರೆ ಎಷ್ಟು ಖರ್ಚಾಗುತ್ತದೆನ್ನುವುದನ್ನು ಯೋಚನೆ ಮಾಡ ಬೇಕು.

ಇನ್ನೂ ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ, ಜಾತ್ಯಾತೀತ ಹಾಸ್ಟಲುಗಳನ್ನು ತೆಗೆದುಕೊಳ್ಳಬೇಕು. ನಮ್ಮ ತುಮಕೂರನ್ನೇ ತೆಗೆದುಕೊಂಡರೆ ಆದಿಕರ್ಣಾಟಕರಲ್ಲಿರುವ ನಾಲ್ಕು ಉಪ ಜಾತಿಗಳಿಗೆ ಒಂದೊಂದರಂತೆ ನಾಲ್ಕು ಹಾಸ್ಟಲುಗಳನ್ನು ಮಾಡಿದ್ದಾರೆ ! ಆದಿ ಜಾಂಬವರಿ ಗೊಂದು, ಜನರಲ್ ಆದಿ ಕರ್ಣಾಟಕ ಹಾಸ್ಟಲ್ ಒಂದು, ಹೀಗೆ 4 ಉಪ ಜಾತಿಗೂ ಬೇರೆ ಬೇರೆ ಮಾಡಿದ್ದಾರೆ. ಹೀಗೆಮಾಡಿದರೆ, ಇನ್ನು ಯಾವರೀತಿಯಲ್ಲಿ ಬಾಕಿಯವರನ್ನು ಒಟ್ಟುಗೂಡಿಸಿ, ಏಕೀ ಕರಣ ಮಾಡುತ್ತೀರ ? ಜಾತಿ ಮನೋಭಾವವನ್ನು ಹೇಗೆ ನಿರ್ಮೂಲ ಮಾಡುತ್ತೀರಿ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಯಾವುದಾದರೂ ಒಂದು ತತ್ವವನ್ನು ಅಂಗೀಕರಿಸಿದರೆ ಅದನ್ನು ಅನು ಷ್ಠಾನಕ್ಕೆ ತರಬೇಕು. ಆದರೆ ಒಂದರಲ್ಲಿ ಒಂದೂ ಅನುಷ್ಠಾನದಲ್ಲಿಲ್ಲ. ಇನ್ನುಮುಂದಾದರೂ ನಿಮ್ಮ ನೀತಿಯನ್ನು ಜಾರಿಗೆ ಕೊಡುವುದನ್ನು ತಿದ್ದಿಕೊಂಡು, ಒಂದೇ ಹಾಸ್ಟಲ್ ಸಾರ್ವಜನಿಕವಾಗಿ ಇರಲಿ; ಅದು ಎಲ್ಲಾ ಕಮ್ಯೂನಿಟಿಗಳಿಗೂ ಇರಬೇಕು. ಬರೀ ನಿಮ್ಮ ಜಾತಿಗೇ ನಾಲ್ಕು ಹಾಸ್ಟಲುಮಾಡಿದರೆ, ಇದಕ್ಕೆ ಕೊನೆಮೊದಲು ಎಲ್ಲಿ ? ಇಷ್ಟೇ ಅಲ್ಲದೆ ಆದಿ ಕರ್ಣಾಟಕರಲ್ಲಿ ಎಡಗೈ ಬಲಗೈ ಎಂದಿದೆ ; ಅವ ರಿಗೆ ಬೇರೆ ಪ್ರತ್ಯೇಕವಾಗಿ ಹಾಸ್ಟಲು ಕೊಡುತ್ತಾ ಇದ್ದೀರಿ ಯಾವಕಾಲಕ್ಕೆ ಇದನ್ನೆಲ್ಲಾ ನಿರ್ಮೂಲ ಮಾಡುತ್ತೀರೋ ಗೊತ್ತಿಲ್ಲ.

ಮಂತ್ರಿಗಳ ಟೂರು ಬಗ್ಗೆ ಮೊದಲಿನಿಂದಲೂ ಹೇಳುತ್ತಿದ್ದೇನೆ ? ಪುನಃ ಹೇಳಬೇಕಾಗಿದೆ. ಮಂತ್ರಿಗಳು ಟೂರು ಹೋದರೆ ಒಂದುಕಡೆ 2–3ದಿವಸ ನಿಲ್ಲಲಿ, ಸಾವಧಾನವಾಗಿ ಎಲ್ಲಾ ವಿಚಾರ ತಿಳಿದುಕೊಳ್ಳಲಿ. ಇಲ್ಲಿಂದ ಹೋಗಿ, ಒಂದು ಜಾಗದಲ್ಲಿ ಅರ್ಧಘಂಟೆ ಇರುವುದಿಲ್ಲ. ತಕ್ಷಣ ಇಲ್ಲಿಗೆ ಓಡಿಬಂದುಬಿಡುತ್ತಾರೆ. ಈರೀತಿ ಟೂರ್ ಹೋದರೆ ಎಷ್ಟು ಕಾಲಕ್ಕೆ ನಮ್ಮದೇಶದಲ್ಲಿರತಕ್ಕ ಕಷ್ಟ ಸುಖ ಅನುಭೋಗಕ್ಕೆ ಬರುತ್ತದೆ, ಯಾವಾಗ ಜನರಿಗೆ ಸೌಕರ್ಯವನ್ನು ಕಲ್ಪಿಸಿ ಕೊಡುತ್ತೀರಾ.

ನದಿಗಳ ನೀರಿನ ಹಂಚಿಕೆ ಇವತ್ತು ಆಗಿಲ್ಲ. ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಹಿಂದೆ 1924 ರಲ್ಲಿ ಕೂಡ ನಮ್ಮದೇಶಕ್ಕೆ ಅನ್ಯಾಯ ನಡೆದಿದೆ. ಹಿಂದೆ ಆರ್ಬಿಟ್ರೇಷನ್ ತೀರ್ಮಾನಕ್ಕೆ ವಿರೋಧ ಮಾಡಿ, ಮದ್ರಾಸಿನವರು ಅದಕ್ಕೆ ಒಪ್ಪಲಿಲ್ಲ. ಆರ್ಬಿಟ್ರೇಷನ್ನಿನಂತೆ ಮೈಸೂರು ನಡೆದುಕೊಂಡಿತು. ಆದರೆ ಮದ್ರಾಸಿನವರು influence ಬೀರಿದರು ; ಮೈಸೂರಿನ ಹಕ್ಕನ್ನು ಅದಷ್ಟು ಮೊಟಕುಮಾಡಿ ದರು. ಇಂತಹುದರಲ್ಲಿ ನಮಗೆ ಕೇಂದ್ರದಲ್ಲಿ ಪ್ರಭಾವ ಬೀರುವ ಶಕ್ತಿ ಇಲ್ಲ. ಒಳಒಳ ಗೊಂದಲ, ಗ್ರೂಪುಗಳಿಂದ ಕೆಲವು ಸರ್ಕಾರದ ಹತ್ತಿರ ನಮ್ಮ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಕಾಪಾಡಿ ಕೊಳ್ಳುವುದರಲ್ಲಿ ಹಿಂದಿದ್ದೇವೆ. ಉದ್ದಕ್ಕೂ ಬಾಕಿ ಪ್ರಾಂತ್ಯದವರು ಮುಂದೆಹೋದಲ್ಲಿ, ನಾವು ಅವರ ಹಿಂದೆಹೋಗುತ್ತೇವೆ, ಅವರು ಕೆಲಸ ಶುರುಮಾಡಿದಮೇಲೆ ನಾವು ಕೆಲಸ ಶುರುಮಾಡುತ್ತಾ ಇದ್ದೇವೆ. ಆದ್ದರಿಂದ ಈಗ ನಾವು ನಮಗೆ ನ್ಯಾಯವಾಗಿ ಕೃಷ್ಣಗೋದಾವರಿ ನೀರಿನಲ್ಲಿ ದೊರಕ ಬೇಕಾಗಿರತಕ್ಕಂಥ ಭಾಗವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿ, ನಮ್ಮ ಹಕ್ಕು ಬಾಧ್ಯತೆ ಯನ್ನು ಸಾಧಿಸಿಕೊಳ್ಳಬೇಕು. ಬರೀ ಮಾತಿನಲ್ಲಿಯೇ ಮುಕ್ತಾಯ ಮಾಡಬಾರದು.

ವ್ಯವಸಾಯಗಾರರಿಗೆ ಪಂಪುಸೆಟ್ಟನ್ನು ಈವಾಗ ಕೊಡತಕ್ಕಂಥದ್ದನ್ನು ಒಳ್ಳೆಯದು. ಇದರಂತೆ ಟ್ರಾಕ್ಟರುಗಳನ್ನೂ ಕೊಡಬೇಕು, ಬೇಕಾದರೆ ಅರ್ಧಹಣ ತೆಗೆದುಕೊಳ್ಳಿ. ಈಗ ಟ್ರಾಕ್ಟರ್ ಗೆದು

ಕೊಳ್ಳಬೇಕಾದರೆ 40ಸಾವಿರ ರೂಪಾಯಿ ಸ್ವತ್ತಿನ ಸೆಕ್ಯೂರಿಟಿ ಕೊಡಬೇಕು. ಟ್ರಾಕ್ಟರಿಗೆ 25-30ಸಾವಿರ ರೂಪಾಯಿ ಕೊಟ್ಟರೆ ಟ್ರಾಕ್ಟರನ್ನು ಆಧಾರಮಾಡಿಕೊಡಬೇಕು. ಇಂಥ ಪರಿಸ್ಥಿತಿ ಇದೆ. ನೀವು ಅರ್ಧ ಭಾಗ ಹಣತೆಗೆದುಕೊಳ್ಳಬಹುದು ; ಆದರೆ ಹೆಚ್ಚು ತೊಂದರೆ ಕಿರುಕುಳವಿಲ್ಲದಂತೆ ತೆಗೆದುಕೊಳ್ಳಬೇಕು.

ಆಮೇಲೆ ಹಾರ್ಟಿಕಲ್‌ಚರ್ ಡಿಪಾರ್ಟ್‌ಮೆಂಟನ್ನು ಬೇರೆ ಮಾಡಿದ್ದಕ್ಕೆ ಶ್ರೀಮಾನ್ ಅಪ್ಪಣ್ಣನವರು ವಿರೋಧ ಮಾಡಿದರು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಉದ್ಯಾನವನವನ್ನು ಮಾಡುತ್ತಾ ಇದ್ದಾರೆ; ಬೇಕಾದಷ್ಟು ಹಣ್ಣು ಹಂಪಲು ಬೆಳೆಯಲು ವ್ಯವಸ್ಥೆ ಮಾಡುತ್ತಾ ಇದ್ದಾರೆ. ಇದು ಅವಶ್ಯವಾಗಿ ಪ್ರತ್ಯೇಕವಾಗಿರಬೇಕು ; ಸರ್ಕಾರ ಈ ಇಲಾಖೆಯನ್ನು ಬೇರ್ಪಡಿಸಿದ್ದು ಸ್ವಾಗತಿಸಬೇಕಾದ ವಿಚಾರ.

ಈಗ ಸರ್ಕಾರದ ಮೇಲೆ ರಿಟ್ ಪೆಟಿಷನ್ನುಗಳು ಬಹಳ ಹೋಗುತ್ತಿವೆ ; ಅವರು ಹೋಗಲಿ ಎಂದು ಹೇಳುತ್ತಾರೆ. ಸರ್ಕಾರದಿಂದ ನ್ಯಾಯವಾಗಿ ಸಲ್ಲಬೇಕಾದ ಹಕ್ಕು ಬಾಧ್ಯತೆಗಳನ್ನು ದಕ್ಕಿಸಿಕೊಳ್ಳಬೇಕಾದರೆ, ಕೋರ್ಟು ಕಚೇರಿ ಹತ್ತಿ ದಕ್ಕಿಸಿಕೊಳ್ಳಬೇಕಾಗಿದೆ. ಎಲ್ಲ ವಿಚಾರದಲ್ಲಿಯೂ ಕೂಡ ಸರ್ಕಾರ ಮನಸೋ ಇಚ್ಛೆ ಆರ್ಡರ್ ಮಾಡಿ, ಒಬ್ಬ ಲಾಯರಿಗೆ 25–30 ಸಾವಿರ ರೂಪಾಯಿ ವರೆಗೆ ಖರ್ಚುಮಾಡಿ, ಸಂಸ್ಥಾನದ ಬೊಕ್ಕಸ ಅನ್ಯಾಯವಾಗಿ ಖಾಲಿಯಾಗುತ್ತದೆ. ಇದರಿಂದ ಜನಗಳಿಗೆ ಕೂಡ ಸಾವಿರಾರು ರೂಪಾಯಿ ಕೋರ್ಟಿಗೆ ಖರ್ಚಾಗಿ, ತೊಂದರೆಯಾಗುವ ರೀತಿ ಸರ್ಕಾರ ಹೋಗಬಾರದು. ಸರ್ಕಾರದ ವಿರುದ್ಧ ಸಾವಿರಾರು ರಿಟ್ ಪೆಟಿಷನ್ನುಗಳು ಹೋಗಿರತಕ್ಕಂಥಾದ್ದು ವ್ಯಸನ ಕರವಾದ ವಿಚಾರ. ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ.

Mr. SPEAKER.—I would like to know whether it is desirable to have 'Tea-break' or not.

Sri B. D. JATTI (Minister for Finance).—Sir, it is necessary to have 'Tea-break'.

† ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ, ಸರ್ಕಾರದವರು ಈ ಸಭೆಯ ಮುಂದೆ 1963-64ನೇ ವರ್ಷದ ಬಜೆಟನ್ನು ಇಟ್ಟಿದ್ದಾರೆ. ಈ ಪ್ರಜಾ ಪ್ರಭುತ್ವದಲ್ಲಿ ಯಾರೇ ರಾಜ್ಯ ವಾಳುತ್ತಾ ಇರಲಿ ಅವರು ಇಟ್ಟಂಥಾ ಒಂದು ಬಜೆಟ್ ಪಟ್ಟಿಯನ್ನು ಯಾರು ರಾಜ್ಯ ವಾಳುತ್ತಾರೆಯೋ ಆ ಪಕ್ಷದವರು ಸ್ವಾಗತಿಸುವುದು ಅಥವಾ ಪ್ರತಿ ಪಕ್ಷದವರು ಅದನ್ನು ಚೆನ್ನಾಗಿಲ್ಲ ಎಂದು ಹೇಳುವುದು ಇದು ಸ್ವಭಾವ. ಒಂದು ಪಕ್ಷ ಆಳುವ ಪಕ್ಷದವರಿಗೆ ಚೆನ್ನಾಗಿಲ್ಲ ಎಂದು ಗೊತ್ತಿದ್ದರೂ ಕೂಡ ಚೆನ್ನಾಗಿಲ್ಲದೇಯಿರತಕ್ಕ ವಿಷಯಗಳನ್ನೆಲ್ಲಾ ಮೊದಲು ಹೇಳಿ ಕಡೆಯಲ್ಲಿ ಸ್ವಾಗತಿಸುತ್ತೇನೆ ಎಂದು ಹೇಳುತ್ತಾರೆ. ಪ್ರತಿ ಪಕ್ಷದವರು ಸ್ವಾಗತಿಸತಕ್ಕ ವಿಷಯ ಇದ್ದರೂ ಕೂಡ ಸ್ವಾಗತಿಸುವುದಿಲ್ಲ, ಸಭೆ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇದು ಎರಡೂ ಸ್ವಭಾವವೇ, ಸ್ವಾಮಿ, ಇಲ್ಲಿಯವರೆಗೂ ನಮ್ಮ ಪ್ರತಿ ಪಕ್ಷದ ನಾಯಕರು ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷದವರು ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನನಗೆ ತಿಳಿದ ಕೆಲವು ವಿಷಯಗಳನ್ನು ಮಾತನಾಡಬೇಕೆಂದು ಇಚ್ಛೆ ಪಟ್ಟಿದ್ದೇನೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸರ್ಕಾರದವರು ಹಾಕಿದ್ದಾರೆ. ಆದರೆ ಗ್ರಾಮಾಂತರ ಕೈಗಾರಿಕೆ ಬಹಳ ಹೆಚ್ಚಾಗಿ ಆಗಬೇಕು. ಆ ಕೈಗಾರಿಕೆಗಳನ್ನು ಗ್ರಾಮಾಂತರಗಳಲ್ಲಿಯೇ ಸ್ಥಾಪನೆ ಮಾಡಬೇಕು. ಆಯಾಯಾ ಜಾಗದಲ್ಲಿ ಸ್ಥಳೀಯವಾದ ಕಚ್ಚಾವಸ್ತುಗಳು ಏನೇನು ಸಿಕ್ಕುತ್ತವೆ ಅವಕ್ಕೆ ಹೆಚ್ಚು ಪ್ರೋತ್ಸಾಹ ಕೊಡತಕ್ಕ ಕೈಗಾರಿಕೆಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಬೇಕು. ಹಾಗೆ ಮಾಡುವಾಗ ಕೆಲವು ಕಡೆಗಳಲ್ಲಿ ಏನು ಮಾಡುತ್ತಾರೆ ಎಂದರೆ ಕಟ್ಟಡಗಳಿಗೆ ಹೆಚ್ಚು ಹಣ ಖರ್ಚು ಮಾಡುತ್ತಾರೆ. ಕೈಗಾರಿಕೆ ಸಣ್ಣದು, ಕಟ್ಟಡ ಮಾತ್ರ ಬಹಳ ದೊಡ್ಡದು. ಕಟ್ಟಡಕ್ಕೆ ಬಹಳ ಕಡಿಮೆ ಹಣ ಖರ್ಚು ಮಾಡಿ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟರೆ ಒಳ್ಳೆಯದು. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ವಿದ್ಯುಚ್ಛಕ್ತಿ ದೊರೆಯುವುದಿಲ್ಲವೋ ಅಂತಹ ಕಡೆ ಡೀಸಲ್ ಇಂಜನ್ನುಗಳ ವ್ಯವಸ್ಥೆ ಮಾಡಿಕೊಟ್ಟು ಅದಕ್ಕೆ ತಗಲತಕ್ಕ ಖರ್ಚನ್ನು ಸರ್ಕಾರದವರು ಸಬ್ಸಿಡಿ ಮೂಲಕ ಒದಗಿಸಿ ಪ್ರೋತ್ಸಾಹಿಸಬೇಕು. ಅದೂ ಅಲ್ಲದೇ ಗ್ರಾಮ ವ್ಯವಸಾಯದ ಉತ್ಪನ್ನವನ್ನು ನಮ್ಮ ದೇಶದಲ್ಲಿ ಸ್ವಾಮಿ ದೊಡ್ಡ ದೊಡ್ಡ ಟ್ರಾಕ್ಟರುಗಳ ಮೂಲಕ ಪರ ದೇಶಗಳಲ್ಲಿರುವಂತೆ ದೊಡ್ಡ ದೊಡ್ಡ ಉಪಕರಣಗಳ ಮೂಲಕ ಹೆಚ್ಚು ಮಾಡಲಿಕ್ಕೆ ಅವಕಾಶವಿಲ್ಲ ಎಂದು ತಿಳಿದುಕೊಂಡಿದ್ದೇನೆ. ಅದು ಕೆಲವರಿಗೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲಿ ನಮಗೆ ಇರತಕ್ಕ ಜಮೀನಿನ ವಿಸ್ತರಣ, ಹಳ್ಳಿಯ ವಾತಾವರಣ ನಮ್ಮ ಆರ್ಥಿಕ ಸ್ಥಿತಿ ಇವೆಲ್ಲವೂ ಕೂಡ ಅಂಥ ದೊಡ್ಡ ದೊಡ್ಡ ಸಾಮಾಗ್ರಿಗಳಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಮೊದಲಿನಿಂದಲೂ ಒಂದು ಪದ್ಧತಿ ಹಳ್ಳಿಗಳಲ್ಲಿ ಬಂದಿದೆ. ಹಳ್ಳಿ ರೈತ ತನ್ನ ನೇಗಿಲನ್ನು ಉಪಯೋಗಿಸುವುದು, ತನ್ನ ಗುಂಟೆಗಳನ್ನು ಉಪಯೋಗಿಸುವುದು ಏನಿದೆ ಇದರಲ್ಲಿ ಒಂದು ಕ್ರಾಂತಿಕಾರ್ಯ

(ಶ್ರೀ ಬಿ. ಮಾಲ್ಲಪ್ಪ)

ಆಗಬೇಕು. ಕ್ರಾಂತಿಕಾರಿಯಾದ ಉಪಕರಣಗಳನ್ನು ಸರ್ಕಾರದವರು ಈಗಿನ ಕಾಲಕ್ಕೆ ತಕ್ಕಂತೆ ಮಾಡ್ರನೈಸ್ ಮಾಡತಕ್ಕ ಕ್ರಮ ಅನುಸರಿಸಿ ಅದನ್ನು ಕಂಡುಹಿಡಿದು ಅದರಿಂದ ರೈತನಿಗೆ ಹೆಚ್ಚು ಅನುಕೂಲವಾಗತಕ್ಕ ಮಾರ್ಗವನ್ನು ತೋರಿಸಿ ಕೊಟ್ಟರೆ ಹೆಚ್ಚು ಪ್ರಯೋಜನವಾದೀತು. ಆ ರೀತಿ ಹೆಚ್ಚು ಫಸಲನ್ನು ಪಡೆಯತಕ್ಕ ಕ್ರಮವನ್ನನುಸರಿಸಲು ಸರ್ಕಾರದವರು ರೈತನಿಗೆ ಪ್ರೋತ್ಸಾಹಿಸ ಬೇಕು. ಹಾಗಲ್ಲದೆ ಈಗಿರುವಂತೆ ದೊಡ್ಡ ದೊಡ್ಡ ಟ್ರ್ಯಾಕ್ಟರುಗಳನ್ನು ಉಪಯೋಗಿಸಿ ಉಳುಮೆ ಮಾಡಬೇಕೆಂದರೆ ನಮ್ಮ ದೇಶದ ಜನಸಂಖ್ಯೆ ಬಹಳ ಜಾಸ್ತಿಯಾಗುತ್ತಿದೆ. ಯಂತ್ರೋಪಕರಣ ಗಳನ್ನು ಉಪಯೋಗ ಮಾಡುವುದರಿಂದ ನಿರುದ್ಯೋಗಕ್ಕೆ ಅವಕಾಶ ಮಾಡಿಕೊಟ್ಟು ದೇಶದಲ್ಲಿ ಅನರ್ಥವಾಗುವುದು ಖಂಡಿತ. ಆದ್ದರಿಂದ ಬಡ ರೈತ ಉಪಯೋಗಿಸತಕ್ಕ ಹಳೇ ಉಪಕರಣಗಳನ್ನು ಮಾಡ್ರನೈಸ್ ಮಾಡತಕ್ಕ ವ್ಯವಸ್ಥೆಯನ್ನು ಕಂಡು ಹಿಡಿದು ಪ್ರೋತ್ಸಾಹಿಸುವುದು ಒಳ್ಳೆಯದು ಎಂದು ಹೇಳುತ್ತೇನೆ.

ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ನಾವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬಹಳ ಮುಂದಾಲೋಚನೆಯಿಂದ 5 ವರ್ಷದ ಮೇಲೆ ಅಥವಾ 10 ವರ್ಷದ ಮೇಲೆ ನಮ್ಮ ದೇಶಕ್ಕೆ ಉತ್ಪನ್ನ ಬರುತ್ತದೆ ಎಂದು ಹೇಳುತ್ತೀರಿ. ಆದರೆ ರೈತನಿಗೆ ಅತಿ ಜಾಗ್ರತೆಯಾಗಿ ಫಲ ಕೊಡತಕ್ಕ ಸಣ್ಣ ಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಹಾಗೆ ಕೊಡುವುದರಿಂದ ಮಾತ್ರವೇ ಶೀಘ್ರವಾಗಿ ದೇಶದಲ್ಲಿ ಒಂದು ಕ್ರಾಂತಿಕಾರಿಯಾದ ಬದಲಾವಣೆಯನ್ನು ರೈತನ ಜೀವನದಲ್ಲಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಸ್ವಾಮಿ, ಸುಮಾರು ಶೇಕಡ 80 ಜನ ಹಳ್ಳಿಗರು, ಒಕ್ಕಲು ತನ ಮಾಡುವವರು. ಅವರೆಲ್ಲರೂ ಕೂಡ ಬಹಳ ಬಡವರು. ನೀವು ಮಾಡತಕ್ಕ ಖರ್ಚಿನಲ್ಲಿ ಶೇಕಡ 80 ಭಾಗದ ಹಣ ಅವರಿಗೆ ಸೇರಿ, ಆ ಮೂಲಕ ದೇಶ ಉತ್ಪನ್ನ ಹೆಚ್ಚಾಗತಕ್ಕ ಅಂದಾಜನ್ನು ನೀವು ಯಾವಾಗಲೂ ಮಾಡಬೇಕು. ಪಂಪ್‌ಸೆಟ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಬಾವಿ ತೆಗೆಸುವ ವ್ಯವಸ್ಥೆ ಮಾಡಿದ್ದೇವೆ, ಸಣ್ಣ ಸಣ್ಣ ನೀರಾವರಿ ಯೋಜನೆಗಳ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದೀರಿ, ಪಂಪ್‌ಸೆಟ್ ಕೊಡುವುದು, ಬಾವಿ ತೆಗೆಸುವ ವ್ಯವಸ್ಥೆ ಮಾಡುವುದು 5 ಎಕರೆಗೆ ಒಂದು, 10 ಎಕರೆಗೆ ಒಂದು ಯೂನಿಟ್ ಮಾಡಿಕೊಂಡು ಅವನ ಮನೆ ಬಾಗಿಲಿನ ಮುಂದೆ ತೆಗೆದು ಕೊಂಡು ಹೋಗುವ ವ್ಯವಸ್ಥೆ ಮಾಡಬೇಕು, ಹಾಕಿಕೊಟ್ಟು ಬರಬೇಕು. ರೈತನಿಗೆ ತಿಳುವಳಿಕೆ ಇಲ್ಲ. ನೀವು ಅವರಿಗಾಗಿ ಮಾಡುವ ಖರ್ಚು ಪ್ರಚಾರಕ್ಕಾಗಿ ಮಾಡಬಹುದು, ಪತ್ರಿಕೆಗಳಲ್ಲಿ ಹಾಕಬಹುದು, ಗೆಜೆಟ್‌ನಲ್ಲಿ ಹಾಕಿಸಬಹುದು. ಹಳ್ಳಿ ರೈತನಿಗೆ ಅದನ್ನು ತಿಳಿದುಕೊಳ್ಳತಕ್ಕ ಶಕ್ತಿ ಇಲ್ಲ. ಇದರ ಉಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹೇಳಿ ಮನೆ ಬಾಗಿಲಿಗೆ ಹೋಗಿ, ವ್ಯವಸ್ಥೆಗೊಳಿಸಿ, ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ಇದೇ ಪ್ರಜಾ ಪ್ರಭುತ್ವದ ನಿಯಮ. ಇದನ್ನು ನಂಬಿ ಅಷ್ಟು ಜನರೂ ಕೂಡ ನಿಮ್ಮಲ್ಲಿ ವಿಶ್ವಾಸವಿಟ್ಟು ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಆದರೆ ಅಧಿಕಾರಕ್ಕೆ ಬಂದ ನಂತರ ಹಳ್ಳಿ ರೈತನನ್ನು ಮರೆತು ತಾವು ಬಂದಂಥ ಗ್ರಾಮಗಳನ್ನು ಮರೆತು, ತಾವು ವಾಸ ಮಾಡುತ್ತಿದ್ದಂಥ ಗುಡಿಸಲುಗಳನ್ನು ಮರೆತು ಇಲ್ಲಿನ ಭವ್ಯ ಭವನಗಳಲ್ಲಿ ವಾಸ ಮಾಡ ತೊಡಗಿದರೆ ಖಂಡಿತವಾಗಿಯೂ ಪಾಪ ಬರುತ್ತದೆ. ಅದೂ ಅಲ್ಲದೆ ಯಾವ ಕೆಲಸಕ್ಕೆ ನಿಮ್ಮ ಕಚೇರಿಗಳಿಗೆ ಹೋಗಲಿ, ಪಂಪ್‌ಸೆಟ್ ವ್ಯವಹಾರವಾಗಲಿ, ಬಾವಿ ವ್ಯವಹಾರ ವಾಗಲಿ ರೈತನಿಗೆ ಆಗತಕ್ಕ ಕಷ್ಟ ಹೇಳತೀರದು. ಎಷ್ಟೋ ಸಾರಿ ಎಷ್ಟು ಹಣವನ್ನು ಪಡೆಯುತ್ತಾನೆಯೋ ಅಷ್ಟು ಹಣವನ್ನು ದಳ್ಳಾಳಿಗಳಿಗೆ ಲಂಚವಾಗಿ ಕೊಡಬೇಕಾಗುತ್ತದೆ. ಅದು ಅವನ ಕೈಗೆ ಬರುವುದಿಲ್ಲ, ದುಃಖಪಡುತ್ತಾನೆ. ಯಾವ ಯೋಜನೆಯೂ ಬೇಡ, ಯಾವ ಪ್ರಚಾರವೂ ಬೇಡ, ನಮ್ಮ ಅಪ್ಪ ಅಜ್ಜನ ಕಾಲದ ವ್ಯವಸ್ಥೆಯೇ ಇರಲಿ ಎಂದು ಅನ್ನುತ್ತಾನೆ. ಈ ರೀತಿ ಹಿಂಸೆಗೆ ಗುರಿಯಾಗುವುದು ಬೇಡ ಎಂದು ಅನ್ನುತ್ತಾನೆ, ಇದನ್ನು ತಪ್ಪಿಸಿ ಆದಷ್ಟು ಸುಲಭವಾಗಿ ಅವನ ಮನೆಯ ಹತ್ತಿರದಲ್ಲಿ, ಆದಷ್ಟು ಜಾಗ್ರತೆ ಅವನಿಗೆ ಹಿಂಸೆಯಾಗದಂತೆ ಅನುಕೂಲವಾಗುವಂಥ ಕಾಂತ್ರಿಕಾರಕವಾದ ಕೆಲವು ಕ್ರಮಗಳನ್ನು ಕೈಕೊಳ್ಳುವುದು ಒಳ್ಳೆಯದು ಎಂದು ಹೇಳ ಬಯಸುತ್ತೇನೆ.

ಮತ್ತೊಂದು ವಿಚಾರವೇನೆಂದರೆ ಸಾಯಿಲ್ ಎಕ್ಸ್‌ಪರ್ಟ್ಸ್ ಎಂದು ಕೆಲವು ಕಡೆ ಇಟ್ಟಿದ್ದೀರಿ. ಇದರ ಅನುಭವ ರೈತನಿಗೆ ಬಹಳ ಕಡಿಮೆ. ಯಾವ ಜಮೀನಿನಲ್ಲಿ ಯಾವ ಫಸಲು ಬೆಳೆಯ ಬಹುದು. ಯಾವ ರೀತಿ ಬದಲಾವಣೆಗೆ ಮಾಡುವುದರಿಂದ ಕ್ರಾಂತಿಕಾರಕವಾಗಿ ಆಗಬಲ್ಲದು, ಹೆಚ್ಚು ಧಾನ್ಯ ಬೆಳೆಯ ಬಲ್ಲ, ಹೊಂದ ಬಲ್ಲ ಎಂಬ ಬುದ್ಧಿ ಅವನಿಗೆ ಬಹಳ ಕಡಿಮೆ ಇದೆ. ಸ್ವಾಮಿ, ಪ್ರತಿಯೊಂದು ಗ್ರಾಮದಲ್ಲೂ ನಿಮಗೆ ಸಾಧ್ಯವಾಗುವುದಾದರೆ ಪ್ರತಿಯೊಬ್ಬ ರೈತನ ಮನೆಯಲ್ಲೂ ಕೂಡ ಇಂತಿಂಥ ಕ್ಷೇತ್ರದಿಂದ ಇಂತಿಂಥ ಉಪಯೋಗ ರೈತನಿಗೆ ಆಗುತ್ತದೆ. ಇಂತಿಂಥ ಕ್ರಮಗಳನ್ನು ಅನುಸರಿಸ ಬೇಕು ಎಂದು ತಿಳುವಳಿಕೆ ಕೊಡುವಂಥ ನೋಟೀಸ್ ಬೋರ್ಡು ತೂಗು ಹಾಕುವಂಥ ವ್ಯವಸ್ಥೆ

ಮಾಡಬೇಕು. ಪ್ರಚಾರ ಇಲಾಖೆ ಇದೆ, ಈ ಪ್ರಚಾರ ಶಾಖೆ ಏನು ಕೆಲಸ ಮಾಡುತ್ತಿದೆ ಎಂದರೆ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಮಂತ್ರಿಗಳು ಹೋಗುವುದು, ಮಂತ್ರಿಗಳು ಬರುವುದು, ಮಂತ್ರಿಗಳ ಫೋಟೋ ತೆಗೆಯುವುದು ಇದನ್ನು ಪ್ರಚಾರ ಮಾಡುತ್ತಿದೆಯೇ ಹೊರತು ರೈತನಿಗೆ ಅನುಕೂಲವಾದಂಥ ಪ್ರಚಾರ ಕಾರ್ಯ ಮಾಡಿಲ್ಲ ಎನ್ನುವುದನ್ನು ತಾವು ನೋಡಬೇಕು. ಎಕ್. ಇ. ಎಸ್. ಬ್ಲಾಕ್ ಇದೆ.

Mr. SPEAKER.—The House will now rise and meet after half an hour.

The House adjourned for recess at Three of the Clock and meet at Thirty Minutes past Three of the Clock.

[MR. SPEAKER in the Chair.]

ಶ್ರೀ ಜಿ. ಮರುಳಪ್ಪ.—ಸ್ವಾಮಿ, ಅಧ್ಯಕ್ಷರೇ ಈ ಹಿಂದೆ ನಾನು ಹೇಳುತ್ತಿದ್ದುದು N. E. S. ನವರು ಹಳ್ಳಿಹಳ್ಳಿಗಳಿಗೆ ಹೋಗಿ ಅವರು ಚಲನ ಚಿತ್ರಗಳ ಪ್ರದರ್ಶನಮಾಡುತ್ತಿರುವ ವಿಚಾರವನ್ನು ಹೇಳುತ್ತಿದ್ದೆ. ಹಾಗೆಯೇ ಅವರು ಹಳ್ಳಿಗಳಲ್ಲಿ ಪ್ರದರ್ಶನ ಮಾಡುತ್ತ ಚಲನ ಚಿತ್ರದಲ್ಲಿ ಅಡಕವಾಗಿದ್ದುದೇನೆಂದರೆ ಮಂತ್ರಿಗಳ ಬಗ್ಗೆ ದೊಡ್ಡ ಮೆರವಣಿಗೆಗಳಾದದ್ದು, ಇವರ ಉತ್ಸವಗಳಾದದ್ದು, ಇವರಿಗೆ ಹಾರ-ತುರಾಯಿಗಳನ್ನರ್ಪಿಸಿದ್ದು-ಇವರಿಗೆ ತುಲಾ ಭಾರ ಮಾಡಿಸಿಕೊಂಡಿದ್ದು-ಇತ್ಯಾದಿ ವಿಷಯಗಳಿಂದ ಕೂಡಿದ್ದ ಚಲನ ಚಿತ್ರಗಳನ್ನು ಹಳ್ಳಿ ರೈತರ ಮುಂದೆ ಪ್ರದರ್ಶನ ಮಾಡುತ್ತಿದ್ದಾರೆ. ಸ್ವಾಮಿ, ಅಧ್ಯಕ್ಷರೇ ಆ ರೈತನಿಗೆ ಬೇಕಾದಂಥ ಚಲನಚಿತ್ರಗಳು ಯಾವುದೆಂದರೆ ಇವರ ಅಟ್ಟಹಾಸದ ಚಲನಚಿತ್ರಗಳಲ್ಲ ಈ ವಿಷಯಗಳಲ್ಲ, ಅವನಿಗೆ ಈ ದಿವಸ ಬೇಕಾದ್ದು ಅವನ ಹೊಟ್ಟೆಯನ್ನು ತುಂಬಿಸತಕ್ಕ ಚಲನಚಿತ್ರ, ಅವನಿಗಿರತಕ್ಕ ನಾಲ್ಕೈದು ಎಕರೆಭೂಮಿಯಲ್ಲಿ ಏನು ಅವನು ಬೆಳೆ ಬೆಳೆದರೆ, ಯಾವ ಬೆಳೆಯನ್ನು ಬೆಳೆದರೆ ಅವನ ಉತ್ಪತ್ತಿ ಹೆಚ್ಚಾಗಿ ಅವನ ಕಷ್ಟಗಳು ನಿವಾರಣೆಯಾದಾವು, ಯಾವ ಬೆಳೆ ಬೆಳೆದರೆ ಅವನಿಗೆ ನಾಲ್ಕು ಕಾಸುಗಳು ಜಾಸ್ತಿ ದೊರೆತು ಅವನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡೀತು. ಅವನೂ, ಅವನ ಹೆಂಡತಿ ಮಕ್ಕಳ ಜೀವನ ಯಾವುದರಿಂದ ಸುಖ ಜೀವನ ಮಾಡಲು ಅನುಕೂಲವಿದೆ, ಅವನ ಉತ್ಪತ್ತಿ ಮಾರ್ಗಗಳನ್ನು ಜಾಸ್ತಿಮಾಡಿಕೊಳ್ಳುವ ಮಾರ್ಗಗಳು ಯಾವುವು ಎಂಬುದನ್ನು ತೋರಿಸತಕ್ಕ ಚಲನ ಚಿತ್ರಗಳೇನಿವೆ ಅವನ್ನು ಆ ರೈತ ಅಪೇಕ್ಷಿಸುತ್ತಾನೇ ಹೊರತು ಇವರ ಇಂಥ ಆಡಂಬರದ ಚಲನ ಚಿತ್ರಗಳನ್ನಲ್ಲ. ಇವರು ಇಲ್ಲಿ ಕಟ್ಟಿಸಿರತಕ್ಕ ವಿಧಾನ ಸೌಧದ ಆಡಂಬರದ ಚಿತ್ರವನ್ನು ಒಂದು ಸಾರ್ತಿಯಲ್ಲ ನಾಲ್ಕು ಸಾರ್ತಿ ತೋರಿಸಿದರೂ ರೈತನಿಗೆ ಅವನ ಹೊಟ್ಟೆ ತುಂಬುವುದಿಲ್ಲ. ಹೀಗೆ ಹಳ್ಳಿಗಳಿಗೆ ಹೋಗಿ ಮಂತ್ರಿಗಳ ಅಟ್ಟಹಾಸದ ಚಿತ್ರಗಳನ್ನು ಜನರಿಗೆ ತೋರಿಸಿ ಅವರನ್ನು ಮರುಳುಮಾಡುತ್ತೇವೆಂಬ ಈ ಇನ್‌ಫರ್‌ಮೇಷನ್ ಇಲಾಖೆಯವರ ಭಾವನೆಯೇನಿದೆ ಅದನ್ನು ಆದಷ್ಟು ಜಾಗ್ರತೆಯಾಗಿ ಕೊನೆಗಾಣಿಸುವುದು ಒಳ್ಳೆಯದು.

ಅಧ್ಯಕ್ಷರೇ, ಈ ಮಂತ್ರಿಮಂಡಲದಲ್ಲಿರತಕ್ಕ ಬಹು ಭಾಗ ಮಂತ್ರಿಗಳು ಅಂದರೆ ಬಹಳ ಜನ ಮಂತ್ರಿಗಳೆಲ್ಲ ಹಳ್ಳಿಗಳಿಂದಲೇ ಬಂದಿರತಕ್ಕವರು. ಇವರಿಗೆ ಅಹೋರಾತ್ರಿ ಆ ರೈತಾಪಿ ಜನರ ಕಷ್ಟ ಕಾರ್ಪಣ್ಯಗಳೇನೆಂಬುದು ಗೊತ್ತಿದೆ; ತಿಳಿದುಕೊಂಡಿದ್ದಾರೆ. ಇವರೆಲ್ಲರೂ ಈ ಹಿಂದೆ ಹಳ್ಳಿಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ಆ ರಸ್ತೆಗಳಲ್ಲಿ ಆ ಜನರು ತಿರುಗಾಡುವುದನ್ನು ನೋಡಿ ಮರುಕ ಗೊಂಡಿದ್ದಾರೆ ; ಆ ಹಳ್ಳಿಗಾಡಿನ ಜನ ಕುಡಿಯಲು ನೀರುಸಿಕ್ಕದೆ ಅಲೆದಾಡುತ್ತಿದ್ದುದನ್ನು ನೋಡಿ ಇವರು ಅತ್ತಿದ್ದಾರೆ ; ಹೊಟ್ಟೆಗೆ ತಿನ್ನುವುದಕ್ಕಿಲ್ಲದೆ ಬೀದಿ ಬೀದಿಗಳಲ್ಲಿ ಅಲೆದಾಡುತ್ತಿದ್ದ ಜನರನ್ನು ನೋಡಿ ಕನಿಕರ ಪಟ್ಟು ಈ ಭೀಕರ ಪರಿಸ್ಥಿತಿಯನ್ನು ನಾವು ಎಷ್ಟುಬೇಗ ಕೊನೆಗಾಣಿಸುತ್ತೇವೋ ಎಂತ ಹೀಗೆಲ್ಲಾ ಭಾಷಣಮಾಡುತ್ತಿದ್ದ ಈ ಜನರು ಈ ದಿವಸ ಏನು ಮಾಡುತ್ತಿದ್ದಾರೆ ಎನ್ನತಕ್ಕ ವಿಚಾರದಲ್ಲಿ ಅಧ್ಯಕ್ಷರೇ ತಮ್ಮ ಗಮನಕ್ಕೆ ನಾನು ಈಗ ಒಂದು ಅಂಶವನ್ನು ತರಲಿಚ್ಛಿಸುತ್ತೇನೆ. ಇಲ್ಲಿಗೆ 15 ವರ್ಷಗಳಿಂದಲೂ ಈ ದೇಶದ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಈ ರಾಜಕೀಯ ಪಕ್ಷ ಈ ದಿವಸ ಏನು ಕಾರ್ಯಸಾಧಿಸಿದ್ದಾರೆ-ನಮ್ಮ ಮೈಸೂರು ರಾಜ್ಯದಲ್ಲಿ 2¼ ಅಥವಾ 2½ ಕೋಟಿ ಪ್ರಜಾಸಂಖ್ಯೆ ಇರಬಹುದು, ಅದರಲ್ಲಿ ನಾಲ್ಕಾರು ಸಾವಿರ ಜನ ಅಥವಾ ಒಂದು 10 ಸಾವಿರ ಜನ ಭಿಕ್ಷುಕರು ಇರಬಹುದು ಅನ್ನತಕ್ಕ ಮಾತಿಗೆ ನಾನು ಹೇಳುತ್ತಿಲ್ಲ. ಈ ದಿವಸ ಈ ರಾಜ್ಯದಲ್ಲಿ ಕಣ್ಣಿಲ್ಲದವರ, ಕಾಲಿಲ್ಲದ

(ಶ್ರೀ ಜಿ. ಮರುಳಪ್ಪ)

ವರು; ಇಂಥವರು ಹೊಟ್ಟೆ ಹೊರೆಯಲು ಒಂದ ಸರಿಯಾದ ಅವಕಾಶವಿಲ್ಲದಂಥವರು ಎಷ್ಟೋ ಜನಗಳಿದ್ದಾರೆ. ಅವರು ಹೊಟ್ಟೆ ಹೊರೆಯಾಲು ಏನು ವ್ಯವಸ್ಥೆ ಮಾಡಿದ್ದಾರೆ? ನಮ್ಮ ರಾಜ್ಯದ ಈ ವರ್ಷದ ಬಡ್ಜೆಟ್ 100 ಕೋಟಿ ರೂಗಳದು. ಈ 100 ಕೋಟಿ ರೂ.ಗಳ ಉತ್ಪತ್ತಿಯಲ್ಲಿ 50 ಕೋಟಿಯಲ್ಲಿ ಅಂಥ ಕಟ್ಟಡ ಕಟ್ಟಿದ್ದೇವೆ,ಇಂಥ ಯೋಜನೆ ಮಾಡಿಸಿದ್ದೇವೆ ಎಂತ ಇವರು ಎಲ್ಲೆಲ್ಲೂ ಹೇಳಿಕೊಂಡಿದ್ದೇ ಹೇಳಿಕೊಂಡಿದ್ದಾಗಿದೆ. ಆದರೆ ಇವರಿಗೆಲ್ಲ ಆ ಹಳ್ಳೀ ಜನರು ಕುಡಿಯುವ ನೀರಿನ ಸೌಕರ್ಯವಿಲ್ಲದೆ ಒದ್ದಾಡುತ್ತಿದ್ದಾರೆಂಬ ಅಂಶ ಚನ್ನಾಗಿ ಮನವರಿಕೆಯಾಗಿದೆ. ಅವರಿಗೆ ಈ ಬಡ್ಜೆಟ್ಟಿನಲ್ಲಿ ಏನು ಅನುಕೂಲ ಮಾಡಿದ್ದಾರೆ ? ಎಲ್ಲೋ ಅಲ್ಲೊಂದು ಕಡೆ, ಇಲ್ಲೊಂದು ಕಡೆ ಈ ಬಾವಿಗಳಿಗಾಗಿ 2-3 ಸಾವಿರ ರೂ.ಗಳನ್ನು ಕೊಟ್ಟರೆ ಆಯಿತೇನು? ಈ ಬೆಂಗಳೂರು ನಗರದಲ್ಲಿ ಈ ದಿವಸ 16 ಲಕ್ಷ ಪ್ರಜಾ ಸಂಖ್ಯೆ ಇದೆ. ಈ ನಗರಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ. ಆ ಹಣವನ್ನು ಖರ್ಚುಮಾಡಿ ಈ ನಗರಕ್ಕೆ ಸಾಕಾಗುವಷ್ಟು ನೀರನ್ನು ನಾವು ಒದಗಿ ಸೇತೀರುತ್ತೇವೆಂದು ಹೇಳುತ್ತ ಈ ದಿವಸ 13–14 ಕೋಟಿ ರೂ.ಗಳ ಯೋಜನೆಯನ್ನು ತಯಾರಿಸಿ ಆ ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನೊದಗಿಸಲು ಈ ಸರ್ಕಾರ ಬದ್ಧಕಂಕಣರಾಗಿ ಸಿದ್ಧಾಂತ ಮಾಡಿದ್ದಾರೆಂದು ಹೇಳಿಕೊಂಡಿದ್ದಾರೆ. ಈ ಹೊತ್ತು ಈ ಬೆಂಗಳೂರು ನಗರದಲ್ಲಿ 16 ಲಕ್ಷ ಜನರಿದ್ದರೆ ಬೇರೆ ಗ್ರಾಮಾಂತರ ಪ್ರದೇಶದಲ್ಲಿ 2 ಕೋಟಿ ಜನಗಳಿದ್ದಾರೆ. ಈ 20 ಕೋಟಿ ಜನರಿಗೂ ಈ ಬೆಂಗಳೂರು ನಗರ ಒಂದಕ್ಕೆ ಈಗ ಸರ್ಕಾರದವರು ಖರ್ಚು ಮಾಡಲು ತಯಾರಿರತಕ್ಕ 13 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾದ್ದಿಲ್ಲ—ಇವರಿಗೆ ಕೇವಲ 3 ಕೋಟಿ 4 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದರೆ ಈಗ ಯಾವ ಯಾವ ಗ್ರಾಮಗಳಲ್ಲಿ ರಾಜ್ಯಾದ್ಯಂತ ಕುಡಿಯುವ ನೀರಿನ ತೊಂದರೆಯಿತ್ತೋ ಆ ಗ್ರಾಮಗಳಿಗೆಲ್ಲಕ್ಕೂ ಶ್ರೇಷ್ಠ ಬಾವಿಗಳನ್ನು ಒದಗಿಸಲು ಅವಕಾಶವಿತ್ತು. ಆದರೆ ಅಂಥ ಅವಕಾಶವೇ ಈ ಬಡ್ಜೆಟ್ಟಿನಲ್ಲಿಲ್ಲ. ಆದರೆ ಇದರಲ್ಲಿ ತುರ್ತು ಪರಿಸ್ಥಿತಿ ವಿಚಾರವೇ ಬಹು ದೊಡ್ಡದಾಗಿದೆ. ಈ ತುರ್ತು ಪರಿಸ್ಥಿತಿಯಾದರೂ ಹುಟ್ಟಿ ಇಲ್ಲಿಗೆ 3-4 ತಿಂಗಳುಗಳಾಯಿತು. ಆದರೆ ಹಳ್ಳಿಗಳಲ್ಲಿ ಅನೇಕ ಕಡೆ ಕುಡಿಯುವ ನೀರಿನ ಸೌಕರ್ಯವಿಲ್ಲವೆಂಬುದು ಇಲ್ಲಿಗೆ ನಾಲ್ಕಾರು ವರ್ಷಗಳಿಂದಲೂ ಗೊತ್ತಿದೆ. ಯಾವ ಮಂತ್ರಿಗಳಿಗೆ ಈ ವಿಚಾರ ಗೊತ್ತಿಲ್ಲ ಅವರ ಆತ್ಮಕ್ಕೆ ಈ ಪ್ರಶ್ನೆ ಹಾಕಿಕೊಳ್ಳಲಿ. ಹಳ್ಳೀ ಜನರಿಗೆ ಕುಡಿಯುವ ನೀರಿನ ಬಾವಿ ಮಾಡಿಸಿಕೊಡಿ ಎಂತ ಕೇಳಿದರೆ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಅದೇ ರೀತಿ ಈ ದಿವಸ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು 14 ಕೋಟಿ ರೂ.ಗಳನ್ನು ಖರ್ಚುಮಾಡಲು ಸರ್ಕಾರದವರು ಸಿದ್ಧವಾಗಿರುವಾಗ ಈ ನಗರದವರೆಷ್ಟು ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ ? ಸರ್ಕಾರಕ್ಕೆ ಈ ಬೆಂಗಳೂರು ನಗರ ನಿವಾಸಿಗಳಲ್ಲಿ ಮಾತ್ರ ನಂಬಿಕೆಯಿದೆ. ಈ ಬೆಂಗಳೂರು ಕಾರ್ಪೊರೇಷನ್ ಮೇಲೆ ಇವರಿಗೆ ನಂಬಿಕೆಯಿದೆ. ಆದರೆ ಅಷ್ಟೇ ನಂಬಿಕೆ ಆ ಹಳ್ಳಿ ಜನರಲ್ಲಿಲ್ಲ! ಈ ಬೆಂಗಳೂರಿಗೆ ನೀರು ಸರಬರಾಯಿ ವ್ಯವಸ್ಥೆ ಆದ ಮೇಲೆ ಜನರು ನೀರಿಗೆ ದುಡ್ಡು ಕೊಟ್ಟರೆ ಆ ಗ್ರಾಮಾಂತರ ಪ್ರದೇಶದಲ್ಲಿ ಅವರಿಗೂ ಹೀಗೆ ಮೊದಲು ಬಾವಿಗಳನ್ನು ತೆಗೆಸಿಕೊಡಿ, ಅನಂತರ ಅವರ ಮೇಲೂ ಆ ಖರ್ಚಿನ ಬಗ್ಗೆ ತಿಂಗಳಿಗೋ ವರ್ಷಕ್ಕೋ ಇಂತಿಷ್ಟು ಕಂದಾಯ ಕೊಡಬೇಕೆಂದು ನಿಗದಿ ಮಾಡಿ ; ಆಗ ಅವರು ಕೊಟ್ಟೇ ಕೊಡುತ್ತಾರೆ. ಹೀಗೆ ಈ ದಿವಸ ಬೆಂಗಳೂರಿನ ನೀರಿನ ವ್ಯವಸ್ಥೆ ಹೇಗೆ ಮಾಡುತ್ತಿದ್ದಾರೋ ಹಾಗೇ ಆ ಗ್ರಾಮಾಂತರ ಪ್ರದೇಶಗಳಿಗೂ ಒಂದು ವ್ಯವಸ್ಥೆ ಮಾಡಲಿ. ಏಕೆ ಮಾಡಬಾರದು ? ಈ ದಿವಸ ಬೆಂಗಳೂರು ಸುತ್ತಮುತ್ತಲೂ ಇರತಕ್ಕ ಜನರ ಪರಿಸ್ಥಿತಿ ಏನಿದೆ ಎಂಬುದನ್ನು ಆ ಹಳ್ಳಿಗಾಡಿನ ಜನರ ಸ್ಥಿತಿ ಗತಿಗಳೇನೆಂಬುದನ್ನು ನೋಡಲಿ. ಇಲ್ಲಿಗಿಂತಲೂ ಅಲ್ಲಿ ಗುಡಿಸಿಲಿನಲ್ಲಿ ವಾಸಮಾಡತಕ್ಕ ಜನರು ಬಹುವಾಗಿದ್ದಾರೆ. ಈ ನಗರದಲ್ಲಿರತಕ್ಕವರಿಗೇ ಒಂದು ಯೋಜನೆ, ಬೇರೆ ಜಾಗದಲ್ಲಿರತಕ್ಕವರಿಗೇ ಒಂದು ಯೋಜನೆ ! ಗಲೀಜು ಪ್ರದೇಶದಲ್ಲಿ ವಾಸಮಾಡತಕ್ಕ ಜನಗಳಿಗೆಲ್ಲರಿಗೂ ಒಂದೇ ಕಾನೂನಿರಬೇಕು, ಒಂದೇ ಯೋಜನೆಯಿರಬೇಕು. ಈ ದಿವಸ ಈ ಸ್ಲಂಕ್ಲಿಯರೆನ್ಸಿಗೆ ಕೇಂದ್ರ ಸರ್ಕಾರದವರು ಕೊಡುತ್ತಿರುವ ಹಣವು ಕೇವಲ ಈ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ವಿದ್ಯಾವಂತ ಜನಗಳಿರತಕ್ಕ ನಗರಗಳಿಗೆ ಮಾತ್ರವೂ ಅಥವಾ ಆ ಸ್ಕೀಂ ಹಳ್ಳಿಯ ಜನರಿಗೂ ಇದೆಯೋ ? ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 20 ಸಾವಿರ ಹಳ್ಳಿಗಳಿದ್ದು ಅಲ್ಲಿಯ ಜನರು ಬಹಳ ಕೊಳಕು ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ಈ ದಿವಸ ಈ ಬೆಂಗಳೂರು ನಗರದಲ್ಲಿ ಕೊಳಕು ಪ್ರದೇಶದಲ್ಲಿರತಕ್ಕ ಜನರ ಸಂಖ್ಯೆ 5-6 ಲಕ್ಷವಿದ್ದರೆ ಬಾಕಿ ರಾಜ್ಯದಲ್ಲಿರತಕ್ಕ ಜನರ ಸಂಖ್ಯೆ ಕೋಟಿಗಟ್ಟಲೇ ಇದ್ದಾರೆ. ಆದ್ದರಿಂದ ಈ ಬೆಂಗಳೂರು ನಗರಕ್ಕೆ ಈ ವಿಚಾರದಲ್ಲಿ 5–6 ಲಕ್ಷ ಖರ್ಚುಮಾಡಿದರೆ ಬಾಕಿ ಪ್ರದೇಶಕ್ಕೆ 4½ ಕೋಟಿ ರೂ. ಗಳನ್ನು ಖರ್ಚು ಮಾಡಬೇಕಾಗಿದೆ. ಈ ಆಡಳಿತ ಪಕ್ಷದಲ್ಲಿ ಇಂಥ ಪಕ್ಷಪಾತ ಭಾವನೆ ಇರುವಾಗ ಎಷ್ಟು ವರ್ಷಗಳು ಕಳೆದಾಗ್ಯೂ ಹಳ್ಳಿ ಜನರ ಜೀವನ ಸುಗಮಗೊಳ್ಳಲು ಸಾಧ್ಯವಿಲ್ಲ. ಇಲ್ಲ

ಯವರೆಗೂ ಪಟ್ಟಣಗಳ ಮೇಲೆ ಅಭಿಮಾನ ಹೆಚ್ಚಾಗಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. ರಾಜ್ಯದಲ್ಲಿ
ಹಿಂದುಳಿದವರನ್ನು ಅಭಿವೃದ್ಧಿಗೊಳಿಸಬೇಕೆಂಬ ಗುರಿಯನ್ನು ಸರ್ಕಾರ ತಾಳಿರುವಾಗ ದೇಶಾದ್ಯಂ
ತವೂ ಹೇಳಿಕೊಳ್ಳುತ್ತಿರುವಾಗ ಈ ಸೌಕರ್ಯಗಳೆಲ್ಲ ಶ್ರೀಮಂತರಿಗಲ್ಲ ಬಡವರಿಗೆ ದೊರೆಯಬೇಕು,
ಪಟ್ಟಣಗಳಿಗಲ್ಲ—ಹಳ್ಳಿಗಳಿಗೆ ದೊರೆಯಬೇಕು. ಈ ಅಂಶವನ್ನು ಸರ್ಕಾರದವರು ಚೆನ್ನಾಗಿ ಅರಿ
ದ್ದಾರೆ. ಆದುದರಿಂದಲೇ ಅವರು ಹಿಂದುಳಿದ ಜನಾಂಗಗಳನ್ನು ಮುಂದಕ್ಕೆ ತರಲು ಸರ್ವ ಪ್ರಯ
ತ್ನಗಳನ್ನು ಮಾಡಲಾಗುತ್ತದೆಂದು ಕೇವಲ ಬಾಯಿನಲ್ಲಿ ಪ್ರಚಾರ ಮಾಡುತ್ತ ಕೆಲವರಿಗೆ, ತಮಗೆ
ಬೇಕಾದವರಿಗೆ, ತಮ್ಮ ಹಿಂಬಾಲಕರಿಗೆ ಅನುಕೂಲಗಳನ್ನೊದಗಿಸುತ್ತ ತಮಗೆ ಬೇಡವಾದವರಿಗೆ
ತಾತ್ಸಾರ ಭಾವನೆಯಿಂದ ನೋಡುತ್ತಿದ್ದಾರೆ. ಬೇರೆ ಜನಗಳಿಗೆ ಈ ರೂಲ್ಸು ಅಪ್ಲೈ ಆಗುವುದಿಲ್ಲ
ನೀವೆಲ್ಲರೂ ಒಂದು ಸೊಸೈಟಿ ಮಾಡಿಕೊಳ್ಳಬೇಕು, ಇಲ್ಲವಾದರೆ ನಿಮಗೆ ಈ ಸೌಲಭ್ಯಗಳನ್ನು
ಕೊಡಲು ಸಾಧ್ಯವಾಗುವುದಿಲ್ಲ ಎಂತ ಹೇಳುತ್ತಿದ್ದಾರೆ. ಈ ದಿವಸ ಈ ಸರ್ಕಾರ ದೇಶದಲ್ಲಿದತಕ್ಕ
ಹಿಂದುಳಿದ ಜನಾಂಗಗಳ ಅಭಿವೃದ್ಧಿಗೆ ಅನುಕೂಲವಾದ ಒಂದು ಆಜ್ಞೆಯನ್ನು ಜಾರಿಗೆ ತಂದರೆ ತಮಗೆ
ಬೇಕಾದವರಿದ್ದ ಕಡೆಗೆ ಆ ಅನುಕೂಲಗಳನ್ನು ಕಲ್ಪಿಸಿ ತಮಗೆ ಬೇಡವಾದ ಜನಗಳಿರುವ ಕಡೆಗೆ ಈ
ಅನುಕೂಲಗಳನ್ನು ಕಲ್ಪಿಸುವ ಅವಕಾಶವಿಲ್ಲ ಎಂತ ಹೇಳುವುದು ಯಾವ ಕಾನೂನು ಬದ್ಧವಾದ ವಿಚಾ
ರವೋ ಕಾಣೆ. ಯಾರ್ಯಾರಿಗೆ ಆ ಹಿಂದುಳಿದ ಪಂಗಡ ಎಂಬ ಅರ್ಹತೆ ಇದೆಯೋ ಅವರೆಲ್ಲರಿಗೂ ಈ
ಅನುಕೂಲಗಳು ದೊರೆಯಲೇಬೇಕು. ಇಂಥ ಅನುಕೂಲತೆಗಳನ್ನು ಪಡೆಯತಕ್ಕ ಹಕ್ಕು ಎಲ್ಲಾ
ಹಿಂದುಳಿದ ಜನರಿಗೂ ಇದೆಯೇ—ಇಲ್ಲವೇ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಇದರಲ್ಲಿ
ಮಂತ್ರಿಗಳ ಹಿಂಬಾಲಕರು—ಇವರು ಈ ಪಾರ್ಟಿ, ಆ ಪಾರ್ಟಿ ಎಂಬ ಭೇದ ಭಾವನೆಗಳಿಗೆ ಅವಕಾಶ
ವಿಲ್ಲ. ಆದರೆ ಈ ವಿಚಾರಗಳಲ್ಲಿ ಆ ಹಳ್ಳೀ ಬಡವಾಯಿಗಳಿಗೆ ಹೇಗೆ ಗೊತ್ತಾಗಬೇಕು ? ಈ ಹಿಂದೆ
ಕೆಲವರಿಗೆ ಹಿಂದುಳಿದಿದ್ದಾರೆಂದು ಅನುಕೂಲಗಳನ್ನು ಕಲ್ಪಿಸಿ ಈಗ ಅವರಿಗೆ ಆ ಅನುಕೂಲಗಳು
ದೊರೆಯುವುದಿಲ್ಲ ಎಂದರೆ ಹೇಗೆ ? ಯಾವ ಆಧಾರದ ಮೇಲೆ ಹೀಗೆ ಹೇಳುತ್ತಾರೆ ? ಒಂದೇ ಆಜ್ಞೆ
ಯಲ್ಲಿ ಒಂದು ಕಡೆ ಕೆಲವರಿಗೆ ಅನುಕೂಲ ಮಾಡಿ ಮತ್ತೆ ಕೆಲವು ಹಿಂದುಳಿದವರಿಗೆ ನೀವು ಈ ಸೌಲಭ್ಯಗ
ಳಿಗೆ ಅರ್ಹರಲ್ಲವೆಂದು ಹೇಳುವ ನೀತಿ ಯಾವ ಆಧಾರದಮೇಲೆ ನಿಂತಿದೆ ? ಆದರೆ ಎಲ್ಲರಿಗೂ ಒಂದೇ
ರೀತಿ ಹಿಂದುಳಿದಿರುವ ಪಂಗಡಗಳೆಂದು ನಿರ್ಧಾರವಾದಮೇಲೆ ಅನುಕೂಲಗಳು ಸಿಗಬೇಕು. ಇಂಥ
ಒಂದು ವ್ಯವಸ್ಥೆಮಾಡಲು ಶಕ್ತಿ ಇಲ್ಲದ ಸರ್ಕಾರ ಇಡೀ ದೇಶವನ್ನು ಆಳತಕ್ಕ ಶಕ್ತಿ ಈ ಸರ್ಕಾರಕ್ಕೆ
ಎಲ್ಲಿದೆ ?

ಸ್ವಾಮಿ, ಬಾವಿ, ಒಂದು ಪ್ರೈಮರಿ ಸ್ಕೂಲ್ ಕಟ್ಟಡ ಒಂದು ಗ್ರಾಮಕ್ಕೆ ಹೋಗುವ ರಸ್ತೆ
ಇವನ್ನು ಮಾಡಿಕೊಡುವುದಕ್ಕೆ ಹಳ್ಳಿಗರ ಕಾಂಟ್ರಿಬ್ಯೂಷನ್ ಕೇಳುವುದೇ ಆಗಲೀ, ಅದಕ್ಕೆ ಹಣ ಇಲ್ಲವೆಂದು
ಹೇಳುವುದೇ ಆಗಲೀ, ಇವೆರಡೂ ಬಹಳ ಪಾಪ. ಅದನ್ನು ನೀವು ಮಾಡಬೇಡಿ. ನೀವು ಎಷ್ಟೇ
ಸಹಾಯ ಮಾಡಿದ್ದರೂ, ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಎಷ್ಟೋ ದೊಡ್ಡ ದೊಡ್ಡ ಕಾರ್ಯ
ಗಳನ್ನು ನಾವು ಮಾಡಿದ್ದೇವೆಂದು ಹೇಳಿದ್ದರೂ ನೀವು ಜನತೆಯನ್ನು ಆಕರ್ಷಿಸಿಲ್ಲ; ಜನತೆಯ ಮನ
ಸ್ಸನ್ನು ತಿಳಿದಿಲ್ಲ. ನಿಜವಾಗಿಯೂ ಯಾರಿಗೆ ಯಾವಾಗ ಸಹಾಯ ಮಾಡುತ್ತಿದ್ದೀರಿ ? ಮಹಾತ್ಮ
ಗಾಂಧಿಯವರು ಏನು ಹೇಳುತ್ತಿದ್ದರೋ ಆ ಸರಳ ಜೀವನದ ತತ್ವವನ್ನು ಅನುಸರಿಸುವುದಕ್ಕೆ ನಿಮಗೆ
ಸಾಧ್ಯವಾಗಿಲ್ಲ. ಹಳ್ಳಿಯ ರೈತ ಮನೆಯಿಂದ ಹೊರಗೆ ಗಾಡಿಯನ್ನು ಕಟ್ಟಿಕೊಂಡು ಬಂದಾಗ,
ಗಾಡಿ ಬಿದ್ದಾಗ, ಎತ್ತು ಎಳೆಯದೆ ಇದ್ದಾಗ ಅಯ್ಯೋ ಎಂದು ಎಷ್ಟು ಕಷ್ಟ ಪಡುತ್ತಾನೆ. ಆದದಿ
ತಾವು ಇಲ್ಲಿ ಮೋಟಾರ್ ಕಾರಿನಲ್ಲಿ ಕುಳಿತುಕೊಂಡು ಹೋಗುವಾಗ ರಸ್ತೆಗೆ ಟಾರ್ ಹಾಕಿರುವುದು
ಸರಿಯಿಲ್ಲ. ಸಿಮೆಂಟ್ ರಸ್ತೆ ಬೇಕು ಎಂದು ಹೇಳುತ್ತೀರಿ. ಮುಂದೆ ರಬ್ಬರ್‌ನಲ್ಲಿ ಮಾಡಬೇಕೆಂದಿ
ದ್ದರೋ ಏನೋ ಗೊತ್ತಿಲ್ಲ ಈ ರಸ್ತೆಯನ್ನು ತಾಲ್ಲೂಕ್ ಬೋರ್ಡಿನವರು ಮಾಡಬೇಕು. ಆ
ರಸ್ತೆಯನ್ನು ವಿಲೇಜ್ ಪಂಚಾಯಿತಿಯವರು ಮಾಡಬೇಕು ಎಂದು ಹೇಳುತ್ತೀರಿ. ರಸ್ತೆಯನ್ನು ಸರಿ
ಮಾಡಬೇಕೆಂದು ತಾಲ್ಲೂಕ್ ಬೋರ್ಡ್‌ನವರನ್ನು ಕೇಳಿದರೆ ಅಲ್ಲಿ ದುಡ್ಡೇ minus ಎಂದು ಹೇಳು
ತ್ತಾರೆ. ಪಂಚಾಯಿತಿಯವರು ಮಾಡಬೇಕು ಎಂದರೆ, ನೀವೇನಾದರೂ ಸೆಕ್ರೆಟರಿಯ ಸಂಬಳವನ್ನು
ಕೊಡದೆ ಹೋದರೆ ಆ ಪಂಚಾಯಿತಿಯ ಉತ್ಪತ್ತಿಯನ್ನೆಲ್ಲ ಸೆಕ್ರೆಟರಿಯ ಸಂಬಳಕ್ಕೇ ಕೊಡಬೇಕು.
ಸರ್ಕಾರಕ್ಕೆ ಏನೇ ತೊಂದರೆ ಇರಲಿ ಮೊದಲು ಪ್ರತಿಗ್ರಾಮದಲ್ಲಿಯೂ ಕುಡಿಯಲಿಕ್ಕೆ ಒಂದು ಬಾವಿ,
ರೈತರ ಮಕ್ಕಳು ಓದಲು ಒಂದು ಪಾಠಶಾಲೆ, ಅವನ ಊರಿಗೆ ಹೋಗುವುದಕ್ಕೆ ಒಂದು ರಸ್ತೆ ಈ
ಮೂರು ಕಾರ್ಯಕ್ರಮಗಳನ್ನು ಅತಿ ಜಾಗ್ರತೆಯಾಗಿ ಜಾರಿಗೆ ತಂದರೆ ಚುನಾವಣೆಗಳಲ್ಲಿ ಆರಿಸಿ
ಬರುತ್ತೀರಿ ಮತ್ತು ನಿಮ್ಮ ಸರ್ಕಾರಕ್ಕೆ ಬಹು ಕಾಲ ಬೆಂಬಲ ದೊರೆಯುತ್ತದೆಂದು ಹೇಳುತ್ತಿದ್ದೇನೆ.
ಇವನ್ನು ನೀವು ಮಾಡುತ್ತಲೂ ಇಲ್ಲ, ಮಾಡುವುದೂ ಇಲ್ಲ, ಅದಕ್ಕೆ ಗಮನ ಕೊಡುವುದೂ ಇಲ್ಲ.

ಸ್ವಾಮಿ, ಪಾನನಿರೋಧದ ಬಗ್ಗೆ ಹೋದ ಸಾರಿ ಅಲ್ಲಿ ಇಲ್ಲಿ ಕೇಳುತ್ತಿದ್ದೆವು. ಅದರ ಬಗೆ
ಯೋಚನೆ ಮಾಡುತ್ತಿದ್ದಾರೆ, ಪಾನನಿರೋಧವನ್ನು ಸ್ವಲ್ಪ ಕಾಲ ತೆಗೆದು ಹಾಕಿ ಪುನಃ ಜಾರಿಗೆ ತರುತ್ತಾ

ರೆಂದು ಕೇಳಿದ್ದೆ. ಯಾರೋ ಹೇಳಿದರು. ಜನ ಮಾಡುವುದನ್ನು ಜಾರಿಗೆ ತರಬೇಕೆಂಬ ಇಚ್ಛೆಯಿತ್ತು. ಆದರೆ ಪಾರ್ಟಿ ಮೀಟಿಂಗ್‌ನಲ್ಲಿ—ಆಯಿತೋ ಇಲ್ಲವೋ ಗೊತ್ತಿಲ್ಲ, ಅವರು ಹೇಳಿದ್ದು—ಪಾನನಿರೋಧವನ್ನು ತೆಗೆದು ಹಾಕಿ ಕುಡಿಯುವುದನ್ನು ಜಾರಿಗೆ ತರುವುದಾದರೆ ನಾನು ರಾಜಿನಾಮೆ ಕೊಡುತ್ತೇನೆಂದು ಶ್ರೀಮಾನ್ ಬಿ. ರಾಚಯ್ಯನವರು ಹೇಳಿದರು.......

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ—ನೀರಾ ಕೇಂದ್ರಗಳೆಂದು ತೆಗೆಯಲಿ. ಹೆಸರು ಬೇರೆ ಇಡಬಹುದು.

ಶ್ರೀ ಜಿ. ಮರುಳಪ್ಪ.—ಸ್ವಾಮಿ, ಪುನಃ ಪಾನನಿರೋಧವನ್ನು ರದ್ದು ಮಾಡಬೇಕೆನ್ನುವುದರಲ್ಲಿ ಹರಿಜನರೇ ಆಗಲೀ, ಹಿಂದುಳಿದ ಜನಾಂಗದವರೇ ಆಗಲಿ ಯಾರಾದರೂ ಹಾಳಾಗಿ ಹೋಗಬೇಕು ಅವರು ಕಷ್ಟಪಡಬೇಕು ಎನ್ನುವ ಉದ್ದೇಶ ನಮಗೆ ಯಾರಿಗೂ ಇಲ್ಲ. ಕೇಂದ್ರದವರು ಯಾರೋ experts ಹೇಳುತ್ತಾರಂತೆ. ಇದು ಸರಿಯಿಲ್ಲ, ಮಹಾತ್ಮ ಗಾಂಧಿಯವರ ತತ್ವಕ್ಕೆ ವಿರೋಧವಾದುದು, ಒಂದು ಸಾರಿ ತೀರ್ಮಾನ ತೆಗೆದುಕೊಂಡ ಮೇಲೆ ಅದನ್ನು ವಾಪಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಪಾನನಿರೋಧವನ್ನು ಜಾರಿಗೆ ತಂದಿರುವುದರಿಂದ ಜನತೆಯ ಆರ್ಥಿಕ ಮಟ್ಟ ಹೆಚ್ಚಿದೆ ಎಂದು ಹೇಳಿದ್ದಾರಂತೆ. ಈ ರೀತಿಯಾಗಿ expert ಹೇಳಿದ್ದಾರೆಯೋ, ಯಾವ ಬೃಹಸ್ಪತಿ ಹೇಳಿದ್ದಾರೆಯೋ ಅವರು ನಮ್ಮ ದೇಶಕ್ಕೆ ಬರಲಿ. ಈ ದಿವಸ ಯಾವ ಊರಿಗೇ ಆಗಲೀ ಒಂದು ಪ್ರೋಗ್ರಾಂ ಕೊಡುವುದು ಬೇಡ, ಅವರು ಇಷ್ಟಪಟ್ಟ ಊರಿಗೆ ಹೋಗಲಿ. ನಾನು ಕೆಲವು ಅಂಶಗಳನ್ನು ಅವರಿಗೆ ತೋರಿಸುತ್ತೇನೆ. ನಾನು ತೋರಿಸುವ ನಿದರ್ಶನಗಳನ್ನೆಲ್ಲ ನೋಡಿದ ಮೇಲೆಯೂ ಪಾನನಿರೋಧವಿರುವುದೇ ಸತ್ಯ, ಅದಿರುವುದೇ ನ್ಯಾಯ, ಆದರಿಂದ ಜನತೆಗೆ ಅನುಕೂಲವಾಗಿದೆ, ಎಂದು ಹೇಳಿದರೆ ನಾನು ನನ್ನ ಕೈ ಕತ್ತರಿಸಿ ಹಾಕುತ್ತೇನೆ, ಇಲ್ಲವಾದರೆ ಅವರು ಅಧಿಕಾರಕ್ಕೆ ರಾಜಿನಾಮೆ ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಸ್ವಾಮಿ, ನಿಮಗೂ ಗೊತ್ತಿದೆ. ಆದರೆ ಹೇಳುವುದಕ್ಕಾಗುವುದಿಲ್ಲ, ಕಷ್ಟ. ಪ್ರತಿಮನೆಯಲ್ಲಿ, ಪ್ರತಿಗ್ರಾಮದಲ್ಲಿ ಪ್ರತಿ ಹೋಬಳಿಯಲ್ಲಿ ದೊಡ್ಡ ದೊಡ್ಡ ತೋಟಗಳಲ್ಲಿ ಎಲ್ಲಾ ಕಡೆಯೂ ಪಾನನಿರೋಧದಿಂದ ಆರ್ಥಿಕ ಮಟ್ಟ ಹೆಚ್ಚಿರುವುದು ನಿಜ. ಇದಕ್ಕೋಸ್ಕರ ಕೆಲವರು ಪುಡಾರಿಗಳು ಅದೇ ಉದ್ಯೋಗವನ್ನು ಮಾಡಿಕೊಂಡು, ಯಾರಿಗೆ ಹತ್ತು ರೂಪಾಯಿ ದುಡಿಯತಕ್ಕ ಶಕ್ತಿ ಇಲ್ಲವೋ ಅವರೆಲ್ಲರೂ ಲಕ್ಷಾಧೀಶರಾಗಿದ್ದಾರೆ. ಇಂಥವರು ಇವರಿಗೆ ಪ್ರೋತ್ಸಾಹ ಕೊಡುತ್ತಾರೆ.

ಪಾನನಿರೋಧವನ್ನು ಪೋಲೀಸಿನವರಿಗೆ ವಹಿಸುವುದಕ್ಕಿಂತ ಮುಂಚಿತವಾಗಿ ಪೋಲೀಸ್ ಇಲಾಖೆ ಸುವ್ಯವಸ್ಥಿತವಾಗಿತ್ತೋ ಏನೋ? ಪಾನನಿರೋಧವನ್ನು ಅವರಿಗೆ ವಹಿಸಿದ ಮೇಲೆ ಆ ಇಲಾಖೆ ಬಹಳ ಕೆಟ್ಟಿದೆ. ಜನಗಳು ಕಳ್ಳಭಟ್ಟಿ ತಯಾರಿಸುತ್ತಿದ್ದಾರೆಂದು ಹೇಳುವುದರ ಬದಲು ಇಲಾಖೆಯವರೇ ಅಲ್ಲಲ್ಲಿ ಸುವ್ಯವಸ್ಥಿತವಾಗಿ ನಡೆಸುತ್ತ ಜನಗಳಿಗೆ ರಕ್ಷಣೆ ಕೊಟ್ಟು ಅವರು ಪಾಲುದಾರರಾಗಿ ವ್ಯವಸ್ಥಿತವಾದ ಒಂದು industryಯನ್ನು ಕೈಕೊಂಡಿದ್ದಾರೆ. ಆ ಇಂಡಸ್ಟ್ರಿಯ ಪುಣ್ಯ ಅವರಿಗೆ ಬರಬೇಕೋ, ಇವರಿಗೆ ಬರಬೇಕೋ ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—(ಸಿರಾ) ಶ್ರೀಮಾನ್ ಎಂ. ವಿ. ರಾಮರಾಯರಿಗೆ ಹೋಗುತ್ತದೆ.

ಶ್ರೀ ಜಿ. ಮರುಳಪ್ಪ.—ಯಾರಿಗಾದರೂ ಹೋಗಲಿ, ನಾನು ವ್ಯಕ್ತಿ ದೇಶದ ಮೇಲೆ ಹೇಳುತಿಲ್ಲ. ಒಳ್ಳೆಯ ಕೆಲಸ, ಇದರಿಂದ ಜನತೆಗೆ ಒಳ್ಳೆಯದಾಗಬೇಕು ಎನ್ನುವ ಸದುದ್ದೇಶದಿಂದಲೇ ತಂದದ್ದು. ಆದರೆ ಯಾವಾಗ ನಿಮ್ಮ ಸದುದ್ದೇಶದಿಂದ ಜನತೆಗೆ ಒಳ್ಳೆಯದಾಗಲಿಲ್ಲವೋ, ಯಾವಾಗ ಅದರಿಂದ ಅನರ್ಥ ಹೆಚ್ಚಾಗುತ್ತ ಬಂತೋ ಆವಾಗ ದಿಟ್ಟತನದಿಂದ ನಿಮ್ಮ ತಪ್ಪನ್ನು ಒಪ್ಪಿಕೊಂಡು ಅದನ್ನು ವಾಪಸು ತೆಗೆದುಕೊಂಡರೆ ಪುಣ್ಯ ಬರುತ್ತದೆ.

ಸ್ವಾಮಿ, ಡೆಲ್ಲಿಯಲ್ಲಿ ಪಾನನಿರೋಧ ಮುಂದುವರಿಯಬೇಕೆಂದು ಹೇಳುತ್ತಾರೆಂದರೆ, ಅಲ್ಲಿ ಹೇಳಿದವರು ಪ್ಲಾನಿಂಗ್ ಕಮಿಷನವರು ಅಥವಾ ಬೇರೆ ಕಮಿಟಿಗಳವರು ಅವರು ಯಾರೇ ಆಗಿರಲಿ, ಇದನ್ನು theoretical ಆಗಿ ನೋಡದೆ practical ಆಗಿ ನೋಡಬೇಕು. ಜನತೆಗೆ ಒಳ್ಳೆಯದಾಗಬೇಕಾದರೆ, ಜನತೆ ಕುಡಿಯದಂತೆ ಮಾಡಬೇಕಾದರೆ ಅದಕ್ಕೆ ಬೇರೆ ಮಾರ್ಗವಿದೆ. ಈಗ ಏನಾಗುತ್ತಿದೆಯೆಂದರೆ, ಕಾನೂನಿಗೆ ಬಲವಿಲ್ಲದೆ ಹೋಗುತ್ತಿದೆ; ಸತ್ಯಕ್ಕೆ ಬೆಲೆ ಇಲ್ಲದೆ ಹೋಗುತ್ತಿದೆ; ನೀತಿಗೆ ಬೆಲೆ ಇಲ್ಲದೆ ಹೋಗುತ್ತಿದೆ, ಜೈಲು ಶಿಕ್ಷೆಗೂ ಬೆಲೆ ಇಲ್ಲದೆ ಹೋಗುತ್ತಿದೆ. ಇಂಥ ದುರ್ಮಾರ್ಗವನ್ನು ಈಗಿನಿಂದಲೇ ಮುಂದಿನ ಪೀಳಿಗೆಗೆ ಹಾಕಿ ಕೊಡುತ್ತಿದ್ದೇವೆ. ತಪ್ಪನ್ನು ತಿಳಿದೂ ತಿದ್ದಿಕೊಳದೆ ಹೋದರೆ ಮುಂದಿನ ಪೀಳಿಗೆಗೆ ಈಗಿನಿಂದಲೇ ಅನ್ಯಾಯ ಮಾಡಿದಂತೆ. ಇದರಿಂದ ದೇಶಕ್ಕೆ ಅನರ್ಥವಾಗುತ್ತದೆ. ಇದರಲ್ಲಿ ನೀವು ಯಶಸ್ವಿಯಾಗಿಲ್ಲ, ಆಗುವುದೂ ಇಲ್ಲ. ಯಾರಿಗೆ ಹೇಳಬೇಕೋ ಅವರಿಗೆ ಸರಿಯಾಗಿ ಹೇಳಿ. ಅವರಿಗೆ ಗ್ರಾಮಾಂತರ ಪ್ರದೇಶಗಳ ಅನುಭವವಿಲ್ಲದೆ ಡೆಲ್ಲಿಯ ಅನುಭವ

ಮಾತ್ರವಿದೆ. ಅವರನ್ನು ಸ್ವಲ್ಪ ನನ್ನ ಜೊತೆಗೆ ಕಳಿಸಿದರೆ ಅನುಭವ ಮಾಡಿಕೊಡುತ್ತೇನೆ. ಅವರು ಬಂದು ಕಣ್ಣಾರೆ ನೋಡಿ ನಾನು ಹೇಳಿದ್ದು ನಿಜವಾದರೆ ತಿದ್ದಿಕೊಳ್ಳಲಿ. ಆ ರೀತಿ ಆಗುವುದಿಲ್ಲವೆಂದು ಹಟ ಮಾಡಬೇಡಿ, ಜಯಶಾಲಿಗಳಾಗುವುದಿಲ್ಲ. ನಿಮ್ಮಲ್ಲಿ ನೀತಿ ಬದಲಾವಣೆಯಾಗಬೇಕು, ಶಾಂತತೆ ಇರಬೇಕು, ತಪ್ಪನ್ನು ತಿದ್ದಿಕೊಳ್ಳುವ ಶಕ್ತಿ ಬರಬೇಕು, ತಪ್ಪನ್ನು ಒಪ್ಪಿಕೊಳ್ಳುವ ಶಕ್ತಿ ಬರಬೇಕು. ಆವಾಗ ಮಾತ್ರ ಇದು ಸುಖೀ ರಾಜ್ಯವಾಗಬಲ್ಲದು, ಆವಾಗ ಪ್ರಜಾ ಪ್ರಭುತ್ವವೆನಿಸಿಕೊಳ್ಳುತ್ತದೆ. ಸ್ವಾಮಿ; ಇದನ್ನು ಮಾಡಿ ಮಹಾತ್ಮ ಗಾಂಧಿಯವರಿಗೆ ''ಮಹಾತ್ಮ'' ಎಂದು ಬಂದದ್ದು. ಏಕೆ? ಅವರೂ ನಮ್ಮಂತೆಯೇ ಮನುಷ್ಯರು, ಆದರೆ ಅವರು ತಪ್ಪು ಮಾಡಿದ್ದು ಕಡಮೆ.

ಸ್ವಾಮಿ, ಒಂದು ವಿಷಯವನ್ನು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದೇಶದಲ್ಲಿ ಪ್ರತಿಯೊಬ್ಬರೂ ಕೂಡ ಹೇಳುತ್ತಾರೆ. ಮಂತ್ರಿ ಮಂಡಲ ಬಹಳ ಜಾಸ್ತಿಯಾಗಿ ಬಿಟ್ಟಿತು, ಅದನ್ನು ಕಡಮೆ ಮಾಡಬೇಕು, ಎಂದು ನಮ್ಮ ಸ್ನೇಹಿತರಾದ ಶಿವಪ್ಪನವರು ಮಾತನಾಡುವಾಗ, ಶ್ರೀ ಎ. ಜಿ. ರಾಮಚಂದ್ರರಾಯರ ಕಮಿಟಿ ವರದಿಯಲ್ಲಿ ಎಂಟು ಜನ ಮಂತ್ರಿಗಳು ನಮ್ಮ ರಾಜ್ಯವನ್ನು ಆಳಬಲ್ಲರು ಎಂದು ತಿಳಿಸಿದ್ದಾರೆ, ಈಗಿರುವ ಮಂತ್ರಿ ಮಂಡಲ ಬಹಳ ಜಾಸ್ತಿ ಎಂದು ಹೇಳಿದರು. ರಾಮಚಂದ್ರ ರಾಯರ ರಿಪೋರ್ಟ್ ಈ ದೇಶವನ್ನು ಆಳುವುದಕ್ಕೆ ಮತ್ತು ಮಿತವ್ಯಯವನ್ನು ತೋರಿಸಲಿಕ್ಕೆ ಎಂಟು ಜನ ಮಂತ್ರಿಗಳು ಸಾಕು ಎಂದು ಹೇಳಿದರು. ಆದರೆ ಮಂತ್ರಿಮಂಡಲವು ಭದ್ರವಾಗಿ, ಅಧಿಕಾರ ವನ್ನು ಉಳಿಸಿಕೊಳ್ಳುವುದಕ್ಕೆ ಎಷ್ಟು ಜನ ಬೇಕು ಎಂದು ಏನಾದರೂ ಬರೆದಿದ್ದಾರೆಯೇ? ಅವರು ಹೇಳುವುದು ಬೇರೆ, ಇಲ್ಲಿಯ ಕಾರಣವೇ ಬೇರೆ. ಒಂದು ವಿಷಯವನ್ನು ನಾನು ಹೇಳುತ್ತೇನೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದರು, ಜನತೆಯ ಬೆಂಬಲವನ್ನು ಗಳಿಸಿದರು. ಸಂತೋಷ. ಅವರಿಗೆ ಸ್ವಲ್ಪ ಶಾಂತಿ ಬೇಕು. ನಾವೆಲ್ಲ ಶ್ರೀಮಾನ್ ನಿಜಲಿಂಗಪ್ಪನವರ ಹಿತೈಷಿಗಳು ಪಾರ್ಟಿ ಹಿತೈಷಿಗಳು. ಆದುದರಿಂದ party principle ಬಿಡುವುದಕ್ಕಾಗಲೀ, ನಮ್ಮ ನಾಯಕ ರಿಗೆ ಯಾವ ತರಹ ಧಕ್ಕೆ ತರುವುದಕ್ಕೆ ಆಗಲೀ, ತಯಾರಿಲ್ಲ. ಅವರ ಹಿಂದೆ ನಿಂತು ನಮಗೆ ಅಧಿಕಾರ ವಿರುವವರೆಗೂ ಸಹಾಯ ಮಾಡುತ್ತೇವೆಂದು ಹೇಳುತ್ತಾರೆ,

ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ಇವೊತ್ತು ಜನ ಹೇಳುತ್ತಾರೆ, ನೀವು ಇಪ್ಪತ್ತೈದುಜನ ಮಂತ್ರಿಗಳು ಶ್ರೀಮಾನ್ ನಿಜಲಿಂಗಪ್ಪನವರ ಇಂದಿನ ಕಷ್ಟಪರಿಸ್ಥಿತಿಯಲ್ಲಿ ಸಿಕ್ಕಿರುವುದರಿಂದ ಯಾವ ಕಾರ್ಯವನ್ನೂ ಕಾರ್ಯಗತಮಾಡಲಾಗುತ್ತಿಲ್ಲ ಎಂದು ಜನ ಮಾತಾನಾಡಿಕೊಳ್ಳುತ್ತಿರುವುದು ನಿಜ. ನಿಮ್ಮ ಹತ್ತಿರ ಸಹಾಯ ಮಾಡಬಹುದೆಂದು ಇಲ್ಲಿಯವರೆಗೂ ತಿಳಿದು ಇದ್ದೆವು. ಈಗಿನ ಪರಿಸ್ಥಿತಿಯಲ್ಲಿ ನೀವು ಇಪ್ಪತ್ತೈದು ಜನರೂ ರಾಜೀನಾಮೆ ಕೊಡಿ. ಶ್ರೀ ನಿಜಲಿಂಗಪ್ಪನವರು ಎಷ್ಟು ಜನರ ಆವಶ್ಯಕತೆ ಇದೆಯೋ ಅಷ್ಟನ್ನು ಅವರು ಇಟ್ಟುಕೊಳ್ಳಲಿ ಅವರು ಯಾರನ್ನು ಬೇಕಾದರೂ ಇಟ್ಟುಕೊಳ್ಳಲಿ. ಅದಕ್ಕೆ ನಾವು ತಯಾರಾಗಿದ್ದೇವೆಂದು ಹೇಳಿ. ನಮ್ಮ ರಾಜ್ಯದ ಜನತೆಯ ಇಷ್ಟದಂತೆ, ದೇಶದ ಹಿತ ದೃಷ್ಟಿಯಿಂದ, ಪಾರ್ಟಿಯ ಹಿತ ದೃಷ್ಟಿಯಿಂದ, ಮತ್ತು ಅವರ ಲೀಡರರ ಹಿತ ದೃಷ್ಟಿಯಿಂದ, ದೇಶದ ಎಲ್ಲರ ಹಿತ ದೃಷ್ಟಿಯಿಂದ, ನೀವು ಅವರ ಹಿತೈಷಿಗಳು ಆಗಿದ್ದರೆ ಈ ಕೆಲಸವನ್ನು ಮಾಡುವುದುಚಿತ. ಆ ರೀತಿ ನೀವು ಮಾಡುತ್ತೀರೆಂದು ನನಗೆ ನಂಬಿಕೆ ಇಲ್ಲ. ಸುಮ್ಮನೆ ಕುಳಿತಿರುವುದು ಒಳ್ಳೆಯದಲ್ಲ. ಸರಕಾರದಲ್ಲಿ ಎಕಾನಮಿ ಮಾಡುತ್ತೇವೆಂದು ಹೇಳುತ್ತಾರೆ. ಇದರ ಬಗ್ಗೆ ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ. ಒಬ್ಬರು ಉಪಮಂತ್ರಿಗಳು ಏಳು ದಿವಸಗಳಲ್ಲಿ ಹದಿನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡಿದ್ದಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಹತ್ತೊಂಬತ್ತು ಜಿಲ್ಲೆಗಳಿವೆ ಎನ್ನುವುದನ್ನು ಆರ್ಥಿಕಮಂತ್ರಿಗಳು ತಿಳಿದುಕೊಂಡಿದ್ದಾರೆಂದು ಹೇಳು ತ್ತಿದ್ದೇನೆ. ಸ್ವಾಮೀ ಈಚೆಗೆ ಮಲೆನಾಡಿನಲ್ಲಿ ಪ್ರವಾಹವಾಯಿತು. ಮತ್ತು ಜನರಿಗೆ ಎಷ್ಟೋ ಕಷ್ಟನಷ್ಟಗಳಾಯಿತು. ಇಲ್ಲ ಎಂದು ಹೇಳುತ್ತಿಲ್ಲ, ಎಷ್ಟೋ ಕಷ್ಟಗಳಾಗಿ ಮಳೆಯಿಲ್ಲದೆ ಬರಗಾಲಕ್ಕೆ ತುತ್ತಾಗಿದ್ದೇವೆ ಎಂದು ಯಾರಾದರೂ ಜನ ಬಂದು ಮಂತ್ರಿಗಳಬಳಿ ಹೇಳಿದರೆ, ಇದನ್ನೂ ಆಲೋಚನೆ ಮಾಡುತ್ತೇವೆ, ಡೆಪ್ಯುಟೀ ಮಿನಿಸ್ಟರಕಡೆಗೆ ಬರೆಸುತ್ತೇವೆ ಎಂದು ಹೇಳಿ ಹೋಗುವುದರಲ್ಲೇನು ಅರ್ಥವಿದೆ. ಇದನ್ನು ತಾವು ಯೋಚನೆ ಮಾಡಿಲ್ಲ. ಮಂತ್ರಿಗಳಾಗಿ ಈ ದೇಶದ ರಾಜ್ಯಭಾರವನ್ನು ವಹಿಸಲಿ ಎಂದು ಅವರೆಲ್ಲರೂ ನಿಮ್ಮ ಪಾರ್ಟಿಯಲ್ಲಿ ನಂಬಿಕೆಯಿಟ್ಟು ನಮಗೆ ಒಳ್ಳೆಯ ಹೆಸರನ್ನು ತರು ತ್ತಾರೆ ಎಂದು ನಿಮ್ಮನ್ನು ಮಂತ್ರಿಗಳನ್ನಾಗಿ ಜನ ಮಾಡಿದರೆ ಇದನ್ನೂ ನೀವು ಯೋಚನೆ ಮಾಡದೆ ಏಳು ದಿವಸಗಳಲ್ಲಿ ಹದಿನಾಲ್ಕು ಜಿಲ್ಲೆಗಳಲ್ಲಿ ಸಂಚಾರಮಾಡಿ ಏನು ಕ್ರಾಂತಿಕಾರಕವಾದ ವ್ಯವಹಾರ ವನ್ನು ಮಾಡಿದಿರಿ ಎನ್ನುವುದನ್ನು ಎಲ್ಲಿಯೂ ಹೇಳಲಿಲ್ಲ. ನೀವು ಏನು ಮಾಡಿದ್ದೀರಿ ಎಂದು ನೋಡಿ ದರೆ, ಹಳ್ಳಿಜನಗಳ ಬಳಿ ಹೋಗಿ ಚೀನಾ ಯುದ್ಧಬಂದು ನಮ್ಮನ್ನು ಆವರಿಸಿಬಿಟ್ಟಿದೆ, ಅದಕ್ಕಾಗಿ ಹೆಚ್ಚಿನ ದುಡ್ಡನ್ನು ಕೊಡಿ ಎಂದು ಹೊಡೆದು, ಬಡಿದು, ಕ್ರಾಂತಿ ಮಾಡಿಬಿಟ್ಟು ಬಂದಿದ್ದೀರಿ. ಇದು ತೀರ ಅವಮಾನಕರವಾದ ಕೆಲಸ. ಇಂತಹವರನ್ನು ಸರಿಯಾದ ಲಗಾಮು ಹಾಕಿ ಹಿಡಿದುಕೊಳ್ಳ ತಕ್ಕಂತಹ ಜವಾಬುದಾರಿ ದೇಶದ ಆಡಳಿತವನ್ನು ಹೊತ್ತಿರತಕ್ಕ ನಾಯಕರಿಗೆ ಸೇರಿರತಕ್ಕ ಜವಾಬು

(ಶ್ರೀ ಜಿ. ಮರುಳಪ್ಪ)

ದಾರಿಯಾಗಿದೆ. ಆದರೂ ಅವರು ಅಧಿಕಾರವನ್ನು ಚಲಾಯಿಸಬಾರದು ಏಕೆಂದರೆ ಇವರೆಲ್ಲ ಪದವೀಧರರು, ಅಲ್ಲದೆ ಜನತೆಯ ನಾಯಕರಾಗಲು ಅರ್ಹರು ಎಂದು ಅವರಲ್ಲಿ ಗೌರವವನ್ನು ಇಟ್ಟುಕೊಂಡಿದ್ದಾರೆ. ಸರಳ ಜೀವನವನ್ನು ನಮ್ಮ ನಾಯಕರು ಅನುಸರಿಸಬೇಕು ಎಂದು ಮಹಾತ್ಮ ಗಾಂಧಿಯವರು ಹೇಳಿದ್ದರು. ಮಹಾತ್ಮ ಗಾಂಧಿಯವರು ಗ್ರಾಮಗಳಲ್ಲಿರತಕ್ಕ ಬಡವರಾಗಿರುವವರನ್ನೂ, ರೈತರನ್ನೂ ಮುಂದಕ್ಕೆ ತರುವಂತಹ ಭಾವನೆಯನ್ನು ಹೊಂದಿ ಸುಖರಾಜ್ಯವಾಗಿರತಕ್ಕ ಯೋಚನೆ ಇಟ್ಟುಕೊಂಡು ಬಹಳ ಒಳ್ಳೆಯ ಉದ್ದೇಶದಿಂದ ಇಂತಹವರನ್ನು ಆಡಳಿತ ನಡೆಸಲು ಅವಕಾಶ ಕೊಟ್ಟುಬಿಟ್ಟರು. ಈಗ ಈ ಮಂತ್ರಿಗಳ ಟೂರು ಪ್ರೋಗ್ರಾಮನ್ನು ತೆಗೆದುಕೊಂಡು ನೋಡಿದರೆ, ಯಾವ ಯಾವ ಜಿಲ್ಲೆಗಳಿಂದ ಯಾವ ಯಾವ ಮಂತ್ರಿಗಳು ಚುನಾಯಿತರಾಗಿರುತ್ತಾರೋ ಅಂತಹ ಜಿಲ್ಲೆಗಳಿಗೆ ಎಷ್ಟು ಸಾರಿ ಹೋಗಿದ್ದಾರೆ ಎನ್ನುವುದು ತಿಳಿಯುತ್ತದೆ. ಯಾವುದಾದರೂ ಅವರ ಸ್ನೇಹಿತರ ಮದುವೆಗೋಸ್ಕರ ಅಥವಾ ಯಾವುದಾದರೂ ಸ್ವಂತ ಕೆಲಸವಿದ್ದರೆ, ಅವರ ಎಲ್ಲ ವ್ಯವಹಾರಗಳನ್ನೂ ಮಾಡಿಕೊಳ್ಳಲು ಟೂರು ಹಾಕಿಕೊಂಡು ಹೋಗುತ್ತಾರೆ. ಈ ರೀತಿ ಮಂತ್ರಿಗಳಾಗಲೀ ಡೆಪ್ಯುಟಿ ಮಿನಿಸ್ಟರಾಗಲೀ ಈ ರೀತಿ ಟೂರು ಹೋಗುವುದು ನ್ಯಾಯವಲ್ಲ. ಇದಕ್ಕಾಗಿ ಒಂದು ಕಾರ್ಯಕ್ರಮವನ್ನೂ ಹಾಕಿಕೊಳ್ಳಬೇಕು. ಬೇಕಾದರೆ ಮುಖ್ಯ ಮಂತ್ರಿಗಳೇ ಅವರಲ್ಲೇ ಒಂದು ಕಮಿಟಿಮಾಡಿ ಇಂತಿಂತಹ ತಿಂಗಳುಗಳಲ್ಲಿ ಇಂತಿಂತಹ ಮಂತ್ರಿಗಳು ಇಂತಹ ಜಿಲ್ಲೆಗಳಲ್ಲಿ ಪ್ರವಾಸ ಮಾಡಬೇಕೆಂದು ಮಾಡಬೇಕು. ಅಲ್ಲದೆ ಈ ಮಂತ್ರಿಗಳು ಎಲ್ಲೆಲ್ಲಿ ಹೋಗುತ್ತಾರೋ ಅಂತಹವರಿಗೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳ ಫೈಲನ್ನೂ ಹದಿನೈದು ದಿವಸಗಳಿಗೆ ಮುಂಚೆ ಅವರ ಆಫೀಸಿಗೆ ಕಳುಹಿಸಬೇಕು. ಮತ್ತು ಅದಕ್ಕೇನು ಉತ್ತರ ಕೊಡಬೇಕೋ, ಅವರ ಕಷ್ಟ ನಷ್ಟಗಳೇನು ಎನ್ನುವುದನ್ನು ತಿಳಿದು ಸಾಧ್ಯವಾದಷ್ಟು ಅವನ್ನು ನಿವಾರಣೆ ಮಾಡತಕ್ಕಂತಹ ಒಂದು ಕಾರ್ಯಕ್ರಮವನ್ನು ತಾವು ಅನುಸರಿಸಬೇಕು. ಎಂದು ಹೇಳುತ್ತೇನೆ. ಈಗ ಹಾಗೇನೂ ಮಾಡುತ್ತಿಲ್ಲ. ಎಲ್ಲೆಲ್ಲಿಯೂ ಇವರ ಓಡಾಟಗಳೇ ಆಗಿರುತ್ತವೆ. ಎಲ್ಲಿ ಹೋಗಿ ನೋಡಿದರೂ ಟಿ. ಬಿ. ಗಳು ಖಾಲಿಯಾಗಿರುವುದಿಲ್ಲ. ಅಲ್ಲದೆ ಅಲ್ಲಿಗೆ ಬರುವಂತಹ ಜನರು ಕೊಟ್ಟ ಅರ್ಜಿಗಳಿಗೆ ತೀರ್ಮಾನವನ್ನೇನೂ ಅಲ್ಲಿ ಹೇಳುವುದಿಲ್ಲ. ಇದು ನಿಮಗೆ ಒಳ್ಳೆಯ ಹೆಸರನ್ನು ತರುವಂತಹುದಲ್ಲ. ನಿಮ್ಮನ್ನು ಟೀಕೆ ಮಾಡುವುದಕ್ಕಾಗಿ ಹೇಳುತ್ತಿಲ್ಲ. ನಿಮ್ಮ ಸಂಪತ್ಸಾಧನೆಯ ನೀತಿ ಸರಿಯಾಗಿರಬೇಕಾಗಿದ್ದರೆ, ನಿಮ್ಮ ಜನಕ್ಕೆ ಪ್ರಯೋಜನವಾಗಬೇಕಾಗಿದ್ದರೆ, ನ್ಯಾಯವಾಗಬೇಕಾಗಿದ್ದರೆ, ಶಾಂತಿಯಿಂದಕೂಡಿ ಅನ್ಯಾಯವಾಗುತ್ತಿರುವುದನ್ನು ಸರಿಪಡಿಸಿಕೊಂಡು ಜನಕ್ಕೆ ಪ್ರಯೋಜನವಾಗುವಂತೆ ನಿಮ್ಮ ರೀತಿ ನೀತಿಗಳನ್ನು ತಿದ್ದಿಕೊಳ್ಳಿ ಎಂದು ನಾನು ಕಳಕಳಿಯಿಂದ ತಮ್ಮಿಂದ ಒಳ್ಳೆಯದಾಗಲಿ ಎಂದು ನಾನು ಹೇಳಬಯಸುತ್ತೇನೆ.

ಸ್ವಾಮೀ ನನಗೆ ತಿಳಿದಮಟ್ಟಿಗೆ, ಯಾರೂ ಅಗರ್ಭಶ್ರೀಮಂತರೇ ಆಗಲೀ ಅಥವಾ ಶ್ರೀಮಂತ ಮನೆತನಕ್ಕೆ ಸೇರಿಬಂದಿರತಕ್ಕವರು ಮಂತ್ರಿಗಳಾಗಿಲ್ಲ. ಬಡತನವನ್ನು ಚೆನ್ನಾಗಿ ತಿಳಿದು ಬಡತನದಲ್ಲೇ ಹುಟ್ಟಿದವರು ಜನತೆಯ ಪ್ರೇಮವನ್ನು ಪಡೆದವರೇ ಆಗಿ ಮಂತ್ರಿಗಳಾಗಿ ಅಧಿಕಾರಕ್ಕೆ ಬಂದ ಮೇಲೆ ಅವರಿಗೆ ಸಂಬಳ ಆರುನೂರು ರೂಪಾಯಿಗಳು ಮತ್ತೆ ಅವರಿಗೆ ಮನೆಬಾಡಿಗೆ ಎಂಟುನೂರು ರೂಪಾಯಿಗಳು ನ್ಯಾಯವೆ ? ನಾವು ಹೇಳುವುದು ನಿಮಗೆ ಮನೆಬೇಕು. ಅಡವೀಲಿ ಹೋಗಿ ಇರಿ ಎಂದು ಅವರನ್ನು ಹೇಳುವುದಿಲ್ಲ. ಬೆಂಗಳೂರಿನಲ್ಲಿ ಕಟ್ಟಡಗಳಿಲ್ಲದೇ ಇರುವುದಕ್ಕೆ ಆಗುವುದಿಲ್ಲ. ಸರಕಾರಕ್ಕೆ ಮಂತ್ರಿಗಳಾಗಿ, ಮುಖ್ಯ ಮಂತ್ರಿಗಳಾಗಿ ಬರುವುದು ನ್ಯಾಯವಲ್ಲ ಎಂದು ಹೇಳುತ್ತಿಲ್ಲ. ನೀವು ಮಾಡುವಂತಹ ಕೆಲಸ ಬಡವರಾಗಿ ಬಡತನದಿಂದಲೇ ಬಂದು ಸಂಬಳ ಆರುನೂರು ರೂಪಾಯಿಗಳು ಮತ್ತು ಮನೆ ಬಾಡಿಗೆಗಾಗಿ ಎಂಟುನೂರು ರೂಪಾಯಿಗಳೆಂದೇಕೆ ತೆಗೆದುಕೊಳ್ಳಬೇಕು ? ಇವೊತ್ತು ನೂರು ಅಥವಾ ಇನ್ನೂರು ರೂಪಾಯಿಗಳಲ್ಲಿ ನಿಮಗೆ ಮನೆಗಳು ಸಿಕ್ಕುತ್ತಿರಲಿಲ್ಲವೇ ? ದೊಡ್ಡ ದೊಡ್ಡ ರೆಂಟುಕಂಟ್ರೋಲು ಆಫೀಸಿನ ಆಡಳಿತವೇ ನಿಮ್ಮ ಕೈಕೆಳಗಿವೆ. ಈ ತರಹದ ಸರಳ ಜೀವನವನ್ನು ಜನತೆಗೆ ತೋರಿಸಬೇಕು. ಫೆಬ್ರವರಿ ೨೮ ರಂದು ಎಲೆಕ್ಷನ್ನಾದಾಗ ನೀವುಗಳು ಮನೆ ಮನೆಗೆ ಹೋಗಿ, ಹಳ್ಳಿ ಹಳ್ಳಿಗಳಿಗೂ ಬಡ ಜನರ ಮನೆಗೆ ಹೋಗಿ ಅಲ್ಲಿ ಅವರು ಕೊಟ್ಟ ಚಾಪೆಯ ಮೇಲೆ ಮಲಗಿಕೊಂಡು, ಕಾಫೀ ಕುಡಿದುಬಿಟ್ಟು, ಕಷ್ಟಪಟ್ಟು ವೋಟನ್ನು ತೆಗೆದುಕೊಂಡು ಅನುಭವವನ್ನು ಪಡೆದು ಚುನಾವಣೆಯಾದ ಹದಿನೈದು ದಿನಗಳ ಮೇಲೆ ಮಂತ್ರಿಗಳಾಗಿ ಜನತೆಯ ಪ್ರೇಮವನ್ನು ಪಡೆದು ಬಂದು ಇಂತಹ ಜನಕ್ಕೆ ಕೇಡು ಮಾಡುವುದು ಸರಿಯೇ ನೀವೇ ಹೇಳಿ. ಯಾವಾಗ ಮಂತ್ರಿಯಾಗಿ ಅಧಿಕಾರದಲ್ಲಿ ಕುಳಿತಾಕ್ಷಣ ನಿಮ್ಮ ಬಡತನವನ್ನು ನೀವು ಮರೆಯದೆ ಸರಳ ಜೀವನವನ್ನು ನೀವು ಮುಂದುವರಿಸಿದ್ದರೆ ನಿಮ್ಮ ಪಾರ್ಟಿಗೂ ಗೌರವವು ಹೆಚ್ಚುತ್ತದೆ. ಈ ಪರಿಸ್ಥಿತಿಗೆ ಬಂದರೆ ಈ ಸರಳಜೀವನ ಈ ದೇಶಕ್ಕೂ ಹರಡುತ್ತದೆ. ಸರಳ ಜೀವನವನ್ನು ನಡೆಸುತ್ತಾರೆ,

ಬಡತನವನ್ನು ನಿವಾರಣೆ ಮಾಡಲು ಪ್ರಯತ್ನಿಸುತ್ತಾರೆ ಎಂದು ನಿಮ್ಮನ್ನು ಬಡತನದ ಜನತೆ ಮೇಲಕ್ಕೆತ್ತಿ ಅಧಿಕಾರವನ್ನು ಕೊಟ್ಟಿದೆ. ಅಧಿಕಾರಕ್ಕೆ ಬಂದು ನೀವು ಇಷ್ಟು ದಿವಸವಾದರೂ ಇಂತಹ ಬಡ ಜನರನ್ನು ಮರೆತುಬಿಟ್ಟಿದ್ದಾರೆ, ಇದೇಕೋ ಏನೋ ಎಂದು ಜನ ನೋಡುತ್ತಿದ್ದಾರೆ. ಒಬ್ಬ ಉಪಮಂತ್ರಿಗಳು ಏಳು ದಿನದಲ್ಲಿ ಹದಿನಾಲ್ಕು ಜಿಲ್ಲೆಗಳಲ್ಲಿ ಟೂರು ಮಾಡಿದ್ದಾರೆ. ಅಲ್ಲದೆ ಈ ಮಂತ್ರಿಗಳಿಗೆ ತಿಂಗಳಿಗೆ ಆರು ನೂರು ಸಂಬಳ, ಆರು ನೂರು ರೂಪಾಯಿಗಳಷ್ಟು ಬಾಡಿಗೆ ಎಂದು ನೀವು ಈ ರೀತಿಯ ನೀತಿಗಳನ್ನನುಸರಿಸಿದರೆ, ನಿಮಗೆ ಒಳ್ಳೆಯದಾಗುವುದಿಲ್ಲ. ನಿಮ್ಮಲ್ಲಿ ನಂಬಿಕೆ ಇಟ್ಟುಕೊಂಡು ಯಾರು ನಿಮ್ಮನ್ನು ಮಂತ್ರಿಯನ್ನಾಗಿ ಮಾಡಿದರೋ ಅವರಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಮತ್ತು ದೇಶಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ದಯಮಾಡಿ ಆ ಪರಮಾತ್ಮ ನಿಮಗೆ ಒಳ್ಳೆಯ ಬುದ್ಧಿಯನ್ನೂ ಶಕ್ತಿಯನ್ನೂ ಕೊಡಲಿ ಎಂದು ಕೈ ಮುಗಿದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ದೇಶದ ಹಿತ ದೃಷ್ಟಿಯಿಂದ ಈ ಮಾತು ನಾನು ಹೇಳುತ್ತೇನೆ. ಈ ತುರ್ತುಪರಿಸ್ಥಿತಿ ಎನ್ನುವುದನ್ನು ಎಲ್ಲದಕ್ಕೂ ಅನ್ವಯಿಸುವ ಹಾಗೆ ಮಾಡಬೇಕು. ದೇಶಕ್ಕೆ ಒಳ್ಳೆಯದಾಗುವುದನ್ನು ಮಾಡಿರಿ. ಆ ರೀತಿ ಮಾಡುವುದಕ್ಕೆ ಕಲಿಯಿರಿ ಎಂದು ಹೇಳುತ್ತೇನೆ. ಇದನ್ನು ವೇಲಿಂದ ಮೇಲೆ ನಿಮಗೆ ಹೇಳಬೇಕಾಗುತ್ತದೆ. ನಾವೆಲ್ಲರೂ ಹಳ್ಳಿಯಿಂದ ಬಂದಿರುವ ಹಳ್ಳಿಗರು. ಹಳ್ಳಿಗಾಡಿನ ಜನರ ಹಿತವನ್ನು ನೋಡಬೇಕು. ರಾಜ್ಯದ ಎರಡು ಕೋಟಿ ಜನರ ಹಿತದೃಷ್ಟಿ ನಿಮ್ಮಲ್ಲಿ ಇರಬೇಕು. ಸ್ವಾಮಿ ನಿಜವಾಗಿಯೂ ಕಷ್ಟದಲ್ಲಿರತಕ್ಕಂಥ, ಅವಿದ್ಯಾವಂತನಾಗಿರತಕ್ಕಂಥ, ಸುಖ ಸಂಪತ್ತನ್ನು ಕಾಣದೇ ಇರತಕ್ಕಂಥ ರೈತನ ಹಿತದೃಷ್ಟಿ ಇರುವ ಧ್ಯೇಯ ನಿಮ್ಮ ಕಾರ್ಯದಲ್ಲಿರಲಿ. ನಿಮ್ಮ ಎಲ್ಲ ಯೋಜನೆಗಳಿಂದ ಬಡ ರೈತನ ಅಭ್ಯುದಯ ಸಾಧಿಸುವ ಪ್ರಯತ್ನ ಮಾಡಬೇಕು. ಇದನ್ನು ಮೊದಲು ಯೋಚನೆ ಮಾಡಬೇಕು. ಪರಮಾತ್ಮನು ನಿಮಗೆ ಇದರ ಸಾಧನೆಗಾಗಿ ಜ್ಞಾನ ಶಕ್ತಿ ದಯಪಾಲಿಸಲಿ, ನಮ್ಮ ದೇಶದ ಶೇಕಡ 80ರಷ್ಟು ಜನ ಹಳ್ಳಿಗರು ನಿಮ್ಮಲ್ಲಿ ವಿಶ್ವಾಸವಿಟ್ಟು ನಂಬಿಕೆ ಇಟ್ಟು, ತಮ್ಮ ಕಷ್ಟ ಬಗೆಹರಿಸುತ್ತೀರಿ ಎಂದು ಭ್ರಾಂತಿಯಿಂದ ನಿಮಗೆ ಓಟು ಕೊಟ್ಟು ಈ ಅಧಿಕಾರದ ಸ್ಥಾನಕ್ಕೆ ಕುಳಿಸಿದ್ದಾರೆ. ಅವರಿಗೆ ಒಳ್ಳೇದು ಮಾಡುವ ಶಕ್ತಿ ನಿಮಗೆಬರಲಿ ಮತ್ತು ಆ ರೀತಿ ಮಾಡಬೇಕೆಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ.

4-00 P.M.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಶಹಾ (ಬಾಗೇವಾಡಿ).—ಮಾನ್ಯ ಸಭಾಪತಿಗಳೇ, ನಮ್ಮ ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರು 1963-64ನೇ ಸಾಲಿನ ಬಜೆಟ್ಟನ್ನು ಯಾವ ಹೊಸ ತೆರಿಗೆಯಿಲ್ಲದೆ ಈ ಮಾನ್ಯ ಸಭೆಯಲ್ಲಿ ಮಂಡಿಸಿದ್ದನ್ನು ನಾನು ಸ್ವಾಗತಿಸುತ್ತೇನೆ. ನಮ್ಮ ದೇಶದ ಪ್ರಗತಿ ಸಾಧನೆಗೋಸ್ಕರ ಎಲ್ಲರ ಉತ್ಕರ್ಷಕ್ಕೋಸ್ಕರ ಈ ವರ್ಷದ ಬಜೆಟ್ಟಿನ ಮಾನ್ಯ ಸಚಿವರು ಅಗ್ರಿಕಲ್ಚರ್ ಬಾಬಿಗೆ ಹೆಚ್ಚು ಹಣ ಒದಗಿಸಿ ಬಹಳ ಒಳ್ಳೆಯ ಕೆಲಸ ಮಾಡಿರುತ್ತಾರೆ. ತಗಾಯಿ ಸಾಲ, ಬಾವಿ ತೆಗೆಸುವುದಕ್ಕೆ ಹಣ, ಪಂಪ್‌ಸೆಟ್ಟು ಕೂಡಿಸುವುದಕ್ಕೆ ಸಾಲ ಒದಗಿಸುವುದು ಬರಗಾಲ ಕೊನೆಗಾಣಿಸಲು ಯೋಜನೆಗೆ ಹಣ ಒದಗಿಸಿರುವುದಕ್ಕೆ ಮಾನ್ಯ ಅರ್ಥ ಸಚಿವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆ. ಬಾವಿ ತೆಗೆಸುವುದಕ್ಕೆ ಕೊಡುವ ಸಾಲ ರೈತರಿಗೆ ದೊರೆಯುವದರಲ್ಲಿ ಸ್ವಲ್ಪ ತೊಂದರೆಯಾಗಿದೆ. ಈ ಸಾಲ ಅಕ್ಟೋಬರ್ ನವಂಬರ್ ತಿಂಗಳಿನಲ್ಲಿ ಕೊಡುವದಿಲ್ಲ. ಈ ಹಣ ಜನವರಿ, ಫೆಬ್ರುವರಿ ಅಥವಾ ಮಾರ್ಚಿ ತಿಂಗಳಿನಲ್ಲಿ ಬರುತ್ತದೆ. ಫೆಬ್ರವರಿ ತಿಂಗಳಿನಲ್ಲಿ ಡೆಪ್ಯೂಟಿ ಕಮಿಷನರ್ ಕಡೆಗೆ ಈ ಹಣ ಬರುತ್ತದೆ. ಅವರು ಅನಂತರ ತಹಶೀಲದಾರರಿಗೆ ತಿಳಿಸುತ್ತಾರೆ. ತಾಲ್ಲೂಕ್ ಆಫೀಸಿಗೆ ಬರಲು ತಡವಾಗುತ್ತದೆ. ಯಾಕೆಂದರೆ ನಮ್ಮ ವಿಜಾಪುರ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ತಾಲ್ಲೂಕುಗಳಿವೆ. ಒಂದೊಂದು ತಾಲ್ಲೂಕಿನಲ್ಲಿ 130ರ ವರೆಗೆ ಹಳ್ಳಿಗಳಿವೆ. ಅಷ್ಟು ದೂರವಿರುವ ಹಳ್ಳಿಗಳಿಂದ ಅರ್ಜಿ ತೆಗೆದುಕೊಂಡು ಬಂದು ಹಣ ಪಡೆಯುವುದಕ್ಕೆ ಬಡ ರೈತನಿಗೆ ಬಹಳ ತೊಂದರೆಯಾಗುತ್ತದೆ. ಕೆಲವು ಕಡೆ ಅರ್ಜಿಗಳು ಬಂದಿದ್ದರೂ ಸಹ ಹಣ ಮಂಜೂರು ಮಾಡುವುದಿಲ್ಲ. ಆಡಳಿತದಲ್ಲಿ ತಡವಾಗುವುದರಿಂದ ಮಂಜೂರಾದ ಹಣ ಲ್ಯಾಪ್ಸ್ ಆಗುತ್ತದೆ. ಇದರಿಂದ ಒಳ್ಳೆಯ ಕೆಲಸ ಮಾಡುವ ರೈತನಿಗೆ ತೊಂದರೆಯಾಗುತ್ತದೆ. ಆದುದರಿಂದ ಈ ತೊಂದರೆ ತಪ್ಪಿಸಲು ಬಾವಿಯ ಸಲುವಾಗಿ ತಗಾಯಿ ಸಾಲದ ಹಣವನ್ನು ರೈತನಿಗೆ ಅಕ್ಟೋಬರ್-ನವಂಬರ್ ತಿಂಗಳಿನಲ್ಲಿ ಕೊಡುವ ವ್ಯವಸ್ಥೆ ಮಾಡಬೇಕು. ಪಂಪ್‌ಸೆಟ್ ಸಲುವಾಗಿ ಹಣ ಒದಗಿಸುವ ವಿಚಾರದಲ್ಲಿಯೂ ಕೂಡ ತಡವಾಗಿದೆ. ವಿಜಾಪುರ ಜಿಲ್ಲೆಯಲ್ಲಿ ಅನೇಕ ಕಡೆ ಪಂಪ್‌ಸೆಟ್ಟುಗಳಿಲ್ಲ. ಸಾಮಾನ್ಯವಾಗಿ ನಮ್ಮ ವಿಜಾಪುರ ಜಿಲ್ಲೆಯಲ್ಲಿ ಕಿರ್ಲೋಸ್ಕರ ಪಂಪ ತೆಗೆದುಕೊಳ್ಳುತ್ತಾರೆ. ಪಂಪ್‌ಸೆಟ್ಟು ದೊರೆತಾಗ ಹಣ ಒದಗಿಸುವದಿಲ್ಲ. ಕೆಲವು ಕಡೆ ಬಾವಿ ತಯಾರಾಗಿರುತ್ತವೆ. ಆದರೆ ಪಂಪಸೆಟ್ ಸಿಕ್ಕುವುದಿಲ್ಲ. ಈ ಅನನುಕೂಲತೆಯನ್ನು ಹೋಗಲಾಡಿಸಬೇಕು, ಮತ್ತು ರೈತನಿಗೆ ಎಲ್ಲ ಅನುಕೂಲತೆ ಮಾಡಿ

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಶಹಾ)

ಕೊಡಬೇಕು. ಈ ವರ್ಷ ಟ್ರ್ಯಾಕ್ಟರ್ಸ್ ಬುಲ್ ಡೋಜರ್ಸ್ ರೈತನಿಗೆ ಒದಗಿಸಿಕೊಟ್ಟರೆ ಮುಂದಿನ ವರ್ಷ ಹೆಚ್ಚು ಅನುಕೂಲವಾತ್ತದೆ. ನೀರಾವರಿ ಬಾವಿಗಾಗಿ ಹೆಚ್ಚು ಹಣ ಒದಗಿಸಿರುವದಕ್ಕಾಗಿ ನಮ್ಮ ಸರ್ಕಾರವನ್ನು ಅಭಿನಂದಿಸುತ್ತೇನೆ.

ನಮ್ಮ ಜಿಲ್ಲೆಗೆ ಮೊನ್ನೆತಾನೆ ಪಿ.ಡಬ್ಲ್ಯು.ಡಿ. ಮಿನಿಸ್ಟರು ಬಂದಿದ್ದರು. ಪ್ರತಿಯೊಂದು ತಾಲ್ಲೂಕಿಗೆ 50 ಮೈಲು ರೋಡ ಕೊಡುತ್ತೇವೆಂದು ಹೇಳಿದರು. ಇದು ಒಳ್ಳೆಯದು, ಆದರೆ ಈ ಕೆಲಸಕ್ಕೆ ಸರಿಯಾಗಿ ಹಣ ಕೊಡುವದಿಲ್ಲ, ರಸ್ತೆ ರಚನೆಗಾಗಿ ಹಳ್ಳಿಗರಿಂದ ಹೊಲ ಮೊಫತ್ತಾಗಿ ತೆಗೆದುಕೊಳ್ಳುತ್ತಾರೆ. ರಸ್ತೆ ರಚನೆ ಮಾಡುತ್ತೇವೆಂದು ಹೇಳಿ ಬಡ ರೈತನ ಭೂಮಿಯನ್ನು ತೆಗೆದುಕೊಳ್ಳುತ್ತಾರೆ. ಎಲ್ಲರ ಕಲ್ಯಾಣಕ್ಕಾಗಿ ಬಡ ರೈತನು ಭೂಮಿ ಕೊಡುವುದಕ್ಕೆ ಸಿದ್ಧನಾಗುತ್ತಾನೆ. ಆದರೆ ರಸ್ತೆ ರಚನೆ ಕೆಲಸ ಮುಂದುವರಿಯುವುದಿಲ್ಲ. ರಸ್ತೆ ಅಗೆದು ಬಿಟ್ಟು ಮಣ್ಣು ಹಾಕುತ್ತಾರೆ. ಆದರೆ ಮಳೆ ಬಂದಮೇಲೆ ಎಲ್ಲ ಮಣ್ಣು ಕೊಚ್ಚಿಹೋಗುತ್ತದೆ. ಇಂಥ ರಸ್ತೆಗಳಿಗೆ ತಾಯಿ ತಂದೆ ಯಾರೂ ಇರುವದಿಲ್ಲ, ಬಡ ರೈತನ ಭೂಮಿ ಹೋಗುತ್ತದೆ ರಸ್ತೆಯು ಆಗುವದಿಲ್ಲ. ಅಂಥಲ್ಲಿ ಬಂಡಿಗಳು ಓಡಾಡುವದಿಲ್ಲ. ಈ ರೀತಿ 50 ಮೈಲು ರಸ್ತೆ ಕೊಡುವದರ ಬದಲು ಚೆನ್ನಾಗಿರುವ 25 ಮೈಲು ರಸ್ತೆ ಕೊಟ್ಟರೆ ಸಾಕು ಎಂದು ಅನಿಸುತ್ತದೆ. ಈ ರಸ್ತೆ ರಚನೆ ವಿಚಾರದಲ್ಲಿ ಪಿ.ಡಬ್ಲ್ಯು.ಡಿ.ಯವರು ದೇಶ ರೇಖಾ ಮಾಡುವುದು ಅಗತ್ಯ. ನಮ್ಮ ಪಿ.ಡಬ್ಲ್ಯು.ಡಿ.ಮಂತ್ರಿಯವರಿಗೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಹುಬ್ಬಳ್ಳಿಯಿಂದ ವಿಜಾಪುರವರೆಗೆ ಒಂದು ರಸ್ತೆ ಇದೆ. ಅದು ಬಾಗಲಕೋಟ ಮೇಲಿಂದ ಹೊಗುತ್ತದೆ. ಬಾಗಲಕೋಟ ವಿಜಾಪುರ ರೋಡ ಮೇಲೆ ಕೊಲ್ಹಾರ ಎಂದು ಒಂದು ಊರಿದೆ. ಅಲ್ಲಿ ಕೃಷ್ಣಾನದಿಗೆ ಸರಿಯಾದ ಬ್ರಿಜ್ ಇಲ್ಲ. ಮಳೆಗಾಲದಲ್ಲಿ ನದಿಗೆ ನೀರು ಬಂದು ರೋಡ್ ಬಂದಾಗುತ್ತದೆ. ಇದರಿಂದ ನಮ್ಮ ಜಿಲ್ಲೆಯಲ್ಲಿ ಟ್ರಾಫಿಕ್ ಬಂದಾಗುತ್ತದೆ. ಜನರು ಬಳಸಿಕೊಂಡು ರೇಲ್ವೆಯಿಂದ ಬರಬೇಕಾಗುತ್ತದೆ. ಈ ತೊಂದರೆ ತಪ್ಪಿಸಬೇಕಾದುದು ಅಗತ್ಯವಾಗಿದೆ. ಮಂತ್ರಿಗಳು ಇದಕ್ಕೆ ತೀವ್ರ ಗಮನ ಕೊಟ್ಟು ಕೊಲ್ಹಾರದ ಹತ್ತಿರ ಕೃಷ್ಣಾನದಿಗೆ ಒಂದು ಎತ್ತರವಾದ ದೊಡ್ಡ ಬ್ರಿಜ್ ಕಟ್ಟುವುದಕ್ಕೆ ಹಣ ಒದಗಿಸಿ, ಈ ಕೆಲಸವನ್ನು ಆದಷ್ಟು ಬೇಗನೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಮೂರುನಾಲ್ಕು ರಸ್ತೆ ರಚನೆ ಕೆಲಸ ತೆಗೆದುಕೊಂಡಿದ್ದಾರೆ ದೊಡ್ಡ ರಸ್ತೆ ರಚನೆಯ ಕೆಲಸ ತೆಗೆದು ಕೊಂಡಿಲ್ಲ. ಮುಳವಾಡದಿಂದ ಆಲಮಟ್ಟಿವರೆಗೆ ಒಂದು ಸಣ್ಣ ರಸ್ತೆ ಇದೆ. ಇದು ಸುಮಾರು 30 ಮೈಲು ಉದ್ದವಾಗಬಹುದು. ಒಂದು ಕಡೆ 20 ಮೈಲ ರಸ್ತೆ ಕೆಲಸ ಪಿ.ಡಬ್ಲ್ಯು.ಡಿ. ಅವರು ಮಾಡಿದ್ದಾರೆ ಅತ್ತ ಡಿ. ಎಲ್. ಬಿ. ಅವರು ರಸ್ತೆ ಮಾಡಿದ್ದಾರೆ. ಆದರೆ ನಡುವಿನ ಹತ್ತು ಮೈಲು ರಸ್ತೆ ರಚನೆ ಕೆಲಸ ಹಾಗೇ ಉಳಿದುಕೊಂಡಿದೆ. ಮಂತ್ರಿಗಳಿಗೆ ನಾಲ್ಕೈದು ಅರ್ಜಿ ಕೊಟ್ಟಿದ್ದೇವೆ. ಈ ಕೆಲಸ ಬಹಳ ಜರೂರಾಗಿ ಆಗಬೇಕಾಗಿದೆ. ಈ 10 ಮೈಲ ರಸ್ತೆ ಕೆಲಸ ಪೂರ್ತಿಯಾದರೆ 25 ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಬಸ್ ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಸರಕಾರದವರು ಈ ಕೆಲಸದ ಕಡೆಗೆ ಗಮನಕೊಟ್ಟು ಆದಷ್ಟು ಬೇಗನೆ ಈ ಕೆಲಸ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ವಿಜಾಪುರ ನಗರದಲ್ಲಿ ವಿದ್ಯುಚ್ಛಕ್ತಿ ಪೂರೈಕೆಯು ಪ್ರೈವೇಟಾಗಿ ನಡೆಯುತ್ತಿತ್ತು. ಈಗ ಖಾಸಗಿಯವರಿಂದ ಸರಕಾರದವರು ತೆಗೆದುಕೊಂಡಿದ್ದಾರೆ. ಇದರಿಂದ ಅನುಕೂಲವಾಗಬಹುದೆಂದು ತಿಳಿದುಕೊಂಡಿದ್ದೆವು. ಜನರಿಗೆ ಇರುವ ತೊಂದರೆ ಹೋಗುತ್ತದೆಂದು ಭಾವಿಸಲಾಗಿತ್ತು. ಆದರೆ ಈಗ ಬಹಳ ಪಂಚಾಯತಿ ಆಗಿದೆ. ಒಂದು ವಾರದಲ್ಲಿ ಮೂರು ದಿವಸ ವಿದ್ಯುತ್‌ಶಕ್ತಿ ನಿಂತು ಹೋಗುತ್ತದೆ. ಇದಲ್ಲದೆ ಪಾವರ್ ಕೂಡ full ಆಗಿ ಇರುವದಿಲ್ಲ ನಗರದಲ್ಲಿ ಲೌಡ್‌ಸ್ಪೀಕರ ಹಾಕಿದರೆ ಸ್ಪಷ್ಟ ಕೇಳುವದಿಲ್ಲ. ವಿದ್ಯುತ್ ದೀಪ ಸರಿಯಾಗಿ ಬೆಳಕು ಕೊಡದೇ ಇರುವುದರಿಂದ ಕಂದೀಲು ಹಚ್ಚಿಕೊಂಡು ವಿದ್ಯುದ್ದೀಪ ಉರಿಯುತ್ತದೆಯೇ ಎಂತ ನೋಡುವ ಪ್ರಸಂಗ ಬರುತ್ತದೆ. ಈ ತೊಂದರೆಯನ್ನು ಆದಷ್ಟು ಜಾಗ್ರತೆ ತಪ್ಪಿಸಬೇಕು. ಅದಕ್ಕಾಗಿ ಸಾಕಷ್ಟು ವಿದ್ಯುತ್‌ಶಕ್ತಿ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇನೆ.

ಇನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರ ನೇಮಕ ಮಾಡುವಾಗ್ಗೆ, ಒಬ್ಬ ಹೆಣ್ಣುಮಕ್ಕಳನ್ನು ತೆಗೆದು ಕೊಂಡಿಲ್ಲ ಅನೇಕ ಹೆಣ್ಣು ಮಕ್ಕಳು ನೌಕರಿಗಾಗಿ ಅರ್ಜಿ ಮಾಡುತ್ತಾರೆ. ಹೆಣ್ಣುಮಕ್ಕಳ ಏತಿಯಿಂದ ಹೇಳತಕ್ಕಂಥವರು ಯಾರು ಇಲ್ಲ, ಒಂದು ಸ್ಥಾನವನ್ನಾದರೂ ಹೆಣ್ಣುಮಕ್ಕಳಿಗೆ ಕೊಡಬೇಕೆಂದು ಸೂಚಿಸುತ್ತೇನೆ. ನಿಮಗೆ ಓಟು ಹಾಕುವವರಲ್ಲಿ ಅರ್ಧದಷ್ಟು ಸಂಖ್ಯೆ ಹೆಣ್ಣುಮಕ್ಕಳಿದ್ದಾರೆ. ಆದ್ದರಿಂದ ಹೆಣ್ಣುಮಕ್ಕಳ ಹಿತ ದೃಷ್ಟಿಯಿಂದ ಅರ್ಧದ [illegible] ಸ್ಥಾನ ಕೊಡದಿದ್ದರೂ ಕೂಡ ಪಟ್ಟಿ [illegible]

ಸರ್ವಿಸ್ ಕಮಿಷನ್ ಸದಸ್ಯರಲ್ಲಿ ಒಂದು ಸ್ಥಾನವನ್ನಾದರೂ ಕೊಡಬೇಕು. ನಿಜವಾಗಿಯೂ ಹೆಣ್ಣು ಮಕ್ಕಳು ಬುದ್ಧಿವಂತಿಕೆಯಿಂದ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

ಇನ್ನು BDO ನೇಮಕ ಮಾಡುವ ಕಾಲದಲ್ಲಿ 40 ಅರ್ಜಿಗಳು ಬಂದಿದ್ದವು. ಅದರಲ್ಲಿ ಒಬ್ಬ ಹೆಣ್ಣುಮಗಳ ನೇಮಕ ಮಾಡಿಲ್ಲ. ನಿಜವಾಗಿಯೂ ಸೋಷಿಯಲ್ ವೆಲ್‌ಫೇರ್ ಕೆಲಸ ಹೆಣ್ಣುಮಕ್ಕಳು ಬಹಳ ಒಳ್ಳೆಯ ರೀತಿಯಿಂದ ಮಾಡುತ್ತಾರೆ ಹೀಗಿದ್ದರೂ ಸಹ ಒಂದು ಸ್ಥಾನ ಕೊಟ್ಟಿಲ್ಲ. ಹೆಣ್ಣು ಮಕ್ಕಳಿಗೆ ಎಲ್ಲ ಸ್ಥಾನ ಕೊಟ್ಟರು ಒಳ್ಳೆಯದಾಗುತ್ತದೆ. ಹೆಣ್ಣುಮಕ್ಕಳಿಗೆ ಎಷ್ಟು ಮಹತ್ವದ ಸ್ಥಾನ ವಿದೆ ಎನ್ನುವುದು ನಿಮ್ಮ ನಿಮ್ಮ ಮನೆಯ ಹೆಂಗಸರು ತವರು ಮನೆಗೆ ಹೋದಾಗ್ಗೆ ಅದರ ಮಹತ್ವ ಗೊತ್ತಾಗುತ್ತದೆ. ಅಡಿಗೆ ಮಾಡುವವರು ಇಲ್ಲದ್ದರಿಂದ ಸರಿಯಾಗಿ ಊಟ ದೊರೆಯದೆ ತೊಂದರೆ ಯಾಗುತ್ತದೆ. ಆದ್ದರಿಂದ ಹೆಣ್ಣುಮಕ್ಕಳ ಪ್ರತಿನಿಧಿಗೆ ಸ್ಥಾನ ದೊರಕಿಸಿ ಕೊಡುವುದು ಅಗತ್ಯ ಎಂದು ಹೇಳುತ್ತೇನೆ.

ಇನು ಪ್ರಾಥಮಿಕ ಶಿಕ್ಷಣದ ವಿಚಾರದಲ್ಲಿ ಒಂದು ಮಾತು ಹೇಳಬೇಕಾದೆ. ನಮ್ಮ ಮನೆಯ ಲ್ಲಿಯೇ ನನಗೆ ಒಂದು ಅನುಭವ ಬಂದಿದೆ. ಚಿಕ್ಕಮಕ್ಕಳಿಗೆ ಕಲಿಸುವುದಕ್ಕೆ ಗಂಡಸರು ಟೀಚರ್ ಬಂದರೆ ಹುಡುಗರು ಬೇಡ ಎಂದು ಹೇಳುತ್ತಾರೆ. ಹೆಣ್ಣುಮಕ್ಕಳು ಟೀಚರ್ ಆಗಿದ್ದರೆ ಒಳ್ಳೆಯ ದಾಗುತ್ತದೆ. ಚಿಕ್ಕಮಕ್ಕಳು ಸಂತೋಷದಿಂದ ಉಲ್ಲಾಸದಿಂದ ಅಭ್ಯಾಸ ಮಾಡುತ್ತವೆ. ಇದಕ್ಕೆ ಕಾರಣವೆಂದರೆ ಹೆಣ್ಣುಮಕ್ಕಳು ಮಮತೆಯಿಂದ ಕಲಿಸುತ್ತಾರೆ. ಅವರು ಹೇಳಿಕೊಟ್ಟದ್ದನ್ನು ಕಲಿಸು ವುದನ್ನು ಮಕ್ಕಳು ಬೇಗನೆ ಕಲಿಯುತ್ತಾರೆ. ಆದುದರಿಂದ ಎಲ್ಲ ಶಾಲೆಗಳಲ್ಲಿ ಹೆಚ್ಚಾಗಿ ಲೇಡಿ ಟೀಚರ್ಸ್ ನೇಮಕ ಮಾಡಬೇಕು. ಅಂದರೆ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗುತ್ತದೆ.

ಇನ್ನು ಪಾನ ನಿರೋಧದ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ನೀರಾ ಕೇಂದ್ರಗಳಿಂದ ಹೆಚ್ಚಾಗಿ ಉಪಯೋಗವಾಗುತ್ತಿದೆ ಎಂದು ನನ್ನ ಅಭಿಪ್ರಾಯ. ದೇಶದಲ್ಲಿ ಪಾನನಿರೋಧ ಜಾರಿಗೆ ತಂದಿರುವುದು ಒಳ್ಳೆಯ. ಕೆಲಸ ಹಿಂದಕ್ಕೆ ಪಾನನಿರೋಧ ಜಾರಿ ಇಲ್ಲದ ಪ್ರದೇಶದಲ್ಲಿ ಸರೆ ಕುಡಿದು ಸಂಪಾದಿಸಿದ ಹಣವನ್ನು ಹಾಳುಮಾಡಿಕೊಳ್ಳುತ್ತಿದ್ದರು ಇಷ್ಟೆ ಅಲ್ಲದೆ ಮನೆಯಲ್ಲಿ ಹೆಂಡತಿ ಮಕ್ಕಳನ್ನು ಪೀಡಿಸಿ ಬಡೆದು ಹೊಡೆದು, ಮೈಮೇಲಿನ ಆಭರಣ ಮನೆಯಲ್ಲಿ ಪಾತ್ರೆಗಳನ್ನು ಮಾರಿಕೊಂಡು ಬೀದಿಯ ಪಾಲು ಆದ ಉದಾಹರಣೆಗಳು ಅನೇಕವಾಗಿವೆ. ಈಗ ಪಾನನಿರೋಧ ಜಾರಿಗೆ ಬಂದ ನಂತರ ಸರೆ ಕುಡಿಯುವದಿಲ್ಲ. ಅವರ ಹೆಂಡರು ಮಕ್ಕಳು ಹೊಟ್ಟೆತುಂಬಾ ಊಟ ಮಾಡಿ ಸುಖದಿಂದ ಇದ್ದಾರೆ. ಸಂಪಾದಿಸಿದ ಹಣದಿಂದ ಅಲ್ಪ ಸ್ವಲ್ಪ ಉಳಿತಾಯ ಮಾಡಿ ಮನೆಯಲ್ಲಿ ಪಾತ್ರೆಗಳನ್ನು ಸಾಮಾನುಗಳನ್ನು ಕೊಂಡುತಂದಿದ್ದಾರೆ. ಒಟ್ಟಿನಲ್ಲಿ ಪಾನ ನಿರೋಧ ಪರಿಣಾಮವಾಗಿ ಜನರು ಸುಖದಿಂದ ಬಾಳ್ವೆ ಮಾಡುತ್ತಿದ್ದಾರೆ. ಇದು ಒಳ್ಳೆಯ ಪರಿಣಾಮವನ್ನುಂಟು ಮಾಡಿದೆ. ಪಾನ ನಿರೋಧ ಜಾರಿಯಲ್ಲಿ ಇರಬೇಕು ಎಂದು ಇಷ್ಟು ಹೇಳಬಯಸುತ್ತೇನೆ.

ನಮ್ಮ ವಿಜಾಪುರ ಜಿಲ್ಲೆಯ ಮುಂಬಾಯಿ ರಾಜ್ಯದಲ್ಲಿದ್ದಾಗ್ಗೆ ಬಾಗೇವಾಡಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ಲ್ಯಾಂಡ್‌ಕನ್ಸಾಲಿಡೇಷನ್ ಸ್ಕೀಮು ತೆಗೆದು ಕೊಂಡಿದ್ದರು. ಇದರಿಂದ ಬಡ ರೈತರಿಗೆ ಬಹಳ ತೊಂದರೆಯಾಗಿದೆ. ಈ ಯೋಜನೆ ನಮ್ಮ ಜಿಲ್ಲೆಯಲ್ಲಿ ಎಲ್ಲಿಯು ಬೇಡ, ಇದನ್ನು ತೆಗೆದು ಹಾಕ ಬೇಕೆಂದು ನಾನು ಸೂಚನೆ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ prevention of fragmentation and consolidation of holdings ಅಂದರೆ ತುಂಡು ಭೂಮಿಯನ್ನು ತಡೆಗಟ್ಟಿ ಒಂದುಗೂಡಿಸುವ ಈ ಯೋಜನೆಯಲ್ಲಿ ಬಂಡ್ ಹಾಕಿಸುತ್ತಾರೆ. ಇದಕ್ಕೆ ಶೇಕಡ 25 ರಷ್ಟು ಸಹಾಯ ಮಾಡುತ್ತಿದ್ದಾರೆ. ಸರಿಯಾದ ಸ್ಟಾಫ್ ನೇಮಕ ಮಾಡಿ ಇನ್ನೂ ಹೆಚ್ಚಿನ ಸಹಾಯ ಕೊಡುವುದು ಅಗತ್ಯವಾಗಿದೆ. ಅರ್ಧದಷ್ಟು ಹಣ ಸರಕಾರ ಒದಗಿಸಿದ ಹಣದ ಮೇಲೆ ಬಡ್ಡಿ ವಸೂಲ್ಮಾಡಬಾರದು ಎಂದು ಸೂಚಿಸುತ್ತೇನೆ. ಈ ಒಡ್ಡಿನ ಕೆಲಸಕ್ಕೆ ಹೆಚ್ಚು ಗಮನ ಕೊಟ್ಟು ಮಾಡಿಸಬೇಕೆಂದು ಸೂಚಿಸು ತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಮಾನ್ಯ ಸಭಾಪತಿಗಳೆ, 1963-64 ನೇ ಸಾಲಿನ ಬಜೆಟ್ಟನ್ನು ಈ ಸಭೆಯ ಮುಂದೆ ಮಾನ್ಯ ಆರ್ಥಿಕ ಸಚಿವರು ಮಂಡಿಸುತ್ತಾ ಸ್ವಲ್ಪ arithmetical jugglery ಮಾಡಿದ್ದಾರೆಂದು ಹೇಳಬಯಸುತ್ತೇನೆ. ಹೋದ ವರ್ಷದ ಅಂಕಿ ಅಂಶಗಳನ್ನು ತೆಗೆದು ಕೊಂಡು ಯಾವ ಯಾವ ಬಾಬಿನಲ್ಲಿ ಪ್ರಗತಿಯಾಗಿದೆಯೋ ಅದನ್ನು ಮಾತ್ರ ಈ ಸಭೆಯ ಮುಂದಿಟ್ಟಿ ದ್ದಾರೆ. ಹಿಂದೆ ಬಿದ್ದಿರತಕ್ಕಂಥ ಮತ್ತು ಉತ್ಪತ್ತಿ ಕಡಿಮೆಯಾಗಿರತಕ್ಕಂಥ ಬಾಬುಗಳನ್ನು ಅಷ್ಟಾಗಿ ಅವರು ತೋರಿಸಿಲ್ಲ. ನಮ್ಮ ದೇಶದ ಪ್ರಗತಿ ಯಾವ ರೀತಿಯಲ್ಲಿ ಆಗಿದೆಯೆಂದು ತಿಳಿಯಬೇಕಾದರೆ, ಅವರು ಸರಿಯಾದ್ದು, ನ್ಯಾಯವಾದ ಅಂಕಿ ಅಂಶಗಳನ್ನು ಸರ್ವೇಸಾಮಾನ್ಯವಾಗಿ ಈ ಸಭೆಯ ಮುಂದಿಡಬೇಕಾಗಿತ್ತು.

(ಶ್ರೀ ಟಿ. ಎಲ್. ಗೌಡ)

ಈಗ ಅವರು ಕೊಟ್ಟಿರತಕ್ಕಂಥ ಬಜೆಟ್ ಭಾಷಣದಲ್ಲಿ ಸರಾಸರಿ *per capita* ಆದಾಯ ನಮ್ಮ ಸಂಸ್ಥಾನದಲ್ಲಿ 311 ರೂಪಾಯಿ ಆಗಿರಬಹುದೆಂದು ಅಂದಾಜು ಮಾಡಿದ್ದಾರೆ-ಕರಾರುವಾಕ್ಕಾಗಿಯಲ್ಲ. It is only an estimation ಎಂದು ಹೇಳಿದ್ದಾರೆ. ಅದನ್ನು ಅಷ್ಟಕ್ಕೇ ಬಿಟ್ಟಿದ್ದಾರೆ; ಸಾಮಾನ್ಯವಾಗಿ ನಿಜವಾದ ಚಿತ್ರ ಕೊಡಬೇಕಾಗಿತ್ತು. ನಮ್ಮ ಇಂಡಿಯಾ ದೇಶದ ಸರಾಸರಿ ಆದಾಯ ಎಷ್ಟು, ನೆರೆ ಪ್ರಾಂತಗಳಾದ ಮದ್ರಾಸ್ ಮತ್ತು ಮಹಾರಾಷ್ಟ್ರ, ಮಾತ್ರ ಇತರ ಪ್ರಾಂತಗಳ ಆದಾಯ ಯಾವ ರೀತಿ ಇದೆಯೆಂದು ಕೊಟ್ಟಿದ್ದರೆ ನಮಗೆ comparative figures ಸಿಗುತ್ತಿತ್ತು. ಅದರಿಂದ ಒಂದು ತೀರ್ಮಾನಕ್ಕೆ ಬರಬಹುದಾಗಿತ್ತು.

ನಾನು ತೆಗೆದುಕೊಂಡಿರುವ ಅಂಕಿ ಅಂಶಗಳ ಆಧಾರದ ಮೇಲೆ ಇಂಡಿಯಾ ದೇಶದ ಸರಾಸರಿ *per capita* income 330 ಇದೆ. ಈಗ ನಮ್ಮ ಸಂಸ್ಥಾನದಲ್ಲಿ 311 ಇದೆ. ಇದು estimated income 1960-61 ನೇ ಇಸವಿಗೆ. ಇದನ್ನು ನೋಡಿದರೆ ಇಡೀ ಇಂಡಿಯಾದೇಶದ ಒಂದು ಸರಾಸರಿಗೆ ಬಹಳ ಹಿಂದಿದ್ದೇವೆ. ಸ್ವಾತಂತ್ರ್ಯ ಬಂದು 15 ವರ್ಷವಾದರೂ ಇಷ್ಟು ಹಿಂದೆ ಇರುವುದು ಬಹಳ ಶೋಚನೀಯ ; ಏಕೆಂದರೆ 15 ವರ್ಷಗಳಿಂದಲೂ ಕಾಂಗ್ರೆಸ್ ಪಾರ್ಟಿಯವರೇ, ಒಂದೇ ಒಂದು ಪಕ್ಷದವರೇ ರಾಜ್ಯಭಾರ ಮಾಡುತ್ತಿದ್ದಾರೆ. ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿಯೇ ಪಾರ್ಟಿಗಳು ಇದ್ದು, ಒಬ್ಬರು ಅಧಿಕಾರಕ್ಕೆ ಬಂದರೆ ಅವರನ್ನು ತೆಗೆದುಹಾಕಿ ಮತ್ತೊಂದು ಗುಂಪು ಅಧಿಕಾರಕ್ಕೆ ಬರುವ ಜನರು ವ್ಯಾಮೋಹದಿಂದ ಈ ಒಂದು ಆದಾಯ ಅಥವ ಉತ್ಪತ್ತಿ ಕಡಿಮೆಯಾಗಿವೆ. ತಮ್ಮ ಅಧಿಕಾರ ಲಾಲಸೆಯಿಂದ ಅವರು ನಮ್ಮ ದೇಶದ ಕಲ್ಯಾಣ ಮರೆತಿದ್ದಾರೆಂದು ಹೇಳಬಯಸುತ್ತೇನೆ.

ಸ್ವಾಮಿ, 1957-58 ನೇ ಇಸವಿ, 1958-59 ನೇ ಇಸವಿ ಲೆಕ್ಕ ತೆಗೆದುಕೊಂಡು ನೋಡಿದರೆ, ನೆರೆ ರಾಜ್ಯವಾದ ಮದ್ರಾಸಿನಲ್ಲಿ ಸರಾಸರಿ *per capita* income 304.79 ಇದೆ ; ಮಧ್ಯ ಪ್ರದೇಶದಲ್ಲಿ 313.4 ಇದೆ ನಮ್ಮ ರಾಜ್ಯದಲ್ಲಿ 290 ಇದೆ. ಇಂಡಿಯಾ ದೇಶದ ಸರಾಸರಿ ಆದಾಯ 303. ನೆರೆ ರಾಜ್ಯಗಳಿಗಿಂತ ನಾವು ಬಹಳ ಹಿಂದುಳಿದಿದ್ದೇವೆ. ಇದಕ್ಕೆ ಕಾರಣ ಏನು ಎನ್ನುವುದನ್ನು ಸರ್ಕಾರ ಆಲೋಚನೆ ಮಾಡಬೇಕು. ಇಷ್ಟು ವರ್ಷಗಳಿಂದ ಅವರು ಇದನ್ನು ಸರಿಪಡಿಸಿಕೊಳ್ಳದೆ ಇರುವುದು ಬಹಳ ಅನ್ಯಾಯ. ಆಡಳಿತ ನಡೆಸತಕ್ಕಂಥ ನಮ್ಮ ಸ್ನೇಹಿತರಿಗೆ ಸರಿಪಡಿಸುವ ಒಂದು ಸಾಮರ್ಥ್ಯ ಇಲ್ಲ ; ಹೊಂದಾಣಿಕೆ ಇಲ್ಲ, ಒಬ್ಬೊಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯ ಇರುವುದರಿಂದ ಇದನ್ನು ಸಾಧಿಸಲು ನಿಸ್ಸಹಾಯಕರಾಗಿದ್ದಾರೆ, ಅಸಮರ್ಥರಾಗಿದ್ದಾರೆಂದು ಒತ್ತಿ ಹೇಳಬಯಸುತ್ತೇನೆ.

ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಆಹಾರ ದಿನಸಿಗಳ ಉತ್ಪತ್ತಿ ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ಅವರು ಹೇಳಿರುವುದು ಜಾಸ್ತಿಯಾಗಿವೆ. ಆದರೆ ನಮ್ಮ ದೇಶದಲ್ಲಿ dollar earn ಮಾಡತಕ್ಕಂಥ ಬಹಳ ಮುಖ್ಯವಾದ oil seeds ಬಹಳ ಕಡಿಮೆಯಾಗಿದೆ. Sugarcane ಜಾಸ್ತಿಯಾಗಿದೆಯೆಂದು ಹೇಳಿದ್ದಾರೆ; ಅದರ ಏಕರೇಜ್ ಜಾಸ್ತಿಯಾಗಿದ್ದರೂ ಅದರಿಂದ ಬಂದಿರತಕ್ಕಂಥ ಆದಾಯ ಬಹಳ ಕಡಿಮೆಯಾಗಿದೆ. Gram (ಕಾಳು) ಅಥವಾ ಕಡ್ಲೆಯಿಂದ ಆದಾಯ ಕಡಿಮೆಯಾಗಿದೆ. ಟೊಬ್ಯಾಕೋದಿಂದ ಆದಾಯ ಕಡಿಮೆಯಾಗಿದೆ. ಕಾರ್ಟ ಇದರಲ್ಲೀನೂ ಉತ್ಪತ್ತಿ ಬಹಳ ಕಡಿಮೆಯಾಗಿದೆ. Wheat ಕಡಿಮೆಯಾಗಿದೆ. ಇವರು ಈ ರೀತಿಯಲ್ಲಿ ಕಡಿಮೆಯಾಗಿರತಕ್ಕಂಥ ಬಾಬುಗಳನ್ನು ಬಿಟ್ಟು, ಹೆಚ್ಚುವರಿ ಬಾಬುಗಳನ್ನು ತೋರಿಸಿದ್ದಾರೆ.

ಇದೇ ರೀತಿಯಲ್ಲಿ ಕೈಗಾರಿಕೆಗಳಲ್ಲೂ ಸಹ ಯಾವ ಯಾವ ಕೈಗಾರಿಕೆಗಳು ಹೆಚ್ಚಿನ ಉತ್ಪನ್ನವನ್ನು ತೋರಿಸ ತ್ತವೆಯೋ ಅವನ್ನು ತೋರಿಸಿದ್ದೀರಿ. ಈಗ ಸಲ್ಫ್ಯೂರಿಕ್ ಆಸಿಡ್ ಸುಮಾರು 321 ಮೆಟ್ರಿಕ್ ಟನ್‌ನಷ್ಟು ಉತ್ಪನ ಕಡಿಮೆ ಆಗಿದೆ. ಸೂಪರ್ ಫಾಸ್ಫೇಟ್ 424 ಮೆಟ್ರಿಕ್ ಟನ್‌ನಷ್ಟು ಕಡಿಮೆಯಾಗಿದೆ. ಇದೇ ರೀತಿ ಬಹಳ ಮುಖ್ಯವಾದ ಜನಗಳ ನಿತ್ಯ ಬಳಕೆಗೆ ಬೇಕಾದ ಸಿಮೆಂಟಿನ ಉತ್ಪನ್ನ ಕೂಡ ಕಡಿಮೆಯಾಗಿದೆ. ಮಾನ್ಯ ಮಂತ್ರಿಗಳೇ ನೋಡಿ ಬಹಳ ಬುದ್ಧಿವಂತಿಕೆಯಿಂದ ಬಂಗಾರ ಉತ್ಪನ್ನ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಇದನ್ನು ತೆಗೆದು ನೋಡಿದರೆ ಆ ರೀತಿ ಇಲ್ಲ. 1961ನೇ ಇಸವಿಯಲ್ಲಿ ಡಿಸೆಂಬರ್‌ವರೆಗೂ ಬಂಗಾರದ ಉತ್ಪನ್ನ ಬಹಳ ಕಡಿಮೆಯಾಗಿದೆ, ಆದರೆ ಜನವರಿ, ಫೆಬ್ರವರಿ, ಮಾರ್ಚಿನಲ್ಲಿ ಸ್ವಲ್ಪ ಜಾಸ್ತಿಯಾಗಿದೆ. ಈ ಮೂರು ತಿಂಗಳಿನಿಂದ ಬಂದಿರತಕ್ಕ ಉತ್ಪನ್ನವನ್ನು ತೆಗೆದುಕೊಂಡು ಉತ್ಪ್ರೇಕ್ಷೆ ಮಾಡಿ ಜಾಸ್ತಿಯಾಗಿದೆ ಎಂದು ತೋರಿಸಿದ್ದಾರೆ. ಇದೇ ರೀತಿ ಬೆಳ್ಳಿ, ಕಬ್ಬಿಣದ ಅದರು, ಮ್ಯಾಂಗನೀಸ್ ಇವುಗಳ ಉತ್ಪನ್ನ ಬಹಳ ಕಡಿಮೆಯಾಗಿದೆ. 86 ಲಕ್ಷ ಚಿಲ್ಲರೆ ಇದ್ದದು 61 ಲಕ್ಷ ಚಿಲ್ಲರೆಯಷ್ಟು ಕಡಿಮೆಯಾಗಿದೆ. ಇದನ್ನು ನೋಡಿದರೆ ಯಾವ ಒಂದು ವಿಭಾಗದಲ್ಲೂ ಸಮರ್ಪಕವಾದ ಪ್ರಗತಿ ನಡೆದಿಲ್ಲ. ನಿಜವಾಗಿಯೂ ನೀವು ಭುಜ ತಟ್ಟಿಸಿಕೊಳ್ಳುವಂಥ ಕೆಲಸ ಮಾಡಿಲ್ಲ ಎಂದು ಹೇಳಬೇಕಾಗಿದೆ. ಎರಡನೇ ಪಂಚವಾರ್ಷಿಕ

ಯೋಜನೆ ಮುಗಿದು ಮೂರನೇ ಪಂಚವಾರ್ಷಿಕ ಯೋಜನೆಯು ಅರ್ಧದಲ್ಲಿರಬೇಕಾದರೆ ಎಷ್ಟುಮಟ್ಟಿಗೆ ಪ್ರಗತಿ ಆಗಬೇಕಾಗಿತ್ತೋ ಅಷ್ಟು ಪ್ರಗತಿ ಸಾಧಿಸಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾದರೂ ಸಹ ಈಗಾಗಲೆ ನಮ್ಮ ಸ್ನೇಹಿತರು ಚೆನ್ನಾಗಿ ಹೇಳಿದ್ದಾರೆ, ಗ್ರಾಮಾಂತರ ಪ್ರದೇಶಗಳ ಅವಶ್ಯಕತೆಗಳನ್ನು ಅಷ್ಟು ಹೆಚ್ಚು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈಗ ತುರ್ತು ಪರಿಸ್ಥಿತಿ ಬಂದಿದೆ. ನೀವು ಆಹಾರವನ್ನು ಎಷ್ಟು ಹೆಚ್ಚು ಉತ್ಪನ್ನ ಮಾಡಿದರೆ ಅಷ್ಟು ಒಳ್ಳೆಯದು. ಆಹಾರ ಉತ್ಪನ್ನ ಮಾಡತಕ್ಕ ರೈತ ಯುದ್ಧದಲ್ಲಿ ಹೋರಾಡತಕ್ಕ ಒಬ್ಬ ಯೋಧನಿಗೆ ಸಮ, ರೈತರು ಹೆಚ್ಚು ಉತ್ಪಾದನೆ ಮಾಡಬೇಕೆಂದು ಹೇಳಿ ಸರ್ಕಾರದವರು ಹೇಳುತ್ತಾ ಇದ್ದಾರೆ. ಆರ್ಥಿಕ ಮಂತ್ರಿಗಳು ಅವರ ಬಡ್ಜೆಟ್ ಭಾಷಣದಲ್ಲೂ ಕೂಡ ಮೊಟ್ಟಮೊದಲನೆಯದಾಗಿ ವ್ಯವಸಾಯಕ್ಕೆ ಪ್ರಾಮುಖ್ಯತೆ ಕೊಟ್ಟು ಇಂತಿಂಥಾ ಸಹಾಯ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದೆಲ್ಲಾ ನಿಜ, ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ವ್ಯವಸಾಯ ಇಲಾಖೆಯ ಅಧಿಕಾರ ವರ್ಗದಲ್ಲಿ ಅತೃಪ್ತಿ ಮೂಡಿದೆ. ತಾವು ಯೋಚನೆ ಮಾಡಿ, ವ್ಯವಸಾಯದ ಇಲಾಖೆ ಬಹಳ ಮುಖ್ಯವಾದದ್ದು. ಹೆಚ್ಚು ಆಹಾರ ಈಗಿನ ತುರ್ತು ಪರಿಸ್ಥಿತಿಯಲ್ಲಿ ಉತ್ಪನ್ನವಾಗಬೇಕು. ಅದಕ್ಕೆ ಏನು ಪ್ರಗತಿ ಸಾಧನೆ ಮಾಡಿದ್ದೀರಿ? ವ್ಯವಸಾಯದ ಇಲಾಖೆಯಲ್ಲಿ 99 ಗೆಜೆಟೆಡ್ ಹುದ್ದೆಗಳು ಖಾಲಿ ಇದ್ದರೆ ಖಂಡಿತವಾಗಿಯೂ ಉತ್ಪನ್ನ ಜಾಸ್ತಿಯಾಗುತ್ತದೆಯೇ? ವ್ಯವಸಾಯದ ಉತ್ಪನ್ನಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ನಡೆಸಬೇಕೆಂದು ಅನೇಕ ಯೋಚನೆಗಳನ್ನು ಹಾಕಿಕೊಂಡಿರುವಾಗ 99 ಜನ ಅಧಿಕಾರಿ ವರ್ಗದವರ ಹುದ್ದೆಗಳನ್ನು ಖಾಲಿ ಇಟ್ಟಿದ್ದೇ ಆದರೆ ಎಷ್ಟುಮಟ್ಟಿಗೆ ಇದರಲ್ಲಿ ಪ್ರಗತಿ ಸಾಧಿಸಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕಾಗಿದೆ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅಧಿಕಾರಿಗಳನ್ನು ಈಕ್ವೇಟ್ ಮಾಡಬೇಕಾದರೆ, ಸ್ಥಾನಮಾನ ಗೊತ್ತುಮಾಡಬೇಕಾದರೆ ರೀ ಆರ್ಗನೈಸೇಷನ್ ಆದಮೇಲೆ ಹಳೇ ಮೈಸೂರಿನವರಿಗೆ ಮಲತಾಯಿ ಮನೋಭಾವ ತೋರಿಸುತ್ತಾ ಇದ್ದೀರಿ. ಬಹುಶಃ ಇದರ ಉದ್ದೇಶ ಇಷ್ಟೇ ಇರಬಹುದು. ಹಳೇ ಮೈಸೂರಿನ ಕಾಂಗ್ರೆಸ್‌ನವರಿಗೆ ತಮ್ಮ ಪಕ್ಷದಲ್ಲಿ ಬೆಂಬಲ ಇಲ್ಲ. ಆಡಳಿತ ನಡೆಸುತ್ತಾ ಇರತಕ್ಕ ಸರ್ಕಾರ ಉತ್ತರ ಕರ್ಣಾಟಕದವರು ಅಥವಾ ಹೊಸ ಮೈಸೂರಿನವರು. ಆದ್ದರಿಂದ ಅವರ ಪ್ರಭಾವಕ್ಕೆ ಒಳಪಟ್ಟು ಅವರ ವಶೀಲಿ ಬಾಜಿಗೆ ಒಳಪಟ್ಟು ಈ ಸರ್ಕಾರ ಇಂಥಾ ಅನ್ಯಾಯ ಮಾಡುತ್ತಾ ಇದೆ ಎಂದು ಹೇಳುತ್ತೇನೆ. ಒಂದು ಉದಾಹರಣೆ ಕೊಡಬೇಕಾದರೆ ವ್ಯವಸಾಯದ ಇಲಾಖೆಯಲ್ಲಿ B.Ag., ಪಾಸ್ ಮಾಡಿಕೊಂಡು ಡಿಪಾರ್ಟ್‌ಮೆಂಟಲ್ ಟೆಸ್ಟ್ ಪಾಸು ಮಾಡಿಕೊಂಡು ನಾನ್‌ಗೆಜೆಟೆಡ್ ಕೇಡರ್‌ನಲ್ಲಿ ಒಂದನೇ ದರ್ಜೆಯ ಇನ್ಸ್‌ಪೆಕ್ಟರ್ ಆಗಿದ್ದ ಹಳೇ ಮೈಸೂರಿನವರ ಜೊತೆಗೆ ಬೊಂಬಾಯ್ ಕರ್ಣಾಟಕದ ಎರಡನೇ ದರ್ಜೆಯ ಇನ್ಸ್‌ಪೆಕ್ಟರನ್ನು ಈಕ್ವೇಟ್ ಮಾಡಿ ಸೀನಿಯಾರಿಟಿ ಲಿಸ್ಟ್ ತಯಾರು ಮಾಡಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ (ಬಾರ್ಡೋಲಿ).— ಎರಡನೇ ದರ್ಜೆಯಲ್ಲಿರತಕ್ಕವರನ್ನು ಒಂದನೇ ದರ್ಜೆಯವರ ಜೊತೆಗೆ ಈಕ್ವೇಟ್ ಮಾಡಿದ್ದಾರೆ ಎಂದು ಹೇಳಿದರು. ಅವರ pay scale ಏನಿತ್ತು; ಕ್ವಾಲಿಫಿಕೇಷನ್ ಏನಿತ್ತು whether they were graduates or diploma holders ಎಂಬುದನ್ನು ಯೋಚನೆ ಮಾಡಿನೋಡಿ.

ಶ್ರೀ ಬಿ. ಎಲ್. ಗೌಡ.—ಏನೇ ಆದರೂ service is the criteria. ಕೆಲಸಕ್ಕೆ ಸೇರಿದ ತಾರೀಖು ಮುಖ್ಯವಾಗಿಟ್ಟುಕೊಂಡು ಸೀನಿಯಾರಿಟಿ ಲಿಸ್ಟ್ ತಯಾರು ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಸ್ನೇಹಿತರೂ ಹೇಳಬಹುದು. ಅವರಿಗೆ ಅವಕಾಶವಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ತಿಳಿದುಕೊಳ್ಳಬಹುದು. ಇದೇ ರೀತಿ ನಮ್ಮ ದೃಷ್ಟಿಯಲ್ಲಿ ನಮ್ಮ ದೇಶದ ಪ್ರಗತಿಯಾಗಬೇಕಾದರೆ, ಬಹಳ ಮುಖ್ಯವಾಗಿ, ಬಹಳ ಯಶಸ್ವಿಯಾಗಿ ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡಬೇಕಾದ ವ್ಯವಸಾಯದ ಇಲಾಖೆಯಲ್ಲಿ 99 ಗೆಜೆಟೆಡ್ ಹುದ್ದೆಗಳು ಖಾಲಿ ಇವೆ ಎಂದರೆ ನಮ್ಮ ದೇಶದ ಪ್ಲಾನು ಮತ್ತು ಸ್ಕೀಮುಗಳು ಎಷ್ಟುಮಟ್ಟಿಗೆ ಯಶಸ್ವಿಯಾಗುತ್ತವೆ ಎಂಬುದನ್ನು ಬಹಳ ವಿಷಾದದಿಂದ ಈ ಸಭೆಯ ಮುಂದೆ ಹೇಳಬೇಕಾಗಿದೆ. ಆದ್ದರಿಂದ ಅತಿ ತ್ವರಿತವಾಗಿ ಪ್ರತಿಯೊಂದನ್ನೂ ಸರಿಪಡಿಸುತ್ತೀರಿ ಎಂದು ಬಹಳ ಕಳಕಳಿಯಿಂದ ಈ ಸಭೆಯಲ್ಲಿ ನಂಬಿದ್ದೇನೆ. ಈಗ ತಾನೆ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಬಗ್ಗೆ ಒಂದು ಉದಾಹರಣೆ ಕೊಟ್ಟು ಇದೇ ರೀತಿ ಎಲ್ಲಾ ಕೆಲಸದಲ್ಲೂ, ಯಾವ ಆಫೀಸಿಗೆ ಹೋಗಲಿ, ಎಲ್ಲಿ ನೋಡಲಿ, ಯಾವ ಅಧಿಕಾರಿಯನ್ನು ಭೇಟಿ ಮಾಡಲಿ ಸ್ವಾಮಿ ನಮಗೆ ಅನ್ಯಾಯವಾಗಿದೆ, ನಾವೇನೋ ಕರ್ನಾಟಕ ಆಯಿತು, ವಿಶಾಲ ಮೈಸೂರು ಆಯಿತು ಎಂದು ಬಹಳ ಸಂತೋಷವಾಗಿದ್ದೆವು, ಆದರೆ ಹಳೇ ಮೈಸೂರಿನವರಿಗೆ ಅವರ ಜೀವಮಾನವೇ ಹಾಳಾಗಿಹೋಯಿತು. ನಮ್ಮ ಮಕ್ಕಳು ಮರಿಗಳ ಸ್ಥಿತಿ ಕರುಣಾಜನಕವಾಗಿದೆ ಎಂದು ಹಳೇ ಮೈಸೂರಿನ ಅಧಿಕಾರಿಗಳು ಹೇಳುತ್ತಾ ಇದ್ದಾರೆ. ಇದನ್ನು ಸರಿಪಡಿಸಬೇಕಾದ್ದು ಸರ್ಕಾರದವರ ಬಹಳ ಮುಖ್ಯವಾದ ಕರ್ತವ್ಯ.

(ಶ್ರೀ ಬಿ. ಎಲ್. ಗೌಡ)

ಇಲ್ಲದೇ ಹೋದರೆ ಎಲ್ಲೂ ಶಾಂತತೆ ಇರುವುದಿಲ್ಲ. ಅಧಿಕಾರಿಗಳಿಂದ ಯಾವ ಕೆಲಸವನ್ನಾಗಲೀ, ಸೇವೆಯನ್ನಾಗಲೀ ಬಯಸುವುದಕ್ಕೆ ಆಗುವುದಿಲ್ಲ. ಅದರಿಂದ ದೇಶಕ್ಕೆ ಲುಕ್ಸಾನಾಗುತ್ತದೆ ಎಂದು ಹೇಳ ಬಯಸುತ್ತೇನೆ.

ಇದೇ ರೀತಿ ಸಾಮಾನ್ಯ ಆಡಳಿತದ ಬಗ್ಗೆ ಹೇಳುತ್ತಾ ಈ ಅಧಿಕಾರಿಗಳನ್ನು ನೇಮಕ ಮಾಡ ಬೇಕಾದರೂ ಸಹ ಪಕ್ಷಪಾತ ಮನೋಭಾವ ಅಥವಾ ಯಾರು ಕಾಂಗ್ರೆಸ್‌ನ ಅಥವಾ ಆಡಳಿತ ಪಕ್ಷದಲ್ಲಿರತಕ್ಕ ಆ ಜಿಲ್ಲೆಯ ಮುಖಂಡರ ಪ್ರಭಾವಕ್ಕೆ ಒಳಪಟ್ಟಿರುತ್ತಾರೆಯೋ, ಯಾರು ಅವರ ಮಾತನ್ನು ಕೇಳುತ್ತಾರೆಯೋ ಅಂಥಾ ಅಧಿಕಾರಿಗಳನ್ನು ನೇಮಕ ಮಾಡುವ ಅಭ್ಯಾಸ ಬಂದಿದೆ. ಇದರಿಂದ ಏನಾಗಿದೆ? ಅವರಿಗೆ ಯಾರು ವಿರೋಧಿಗಳಾಗಿದ್ದಾರೋ ಅಥವಾ ವಿರೋಧ ಪಕ್ಷದಲ್ಲಿದ್ದಾರೋ ಅವರಿಗೆ ಭಯ ಹುಟ್ಟುತ್ತದೆ. ಉದಾಹರಣೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಏನು ಒಂದು ಪರಿಸ್ಥಿತಿ ಇದೆ ಎಂದು ಈ ಸಭೆಯಲ್ಲಿ ಹೇಳಬೇಕಾಗಿದೆ. ಖಂಡಿತವಾಗಿಯೂ ನಾನು ಜಾತಿಯ ಪ್ರಶ್ನೆ ಎತ್ತಿ ಹೇಳಬೇಕಾಗಿ ಬಂದಿರುವುದು ಬಹಳ ವಿಷಾದನೀಯ. ಆದರೂ ಹೇಳದಿದ್ದರೆ ಕರ್ತವ್ಯ ಲೋಪವಾಗುತ್ತದೆ. ನಾನು ನನ್ನ ಕರ್ತವ್ಯ ಮಾಡಿದಂತಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಈ ಒಂದು ಜಿಲ್ಲೆಯಲ್ಲಿ ಇವತ್ತು ಯಾವ ಒಬ್ಬ ಅಧಿಕಾರಿಗಳನ್ನೇ ತೆಗೆದುಕೊಳ್ಳಿ ಬರೀ ಲಿಂಗಾಯಿತರೇ ಇದ್ದಾರೆ. ಡೆಪ್ಯೂಟಿ ಕಮೀಷನರು, ಎಕ್ಸಿಕ್ಯೂಟಿವ್ ಇಂಜನಿಯರು, ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು, ಬಿ. ಡಿ. ಓ., ಆರ್. ಟಿ. ಓ., ಡಿ. ಎಲ್. ಓ. ಇಬ್ಬರು ಸಬ್‌ಡಿವಿಜನ್ ಆಫೀಸರುಗಳು ಪ್ರತಿಯೊಬ್ಬರು ಲಿಂಗಾಯಿತರೇ ಆಗಿದ್ದಾರೆ. ಇದರಿಂದ ಎಲ್ಲ ಕೋಮುಗಳವರಲ್ಲೂ ಭಯ ಹುಟ್ಟಿದೆ. ವಿರೋಧಪಕ್ಷದವರು ಮತ್ತು ಕಾಂಗ್ರೆಸ್ ಪಕ್ಷದಲ್ಲೇ ಇರತಕ್ಕ ವಿರೋಧಿಗಳಲ್ಲೂ ಭಯ ಹುಟ್ಟುವುದಕ್ಕೆ ಆಸ್ಪದವಾಗಿದೆ. ಏನು ಇದರ ಉದ್ದೇಶವಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ವಿಚಾರ ಮಾಡಬೇಕು. ಜಾತ್ಯಾತೀತ ರಾಷ್ಟ್ರವಾಗಿರಬೇಕು ಎಂದು ಹೇಳಿ ರಾಜ್ಯಾಂಗದಲ್ಲಿ ನಮೂದಾಗಿದೆ. ಹಾಗಿರುವಾಗಲೂ ಕೂಡ ಎಲ್ಲಾ ಒಂದೇ ಜಾತಿಯವರನ್ನು ಒಂದು ತಾಲ್ಲೂಕಿನಲ್ಲಿ ಒಂದು ಜಿಲ್ಲೆಯಲ್ಲಿ ಅಧಿಕಾರಿಗಳಾಗಿ ಹಾಕಿದರೆ ಯಾವ ಒಂದು ಭಾವನೆ ಬರುತ್ತದೆ, ಒಂದೇ ರೀತಿಯ ರಕ್ಷಣೆ ದೊರಕುತ್ತದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈ ಜಿಲ್ಲೆಯಲ್ಲಿರತಕ್ಕ ಡೆಪ್ಯೂಟಿ ಕಮೀಷನರ ಬಗ್ಗೆ ಸಾಕಾದಷ್ಟು ಈ ಸಭೆಯಲ್ಲಿ ಹೇಳಿದ್ದಾರೆ. ಈ ಜಿಲ್ಲೆಯಿಂದ ಬರತಕ್ಕವನಾದ ನಾನು ನ್ಯಾಷನಲ್ ಡಿಫೆನ್ಸ್ ಫಂಡಿಗೆ ಹಣ ವಸೂಲಿ ಮಾಡತಕ್ಕ ವಿಚಾರವನ್ನು ಬಹಳ ವಿಷಾದದಿಂದ ತಮ್ಮ ಮುಂದೆ ಇಡಬೇಕಾಗಿದೆ. ಮುಖ್ಯಮಂತ್ರಿಗಳ ಕೃಪೆ, ಅನುಗ್ರಹ ಸಂಪಾದಿಸುವುದಕ್ಕೆ ರಕ್ಷಣಾ ನಿಧಿಗೆ ಹಣ ವಸೂಲು ಮಾಡುತ್ತಾರೆ ಎಂದು ಇಟ್ಟುಕೊಂಡರೆ ಅವರು ಹೇಳುತ್ತಿದ್ದುದು ಏನು? ಬಿಜಾಪುರ ಜಿಲ್ಲೆಯವರು ಮುಖ್ಯಮಂತ್ರಿಗಳ ತೂಕದಷ್ಟು ಬಂಗಾರ ಕೂಡಿಸಿ ಅವರನ್ನು ತೂಗಬೇಕಾದರೆ ನಮ್ಮ ಊರಿನವರಿಂದ ನಮ್ಮ ಮುಖ್ಯಮಂತ್ರಿಗಳನ್ನು ನಾವೂ ಕೂಡ ಅಷ್ಟೇ ಬಂಗಾರದಿಂದ ತೂಗ ಬೇಡವೇ, ಆದ್ದರಿಂದ ಬಂಗಾರ ಕೊಡಿ ಎಂದು ಕೇಳುತ್ತಾರೆ.

ಶ್ರೀಮಾನ್ ಮಲ್ಲಪ್ಪನವರೂ ಸಹ ನಮ್ಮ ಕಡೆ ಟೂರಿಂಗ್ ಬಂದಿದ್ದರು, ಹಳೇ ಬಂಗಾರ ಕೊಡಿ ಎಂದು. ಆದರೆ ನಮ್ಮಲ್ಲಿರತಕ್ಕ ಅಧಿಕಾರಿಗಳು ಹೊಸ ಬಂಗಾರ-ಹಳೆ ಬಂಗಾರ ಯಾವುದಾದರೂ ಸರಿಯೇ ಎಂದರು. ಕೇಂದ್ರ ಸರ್ಕಾರದವರಿಗೆ ನಮ್ಮ ದೇಶದಲ್ಲಿ ಎಷ್ಟು ಬಂಗಾರವಿದೆ ಎಂಬುದು ಅವರಿಗೆ ಗೊತ್ತಿದೆ. ಆದರೆ ಜನರು ಅದನ್ನೆಲ್ಲಾ ಈಗ ಮುಚ್ಚಿಹಾಕಿದ್ದಾರೆ. ಆ ಹಿಡನ್ ಗೋಲ್ಡನ್ನು ಯಾವ ರೀತಿ ಈಚೆಗೆ ತೆಗೆಯಲು ಕೆಲಸ ಮಾಡಬೇಕೋ ಆ ಕೆಲಸವನ್ನೇ ನಾವೀಗ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿರತಕ್ಕ ಜನರು ಯಾರಾದರೂ ಅವರಲ್ಲಿ ಬಂಗಾರವಿಲ್ಲ ಎಂತ ಹೇಳಿದರೆ ಅವರಿಗೆ ಆ ಬಂಗಾರವನ್ನು ಬೇರೆ ಕಡೆಯಿಂದ ಕೊಂಡುಕೊಂಡು ತಂದು ಸರ್ಕಾರದವರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿರತಕ್ಕ ಅಧಿಕಾರಿಗಳಿಗೆ ಹಳೇ ಬಂಗಾರ ಇಲ್ಲದೆ ಹೋದರೆ ಅವರ ಖಜಾನೆಯಲ್ಲಿಟ್ಟಿರತಕ್ಕ ಹೊಸ ಬಂಗಾರದಂಥಾ ಬಂಗಾರವನ್ನೇ ಅವರಿಗೆ ಕೊಡಬೇಕೆಂದು ನಿರ್ಬಂಧ ಮಾಡುತ್ತಿದ್ದಾರೆ. ಈ ದಿವಸ ಹೀಗೆಲ್ಲ ಜನರನ್ನು ನಿರ್ಬಂಧಮಾಡಿ ಬಂಗಾರ ವಸೂಲ್ಮಾಡುತ್ತಿದ್ದರೂ ಮಂತ್ರಿಗಳು ಇಲ್ಲಿ ಯಾವ ಬಲವಂತವೂ ಇಲ್ಲದೆ ಜನಗಳೇ ತಂದು ಕೊಡುತ್ತಿದ್ದಾರೆಂತ ಹೇಳುವುದು ಖಂಡಿತ ಸರಿಯಾದ್ದಲ್ಲ. ಈ ದಿವಸ ಯಾರೇ ಆಗಲಿ ಒಂದು ಸಿಮೆಂಟ್ ಮೂಟೆ ಬೇಕೆಂತ ಹೋದರೆ ಅವರು ಮೂಟೆಗೆ ಎರಡು ರೂಪಾಯಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಜಮಾ ಮಾಡಬೇಕೆಂಬ ನಿರ್ಬಂಧವಿದೆ. ಅವರು ಈ ಎರಡು ರೂಪಾಯಿಗಳನ್ನು ಕೊಡದಿದ್ದರೆ ಅವರಿಗೆ ಸಿಮೆಂಟೇ ಇಲ್ಲ. ಹೀಗೆ ಲೈಸೆನ್ಸುಗಳನ್ನು ಯಾರಾದರೂ ರಿನ್ಯೂ ಮಾಡಿಸಿಕೊಳ್ಳಲು ಹೋದರೆ ಅವರು ಈ ತೆರಿಗೆ ಕೊಡಬೇಕು. ಬಂದೂಕು ಲೈಸೆನ್ಸ್, ಬಸ್ ಲೈಸೆನ್ಸ್‌ದಾರರೆಲ್ಲ ರಿನ್ಯೂ ಮಾಡಿಸಿಕೊಳ್ಳುವ ಕಾಲದಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣ ಕೊಟ್ಟ

ರೇನೇ ಅವರ ಲೈಸೆನ್ಸುಗಳನ್ನು ರೀನ್ಯೂ ಮಾಡುವುದು. ಈಗ ನಮ್ಮ ಶಾಸನ ಸಭೆಯಲ್ಲಿರತಕ್ಕ ಶ್ರೀ ಜಿ. ವಿ. ಆಂಜನಪ್ಪ ಎನ್ನತಕ್ಕವರು ಒಂದು ದೇವಸ್ಥಾನ ಕಟ್ಟಿಸಲು ಸಿಮೆಂಟ್ ಕೇಳಿದರೆ ಮೂಟೆಗೆ ಎರಡು ರೂ.ಗಳನ್ನು ಜಾಸ್ತಿ ಕೇಳುತ್ತಿದ್ದಾರಂತೆ. ರಿವಾಲ್‌ವರ್ ಲೈಸೆನ್ಸ್ ರಿನ್ಯೂ ಮಾಡಿಸಿಕೊಳ್ಳ ಬೇಕಾದರೆ 101 ರೂ.ಗಳನ್ನು ಕೊಡಬೇಕು! ಎಲೆಕ್ಟ್ರಿಕ್ ಪಂಪ್‌ಸೆಟ್‌ಗಳಿಗೆ ಎಲೆಕ್ಟ್ರಿಸಿಟಿ ಕೇಳಿದರೆ ಅದಕ್ಕೂ ಹೀಗೇ ದಂಡ ಕೊಡಬೇಕಂತೆ. ಬಸ್ ಪರ್ಮಿಟ್ ಕೇಳಿದರೆ 250 ರೂ.ಗಳನ್ನು ಕೊಡಬೇಕು ಎಂತ ಹೀಗೆಲ್ಲಾ ವಸೂಲ್ಮಾಡುತ್ತಿದ್ದಾರೆ. ಇದೇ ಶಾಸನಸಭೆಯಲ್ಲಿ ಮೆಂಬರಾಗಿದ್ದವರೊಬ್ಬರು Ex-M.L.A. ಅವರ ಹೆಸರನ್ನು ಬೇಕಾದರೂ ಹೇಳುತ್ತೇನೆ, ಬೇಕಾದರೆ ಬರೆದುಕೊಡುತ್ತೇನೆ— ಅವರು ಒಂದು ಸಿನೇಮಾಕ್ಕೆ ಲೈಸೆನ್ಸ್ ಕೇಳಿದರೆ 30 ತೊಲ ಚಿನ್ನ ಕೊಟ್ಟರೇನೇ ಲೈಸೆನ್ಸ್ ಕೊಡು ವುದು ಎಂತ ಹೇಳಿ 30 ತೊಲ ಚಿನ್ನ ಕೊಟ್ಟ ಮೇಲೆ ಅದನ್ನು ಮಂಜೂರು ಮಾಡಿದರಂತೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮುಜರಾಯಿ ಬಾಬಿಗೆ ಸೇರದೆ ಇರತಕ್ಕಂಥಾ ಕೆಲವು ದೇವಾಲಯಗಳಿವೆ. ಕೆಲವರು ಅವರವರ ಮನೆತನದ ಪದ್ಧತಿ ಪ್ರಕಾರ 4-6 ಜನ ಅಣ್ಣತಮ್ಮಂದಿರು ದೇವರುಗಳನ್ನು ಇಟ್ಟುಕೊಂಡಿರುತ್ತಾರೆ. ಅಂಥಾ ದೇವರುಗಳ ಮೇಲೆ ಹಾಕಿದ್ದ ಬಂಗಾರವನ್ನೂ ಸಹ ಈ ದಿವಸ ಇವರು ಬಲಾತ್ಕಾರದಿಂದ ವಸೂಲ್ಮಾಡಿಕೊಂಡು ಬಂದಿದ್ದಾರೆ. ಈ ವಿಚಾರದಲ್ಲಿ ನನಗೆ ಈಗತಾನೆ ಒಂದು ಕಾಗದ ಬಂದಿದೆ. ಹಿರಿಯೂರು ತಾಲ್ಲೂಕ್ ಆದಿವಾಲ ಎಂಬ ಗ್ರಾಮದಲ್ಲಿ ನಾರಾಯಣಗೊಂಡನಹಳ್ಳಿಯಲ್ಲಿ ಮತ್ತು ಇತರ ಸಾರ್ವಜನಿಕರಿಂದ ಬಲಾತ್ಕಾರವಾಗಿ ಬಂಗಾರ ತೆಗೆದುಕೊಂಡು ಬಂದಿದ್ದಾರೆಂದು ಇದರಲ್ಲಿ ತಿಳಿಸಿದೆ. ಹೀಗೆ ಈ ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣ ವಸೂಲ್ಮಾಡತಕ್ಕ ಸಂದರ್ಭದಲ್ಲಿ ಜನರನ್ನು ಕರೆತರುವುದಕ್ಕೆ ಪೋಲೀಸಿನವರು ವ್ಯಾನುಗಳನ್ನು ತೆಗೆದು ಕೊಂಡು ಹೋಗುತ್ತಾರೆ. ನಮ್ಮ ಪ್ರಾಂತ್ಯಕ್ಕೆ ಶ್ರೀ ಕೊಂಡಜ್ಜಿ ಬಸಪ್ಪನವರೂ ಬಂದಿದ್ದರು. ಆಗ ನಾವಾಗೇ ಅವರಿಗೆ 73 ಸಾವಿರ ರೂ.ಗಳನ್ನು ವಸೂಲ್ಮಾಡಿ ಆ ರಕ್ಷಣಾ ನಿಧಿಗೆ ಕೊಟ್ಟಿದ್ದೇವೆ; ಆದರೆ ಈ ಕೆಲಸಕ್ಕೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಪೋಲೀಸಿನವರು ವ್ಯಾನುಗಳನ್ನು ತೆಗೆದು ಕೊಂಡು ಹೋಗುತ್ತಿದ್ದಾರೆ. ಆದರ ಜನರು ಈ ಕೆಲಸವನ್ನು ದೇಶಪ್ರೇಮದಿಂದ ಮಾಡುತ್ತಿದ್ದರೂ ಅವರಿಗೆ ಈಗ ಒಂದು ಭಯೋತ್ಪಾತ ಉಂಟಾಗಿದೆ. ದೇಶಕ್ಕಾಗಿ ದಾನ ಕೊಡತಕ್ಕ ಜನರನ್ನು ಪೋಲೀಸಿನವರು ಅಧಿಕಾರವಾಣಿಯಿಂದ ಕೇಡಿಗಳನ್ನು ಹೇಳಿಕಳುಹಿಸಿ ಕರೆಸಿಕೊಳ್ಳುವಂತೆ ಈ ಅಧಿ ಕಾರಿಗಳು ಅವರನ್ನು ಬಲಾತ್ಕಾರದಿಂದ ಕರೆಸುತ್ತಿದ್ದಾರೆ. ಹೀಗೆಲ್ಲಾ ಹಣ ವಸೂಲಾಗುತ್ತಿದ್ದರೆ ಇದನ್ನು ಸ್ವಯಂಪ್ರೇರಿತವಾಗಿ ಜನ ಕೊಟ್ಟರೆಂದು ಹೇಗೆ ಹೇಳುತ್ತಾರೆ? ಆದರೆ ಅಧಿಕಾರಿಗಳು ಹಳ್ಳಿಗಳಿಗೆ ಹಣ ವಸೂಲಿಗೆ ಹೋದಾಗ ಈ ತುರ್ತು ಪರಿಸ್ಥಿತಿಯ ಅರ್ಥವನ್ನು ಆ ಜನರಿಗೆ ಹೇಗೆ ತಿಳುವಳಿಕೆ ಕೊಟ್ಟಿದ್ದಾರೆಂದರೆ—ತುರ್ತುಪರಿಸ್ಥಿತಿ ಎಂದರೆ ಯಾವಾಗ ಯಾರನ್ನು ಬೇಕಾದರೂ, ಎಲ್ಲಿಗೆ ಬೇಕಾದರೂ, ಯಾವ ಕಾಲದಲ್ಲಾದರೂ ಸರ್ಕಾರದವರು ಅಪೇಕ್ಷೆ ಮಾಡಿದರೆ ಆಗ ಅಂಥಾ ವ್ಯಕ್ತಿಗಳನ್ನು ತೆಗೆದುಕೊಂಡು ಹೋಗಲು ಸರ್ಕಾರಕ್ಕೆ ಅಧಿಕಾರವಿದೆ ಎಂಬುದಾಗಿ ಡಿ.ಸಿ. ಅವರು ಜನಗಳಿಗೆ ಹೀಗೆ ಹೇಳಿದರೆ ಈ ಮಾತುಗಳನ್ನು ಕೇಳಿದವರಿಗೆ ಅವರು ಯಾರೇ ಆಗಲಿ ಅವರಿಗೆ ಹೆದರಿಕೆ ಬಾರದೆ ಇರುತ್ತದೆಯೇ? ಇಂಥಾ ಹೇಳಿಕೆಯನ್ನು ಡಿ.ಸಿ. ಅವರೇ ಖುದ್ದಾಗಿ ಹೇಳುತ್ತಿದ್ದಾರೆ. ಇದನ್ನು ಹಿಮ್ಮೆಟ್ಟಿಸುವಂಥಾ ಶಕ್ತಿ ಆ ಹಳ್ಳಿ ಜನರಿಗೆ ಯಾರಿಗೂ ಇಲ್ಲ. ಮೇಲಾಗಿ ಆ ಅಧಿಕಾರಿಗಳು ಇನ್ನೂ ಏನು ಹೇಳುತ್ತಿದ್ದಾರೆಂದರೆ—ಅವರಿಗೆ ರಾಜ್ಯದ ಮುಖ್ಯ ಮಂತ್ರಿಗಳ ಬೆಂಬಲವಿದೆಯಂತೆ, ಹಣಕಾಸಿನ ಸಚಿವರ ಬೆಂಬಲವಿದೆಯಂತೆ, ಗೃಹ ಸಚಿವರ ಬೆಂಬಲವಿದೆಯಂತೆ. ಇಂಥಾ ಒಬ್ಬ ಆ ನಮ್ಮ ಜಿಲ್ಲೆಯಲ್ಲಿರುವುದು ಜಿಲ್ಲಾ ಆಡಳಿತ ನಡೆಸುವುದಕ್ಕಲ್ಲ. ಅದು ಕೇವಲ ಒಂದು ಪಕ್ಷದ ಜನರನ್ನು ಗುಂಪು ಕಟ್ಟುವುದಕ್ಕಾಗೇ ಎಂದು ಹೇಳದೆ ವಿಧಿಯಿಲ್ಲ. ಹೀಗೆ ಒಂದು ರಾಜಕೀಯ ಗುಂಪನ್ನು ಬಲಪಡಿಸತಕ್ಕ ದೌರ್ಜನ್ಯದ ಅಧಿಕಾರಿ ಜಿಲ್ಲೆಗೆ ಇದ್ದರೆ ಅದು ರಜಕಾರ ರಾಜ್ಯಭಾರವೇ ವಿನಾ ಬೇರೆಯಲ್ಲ. ಇದು ಜಾತೀವಾರು ಪದ್ಧತಿ ಮೇಲೆ ರಾಜ್ಯಭಾರ ಮಾಡಲು ಹೀಗೆ ಮಾಡಿದ್ದಾರೆ. ಇಂಥಾ ಒಬ್ಬ ದೊಡ್ಡ ಹುದ್ದೆಯ ಅಧಿಕಾರಿಯನ್ನು ಜಿಲ್ಲಾಧಿಕಾರಿಗಳ ಸ್ಥಾನಕ್ಕೆ ಆರಿಸುವ ಮೊದಲು ಅವರ ಸರ್ವೀಸ್ ರಿಜಿಸ್ಟರನ್ನು ತೆಗೆದು ಅವರ ಪೂರ್ವೋತ್ತರಗಳೇನೆಂಬುದನ್ನು ನೋಡಿ, ಅವರ ಇತಿಹಾಸವನ್ನು ಚೆನ್ನಾಗಿ ಶೋಧನೆ ಮಾಡಿ ಅವರ ರೆಕಾರ್ಡ್ ಅಫ್ ಸರ್ವೀಸ್ ಕ್ಲೀನಾಗಿದ್ದರೆ ಅಂಥವರಿಗೆ ಈ ಹುದ್ದೆಯನ್ನು ಕೊಡಬೇಕಾದ್ದು ನ್ಯಾಯ. ಈ ಹಿಂದೆ ಇವರಿಗೆ 4-5 ಸಾರ್ತಿ ಸಸ್ಪೆಂಡ್ ಆಗಿದೆ. ಈ ಹುದ್ದೆಗೆ ಅವರು ಅನರ್ಹತೆ ಪಡೆದಿದ್ದಾರೆ. ಇಷ್ಟೇ ಅಲ್ಲದೆ ಅವರಿಗೆ ಮ್ಯಾನರ್ಸ್ ಸಹ ಗೊತ್ತಿಲ್ಲ. ಸಾರ್ವಜನಿಕರನ್ನು ಹೇಗೆ ಗೌರವದಿಂದ ಮಾತನಾಡಿಸಬೇಕೆಂಬ ಕರ್ಟಸಿ ಕೂಡ ಅವರಲ್ಲಿಲ್ಲ, ಎಲ್ಲರನ್ನು ಏಕವಚನದಿಂದ ಮಾತನಾಡಿಸುತ್ತಿದ್ದಾರೆ. ಒಂದಾವರ್ತಿ ನಾನು ಮತ್ತು ಪಾರ್ಲಿಯ ಮೆಂಟಿನ ಸದಸ್ಯರಾದ ಶ್ರೀ ಮುಲ್ಕಗೋವಿಂದರೆಡ್ಡಿಯವರೂ ಜಿಲ್ಲಾಡೆವಲಪ್ ಕಮಿಟಿ ಮೀಟಿಂಗಿಗೆ ಹೋಗಿದ್ದೆವು. ಆ ಮೀಟಿಂಗ್ ಮಧ್ಯಾಹ್ನ 2 ಘಂಟೆಗೆ ಪ್ರಾರಂಭವಾಗಬೇಕಾಗಿತ್ತು. ಆದರೆ ಅವರು $2\frac{1}{2}$ ಘಂಟೆ ಆದರೂ ಬರಲಿಲ್ಲ. ನಾವು ಕಾದೂ ಕಾದೂ ಆ ದಿವಸ ಆ ಮೀಟಿಂಗ್ ನಡೆಯಲಿಲ್ಲವಾದ್ದ

(ಶ್ರೀ ಬಿ. ಎಲ್. ಗೌಡ)

ರಿಂದ ಹಾಗೇ ವಾಪಸ್ಸು ಬಂದೆವು. ಹೀಗೆ ಅವರಲ್ಲಿ ಒಂದು ಕಾಲದ ಬೆಲೆ ಸಹ ಗೊತ್ತಿರುವಂತೆ ಕಾಣುತ್ತಿಲ್ಲ. ಇಂಥಾ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳನ್ನಾಗಿ ಹಾಕಿರತಕ್ಕದ್ದು ಖಂಡಿತ ಸರಿಯಲ್ಲ.

ಹೀಗೆ ಇನ್ನೂ ನಮ್ಮ ಜಿಲ್ಲೆಯಲ್ಲಿ ಈ ಕಾಂಗ್ರೆಸ್ ಪುಡಾರಿಗಳ ಹಾವಳಿಯನು ಹೇಳತೀರ ದಾಗಿದೆ. ಹೊಳಲ್ಕೆರೆ ತಾಲ್ಲೂಕ್ ನಾರಾಯಣಗೊಂಡನಹಳ್ಳಿ ಪಂಚಾಯ್ತಿ ಛೇರ್ಮನ್ನರನ್ನು ಕರೆಸಿ ಪೋಲೀಸ್ ಸ್ಟೇಷನ್ನಿನಲ್ಲಿಟ್ಟುಕೊಂಡು ಅವರನ್ನು ಹೊಡೆದು ಬಡಿದು ಹೀಗೆಲ್ಲ ಗಾಬರಿ ಮಾಡಿದ್ದಾರೆ. ಈ ವಿಚಾರದಲ್ಲಿ ನಾನೇ ಕಂಪ್ಲೆಂಟ್ ಕೊಟ್ಟಿದ್ದೇನೆ. ಈ ವಿಚಾರದಲ್ಲಿ ಎಷ್ಟು ರುಜುವಾತು ಬೇಕಾ ದರೂ ನಾನು ಕೊಡಲು ತಯಾರಾಗಿದ್ದೇನೆ. ಎಷ್ಟು ಜನ ಸಾಕ್ಷಿಗಳನ್ನು ಬೇಕಾದರೂ ಕೊಡುತ್ತೇನೆ. ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುತ್ತೇವೆಂದು ಹೇಳಿಕೊಳ್ಳುವ ಸರ್ಕಾರ ಇಂಥಾ ಜಿಲ್ಲಾಧಿಕಾರಿ ಗಳನ್ನು ಬೇಗ ಅಲ್ಲಿಂದ ತೆಗೆದುಹಾಕಬೇಕು. ಇವರ ಬಲಾತ್ಕಾರವನ್ನು ಜನರು ಇನ್ನು ಸಹಿಸ ಲಾರರು. ಇವರನ್ನು ಅಲ್ಲಿಂದ ಎತ್ತದಿದ್ದರೆ ಖಂಡಿತ ಜನರು ಕ್ರಾಂತಿ ಎಳುತ್ತಾರೆ. ಇವರ ಮೇಲೆ ಇನ್ನೂ ನಾನಾ ರೀತಿಯ ದೋಷಾರೋಪಣೆಗಳಿವೆ. ಇವರು ಹೀಗೆ ಪಕ್ಷಪಾತ ಮಾಡುತ್ತಾರೆಂಬುದಕ್ಕೆ ಒಂದು ನಿದರ್ಶನ ಹೇಳುತ್ತೇನೆ.

Mr. SPEAKER.—I wanted to......

ಶ್ರೀ ಬಿ. ಎಲ್. ಗೌಡ.—ನಾವು ಈ ಸಂದರ್ಭ ಬಿಟ್ಟರೆ ಈ ವಿಷಯಗಳನ್ನೆಲ್ಲಾ ಮತ್ತೆ ಯಾವಾಗ ಹೇಳಬೇಕು ?

Mr. SPEAKER.—It is perfectly right to criticise the Government and criticise them most severely. But, when he is making allegations against individual officers, he should not go on repeating it ; there must be some limit for it. I should have shut it out at the beginning itself, but I did not want to take away the trend of his argument. But, if he goes on repeating and repeating something against one individual officer, it is not good.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಇಂಥ ವಿಚಾರಗಳನ್ನು ಇಲ್ಲಿ ತಿಳಿಸದೆ ಇದ್ದರೆ ಸರ್ಕಾರದ ವರು ಅವರ ಮೇಲೆ ಹೇಗೆ ಕ್ರಮ ಕೈಗೊಳ್ಳಬೇಕು ? ನಮಗೆ ಈ ವಿಚಾರಗಳನ್ನು ತಿಳಿಸಲು ಇರತಕ್ಕ ಅವಕಾಶ ಇದು ಒಂದೇ ಒಂದು. ನಾವು ಈ ವಿಚಾರಗಳನ್ನು ಈ ಸಭೆಯಲ್ಲಿ ಹೇಳದೆ ಹೊರಗಡೆ ಹೇಳಿದರೆ ಅದು ಡೆಫಮೇಷನ್ ಆಗುತ್ತದೆ. ಆದ್ದರಿಂದ ನಾವು ಏನಿದ್ದರೂ ಅದನ್ನೆಲ್ಲ ಇಲ್ಲೇ ಹೇಳಬೇಕು. ನಾವು ಹೇಳತಕ್ಕ ವಿಚಾರ ಒಂದೊಂದು ವೇಳೆ ಪರ್ಸನಲ್ ಇನ್‌ಸಿನ್ಯುಯೇಷನ್ ಆಗುತ್ತೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಅಂಥಾ ಸಂದರ್ಭದಲ್ಲಿ ಅಧ್ಯಕ್ಷರು ನಮ್ಮನ್ನು ಸ್ವಲ್ಪ ಪುಟಪ್ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—Official capacity ಯೊಳಗೆ, Defence fund ವಸೂಲು ಮಾಡುವುದರಲ್ಲಿ ಕೆಲವು irregularities ಇರುತ್ತೆ. ಅದರ ವಸೂಲಿಯಲ್ಲಿ ಬಲಾತ್ಕಾರ ಮಾಡು ತ್ತಾರೆ. ಅದನ್ನೆಲ್ಲ ಹೇಳಬೇಡಿ ಎಂದು ಅಪ್ಪಣೆ ಮಾಡಿದರೆ ಸರಿಹೋಗುವುದಿಲ್ಲ ಸ್ವಾಮಿ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಇನ್ನೂ ಕೆಲವು ವಿಷಯಗಳನ್ನು ಹೇಳಬೇಕಾ ಗಿರುವುದರಿಂದ ಒಂದು ರಹಸ್ಯ ಅಧಿವೇಶನವನ್ನು ಮಾಡಿದರೆ ಒಳ್ಳೆಯದೆಂದು ನಾನು ಸಲಹೆ ಮಾಡ ಬಯಸುತ್ತೇನೆ.

Mr. SPEAKER.—I will seriously consider his suggestion. But In-camera Session is not entirely shut out. But all this is going to be published.

ಶ್ರೀ ಬಿ. ಎಲ್. ಗೌಡ. —ಈ ಸರ್ಕಾರದವರು ಕ್ಷಾಮಪರಿಸ್ಥಿತಿ ಉಂಟಾಯಿತು ಎಂದು ಹತ್ತಾರು ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿದರು. ಇವರಿಗಿಂತ ಹಿಂದೆ ಇದ್ದ ಡೆಪ್ಯುಟಿ ಕಮಿಷ ನರು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಸಂಬಂಧಪಟ್ಟ ಕೆಲವಾರು ಕಾಮಗಾರಿಗಳನ್ನು ಪ್ರಾರಂಭ ಮಾಡಿದರು, ಅವು ಕಾರ್ಯಗತವಾದುವು. ಆದರೆ ಈಗಿನವರು ಬಂದಮೇಲೆ, ಹಿಂದಿನ

ಡೆಪ್ಯುಟಿ ಕಮಿಷನರಿಂದ ಮಂಜೂರಾಗಿದ್ದು ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳು ಶಿಫಾರಸು ಮಾಡಿದ್ದ ಕೆಲಸಗಳಲ್ಲಿ ವಿರೋಧ ಪಕ್ಷದವರು ಮಾಡಿದಂಥ ಸಲಹೆಗಳಿಗೆ ಹಣ ಕೊಟ್ಟಿಲ್ಲ. ಅದರ ಬದಲು ಕಾಂಗ್ರೆಸ್ ಪುಢಾರಿಗಳು ಕೆಲವರು ಸರ್ಕಾರದ ಅನುಮತಿಯಿಲ್ಲದೆ, ಜಿಲ್ಲಾಧಿಕಾರಿಗಳ ಅನುಮತಿಯಿಲ್ಲದೆ, ಮಾಡಿದ ಕೆಲಸಗಳಿಗೆ ದುಡ್ಡನ್ನು ಕೊಟ್ಟಿರುವ ವಿಚಾರದಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದೇನೆ. ಇವತ್ತಿನವರೆಗೂ ಏನೂ ಆಗಿಲ್ಲ. ಈ ಸಭೆಯ ಮಾನ್ಯ ಸದಸ್ಯರು ಅಧಿಕಾರಿಗಳಿಗೆ ಬರೆದ ಕಾಗದಗಳಿಗೆ ಉತ್ತರ ಕೊಡಬೇಕೆಂದಿದೆ. ನಾನು ಬರೆದ ಕಾಗದಕ್ಕೆ ಮತ್ತು ನಮ್ಮ ಸ್ನೇಹಿತರೂ, ಪರಿಷತ್ತಿನ ಸದಸ್ಯರೂ ಬರೆದ ಕಾಗದಕ್ಕೆ ಜವಾಬು ಕೊಟ್ಟಿಲ್ಲ.

ತುರ್ತುಪರಿಸ್ಥಿತಿಯಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚುಮಾಡಬೇಕೆಂದು ಹೇಳುತ್ತಾರೆ. ಚಳ್ಳಕೆರೆ ತಾಲ್ಲೂಕು ಚಿಕ್ಕಮಧುರೆ ಮತ್ತು ಸಾಣಿಕೆರೆ ಗ್ರಾಮಗಳಲ್ಲಿ national defence fundಗೆ ಹಣ ಕೊಡಲಿಲ್ಲವೆಂದು ಮೂರು ನಾಲ್ಕು ವರ್ಷ ಕಂದಾಯ ಕೊಡಲಿಲ್ಲವೆಂದು ಜಿಲ್ಲಾಧಿಕಾರಿಗಳು ಕೆರೆ ನೀರನ್ನು ನಿಲ್ಲಿಸಿದ್ದಾರೆ. ಯಾವ ಕಾನೂನು ಪ್ರಕಾರ ಇಂಥ ಕೆಲಸ ಮಾಡುತ್ತಾರೆ. ಚುನಾವಣೆಯಲ್ಲಿ ನನಗೆ ಎದುರಾಗಿ ನಿಂತಿದ್ದ ಕಾಂಗ್ರೆಸ್ ಸದಸ್ಯರು, ತಾಲ್ಲೂಕ್‌ಬೋರ್ಡ್ ಅಧ್ಯಕ್ಷತೆಗೆ ಎದುರು ನಿಂತಿದ್ದವರು ಸಹ ಸರ್ಕಾರದಲ್ಲಿ ಈ ವಿಷಯವನ್ನು ತಿಳಿಸಿದ್ದಾರೆ. ಆದರೂ ಏನೂ ಆಗಿಲ್ಲ. ಸರ್ಕಾರದವರು ಈಗಲಾದರೂ ಇದನ್ನು ಸರಿಪಡಿಸಬೇಕಾಗಿದೆ.

ಸಮಾಜಕಲ್ಯಾಣ ಇಲಾಖೆ ಬಗ್ಗೆ ಒಂದೆರಡು ವಿಷಯ ಹೇಳುತ್ತೇನೆ. ಈ ಇಲಾಖೆಯಲ್ಲಿ ಬಹಳ ಅನ್ಯಾಯವಾಗಿದೆ. ಈಗಿನ ಮಂತ್ರಿಗಳ ಕಾಲದಲ್ಲಿ ಆಗಿಲ್ಲ, ಹಿಂದೆ ಆಗಿದೆ. ಇವರು ಬಂದ ಮೇಲೆ ಹಿಂದೆ ನಡೆದಿರುವುದನ್ನು ಇವರಿಗೂ ತಿಳಿಸಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಜತ್ತಿ ಕಾಲೋನಿ, ಜಗಜೀವನರಾಂ ಕಾಲೊನಿ ಎಂದು ದೊಡ್ಡದೊಡ್ಡ ಮುಖಂಡರ ಹೆಸರಿನಲ್ಲಿ ಕಾಲೊನಿಗಳನ್ನು ಸ್ಥಾಪನೆ ಮಾಡಿದರು. ಈ ಮಾನ್ಯ ಸಭೆಯಲ್ಲಿ ಈ ಬಗ್ಗೆ interpellation ಸಹ ಆಗಿದೆ. ಹಿರೇಕೆರೆ ಹತ್ತಿರ ಜತ್ತಿಯವರ ಕಾಲೊನಿಯನ್ನು ಒಂದು ಗುಡ್ಡದ ಮೇಲೆ ಕಟ್ಟಿದ್ದಾರೆ. ಒಂದು ಬಾವಿಗೆ ಏಳುಸಾವಿರ ರೂಪಾಯಿ ಖರ್ಚುಮಾಡಿದ್ದಾರೆ. ಆದರೂ ಅಲ್ಲಿಗೆ ನೀರು ಬಿದ್ದಿಲ್ಲ. ಇಲ್ಲಿ ಕಟ್ಟಿರುವ ಮನೆಗಳಲ್ಲಿ ಯಾರೂ ಇಲ್ಲ. ಇದಕ್ಕೆ ಯಾರು ಕಾರಣಕರ್ತರು, ಇಲ್ಲಿಗೆ ಕೊಟ್ಟಿದ್ದ ಹೆಂಚುಗಳು, ಎಲ್ಲ ಏನಾದುವು ? ಎತ್ತು ವಗೈರೆ ಏನಾದುವು ? ಇದನ್ನೆಲ್ಲ ತನಿಖೆ ಮಾಡಬೇಕು.

ಚೌಳೂರು ಕಾವಲು, ಸಾಣಿಕೆರೆ ಕಾವಲು ಇಲ್ಲಿ ಜಮೀನಿಲ್ಲ. ಅದೆಲ್ಲ ಕೆರೆಯ ಅಂಗಳ. ರಾಜೆಪ್ಪಾಜಿ ಕಾಲೋನಿ ಎಂದು 120 ಮನೆಗಳಿಗೆ ಹಣವನ್ನು ಕೊಟ್ಟಿದ್ದಾರೆ. ಆದರೆ ಜಮೀನಿಲ್ಲದೆ ಮುಚ್ಚುವ ಪರಿಸ್ಥಿತಿಗೆ ಬಂದಿದೆ. ಈ ರೀತಿ ಮುಂಜಾಗ್ರತೆಯಿಲ್ಲದೆ ಹಣ ದುರುಪಯೋಗವಾಗಿರುವುದನ್ನು ತನಿಖೆ ಮಾಡಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ ಬಡ್ಜೆಟ್ಟಿನಲ್ಲಿ ಕ್ಷಾಮಕ್ಕೆ ಪದೇಪದೇ ತುತ್ತಾಗತಕ್ಕ ಪ್ರದೇಶಗಳಿಗೆ ಪರಿಹಾರವಾಗುವ ಯಾವ ದೊಡ್ಡ ಯೋಜನೆಯನ್ನಾಗಲೀ, ಜಲಾಶಯಗಳ ನಿರ್ಮಾಣದ ಯೋಜನೆಯನ್ನಾಗಲೀ ಹಾಕಿಕೊಂಡಿಲ್ಲ. ನಮ್ಮ ಜಿಲ್ಲೆಯಲ್ಲಿ ಯಗಚಿ ನದಿ feeder channel ಯಿಂದ ವಾಣಿವಿಲಾಸ ಸಾಗರಕ್ಕೆ, feeder channel ರಾಣಿಕೆರೆಗೆ feeder channel ಮಾಡಿಕೊಡಿ ನಾಯಕನಹಟ್ಟಿ ಹಿರೇಕೆರೆಗೆ feeder channel ಮಾಡಿಕೊಡಿ ಎಂದು ಕೇಳುತ್ತಿದ್ದೇವೆ. ಯಗಚಿ ನದಿಯಿಂದ ವಾಣಿವಿಲಾಸ ಕೆರೆಗೆ ಫೀಡರ್ ಚಾನಲ್ ಮಾಡಲು ಒಂದೂವರೆ ಕೋಟಿ ರೂಪಾಯಿ ಖರ್ಚಾಗುತ್ತದೆ. ಐವತ್ತುಲಕ್ಷ ರೂಪಾಯಿಗಳನ್ನು ಕ್ಷಾಮ ಪರಿಹಾರ ಕಾರ್ಯಕ್ಕೆ ಖರ್ಚುಮಾಡುತ್ತೀರಿ. ನಾಲ್ಕುಸಲ ಬಂದರೆ ಎರಡು ಕೋಟಿ ಆಯಿತು. ಆದ್ದರಿಂದ ಯಗಚಿ ನದಿಯಿಂದ feeder channel ಮಾಡಿದರೆ ಬೆಂಗಾಡು ಪ್ರದೇಶವಾಗಿರುವ ನಾಲ್ಕು ತಾಲ್ಲೂಕುಗಳಿಗೂ ನೀರೊದಗಿ ಅವು ನಂದನವನವಾಗುವುದಕ್ಕೆ ಅವಕಾಶವಿದೆ ಎಂದು ಹತ್ತಾರುಸಾರಿ ಈ ಸಭೆಯಲ್ಲಿ ಹೇಳಿದ್ದೇವೆ. ಎಲ್ಲರೂ ಭರವಸೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ನಮ್ಮ ಜಿಲ್ಲೆಯವರೇ. ಅವರೂ ಮಾಡಿಸಿಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ಕಾರ್ಯಗತ ಮಾಡಿಲ್ಲ.

ಚಳ್ಳಕೆರೆ ತಾಲ್ಲೂಕು ಮತ್ತು ಇತರಕಡೆ ಸಹಸ್ರಾರು ಎಕರೆ ಬಂಜರು ಭೂಮಿ ಇದೆ. ಅಲ್ಲಿ ಹುಲ್ಲೂ ಸಹ ಬೆಳೆಯುವುದಿಲ್ಲ. ಅಂಥಕಡೆ ಕಾಡನ್ನು ಬೆಳೆಸುವುದಕ್ಕೆ ಏನಾದರೂ ಮಾಡಬೇಕು. ಮಾನ್ಯ ಅರಣ್ಯಶಾಖಾ ಸಚಿವರು, ಕಷ್ಟಪರಿಸ್ಥಿತಿಯಲ್ಲಿ, ಮಳೆಯಿಲ್ಲದೆ ಇರುವ ಪ್ರದೇಶಗಳಲ್ಲಿ ಬೆಳೆಯುವಂಥ species ಇವೆ ಎಂದು ಹೇಳುತ್ತಾರೆ. ಅಂಥಾದ್ದನ್ನು ಬೆಳೆಸುವುದಕ್ಕೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಗಮನ ಕೊಡಬೇಕು. ಅಲ್ಲಲ್ಲಿ contour bunding ಹಾಕಿದರೆ ಹೆಚ್ಚಿನ ಸಹಾಯವಾಗುತ್ತದೆ. 1961-62 ರಲ್ಲಿ ಈ ವಿಚಾರ ಹೇಳಿದಾಗ ಸರ್ಕಾರದವರು ಮಾಡುತ್ತೇವೆಂದು ಹೇಳಿದ್ದರು. ಒಂದು ವರ್ಷವಾದರೂ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಹಿಂದುಳಿದ ತಾಲ್ಲೂಕನ್ನು ಅಭಿವೃದ್ಧಿ ಮಾಡಬೇಕಾದರೆ ಮತ್ತು ಕ್ಷಾಮ ಪರಿಹಾರ ಮಾಡಬೇಕಾದರೆ, ಖಾಯಂ ಆದ ಮತ್ತು ಹಂಗಾಮಿಯಾದ ಕ್ರಮಗಳನ್ನು ತೆಗೆದುಕೊಳ್ಳತಕ್ಕ ಯಾವ ಕೆಲಸಕಾರ್ಯ

(ಶ್ರೀ ಬಿ. ಎಲ್. ಗೌಡ)

ಗಳನ್ನೂ ಹಾಕಿಕೊಂಡಿಲ್ಲ. ಇದರಿಂದ ನಮ್ಮ ಪ್ರದೇಶಕ್ಕೆ ಬಹಳ ಅನ್ಯಾಯವಾಗಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ವಿದ್ಯಾಭ್ಯಾಸದ ನೀತಿಯನ್ನು ನೋಡಿದರೆ, ಎಲ್ಲಿಗೆ ಬೇಕಾದರೂ ಹೈಸ್ಕೂಲನ್ನು ಕೊಡುತ್ತೇವೆ, 80 ಪರ್ಸೆಂಟ್ ಗ್ರಾಂಟ್ ಕೊಡುತ್ತೇವೆ, ಎಂದು ಸರ್ಕಾರ ಹೇಳಿದ ಮಾತಿನಂತೆ ನಡೆದುಕೊಳ್ಳದೆ ಅನ್ಯಾಯ ಮಾಡಿದೆ. ನಾವು ಕಷ್ಟಪಟ್ಟು ಹೈಸ್ಕೂಲನ್ನು ಸ್ಥಾಪನೆ ಮಾಡಿದರೆ ನಮಗೆ ಗ್ರಾಂಟ್ ಇಲ್ಲ, ಎರಡು ಮೂರು ದಿವಸ ನಿಧಾನವಾಯಿತು ಎಂದು ಇಡೀ ಸಂಸ್ಥಾನದಲ್ಲಿ 20 ಹೈಸ್ಕೂಲುಗಳಿಗೆ ಈ ರೀತಿಯಲ್ಲಿ ಗ್ರಾಂಟ್ ಕೊಟ್ಟಿಲ್ಲವೆಂದು ಕೇಳಿದ್ದೇನೆ. ಈ ವರ್ಷವಾದರೋ ಮಿಡಲ್ ಸ್ಕೂಲಿನ ಮೂರು ಮತ್ತು ನಾಲ್ಕನೆಯ ತರಗತಿಗಳೆರಡರಿಂದಲೂ ಹೈಸ್ಕೂಲುಗಳಿಗೆ ಹುಡುಗರು ಹೋಗುತ್ತಾರೆ. ಹೋದವರ್ಷ ಸ್ಥಾಪನೆ ಮಾಡಿದ ಹೈಸ್ಕೂಲುಗಳಿಗೆ ಗ್ರಾಂಟ್ ಕೊಡದೆ ಹೋದರೆ ಈ ಪರಿಸ್ಥಿತಿಯಲ್ಲಿ ಯಾವ ರೀತಿ ಶಾಲೆಗಳನ್ನು ನಡೆಸಬೇಕು ! ಎಂದು ಯೋಚನೆ ಮಾಡಬೇಕು. ಸರ್ಕಾರದವರು ಯಾವಾಗಲಾದರೂ ಒಂದು ಭರವಸೆಯನ್ನು ಕೊಡಬೇಕಾದರೆ ಹಿಂದುಮುಂದೆ ಯೋಚನೆ ಮಾಡಿ ಸಮರ್ಪಕವಾದ ದೃಷ್ಟಿಯಿಂದ ಯೋಚನೆ ಮಾಡಬೇಕು. ಕೆಲವು ಹೈಸ್ಕೂಲುಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹುಡುಗರಿಲ್ಲ, ಕೆಲವು ಕಡೆ ಸರಿಯಾದ ವಿದ್ಯಾರ್ಹತೆ ಪಡೆದ ಉಪಾಧ್ಯಾಯರಿಲ್ಲ, ಇಂಥದಕ್ಕೆಲ್ಲ ಗ್ರಾಂಟ್ ಕೊಟ್ಟಿದ್ದಾರೆ. ಚೆನ್ನಾಗಿರುವ ಹೈಸ್ಕೂಲುಗಳಿಗೆ ಗ್ರಾಂಟ್ ಕೊಡಿ ಎಂದು ಕೇಳಿದರೆ ಕೊಡುತ್ತಿಲ್ಲ. Fee concession ಎಂದು ಬೇರೆ ಇದೆ. ವರ್ಷಕ್ಕೆ 2,400 ರೂಪಾಯಿಗಳಿಗಿಂತ ಕಡಿಮೆ ವರಮಾನ ಬರತಕ್ಕವರ ಮಕ್ಕಳಿಗೆ ಫೀ ರಿಯಾಯಿತಿ ಕೊಡುತ್ತೇವೆಂದರೂ ಗ್ರಾಂಟನ್ನು ಕೊಟ್ಟಿಲ್ಲ. ಇದನ್ನು ಸರ್ಕಾರ ಬಹಳ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ ಸ್ವಾಮಿ.

ಎಲ್ಲಕ್ಕಿಂತಲೂ ಮುಖ್ಯವಾದುದು ರೈತರಿಗೆ ಸಂಬಂಧಪಟ್ಟ ವಿಚಾರ. ಅವರು ಬೆಳೆದ ಪದಾರ್ಥಗಳಿಗೆ ಒಳ್ಳೆಯ ಬೆಲೆ ಸಿಕ್ಕಬೇಕು. ಎಲ್ಲೆಲ್ಲಿ ನೋಡಿದರೂ ರೈತರು ಬೆಳೆಯತಕ್ಕ ಆಹಾರ ಪದಾರ್ಥಗಳಿಗೆ ಬೆಲೆ ಕಡಿಮೆಯಾಗುತ್ತಿದೆ. ಸಹಕಾರ ಸಂಘಗಳ ಮೂಲಕ ಆಹಾರ ಧಾನ್ಯಗಳನ್ನು ಕೊಳ್ಳುತ್ತೇವೆಂದು ಹೇಳಿದ್ದಾರೆ. ನ್ಯಾಯಬೆಲೆಗಳನ್ನು ನಿಗದಿ ಮಾಡಬೇಕು. ಆಗಮಾತ್ರ ರೈತರಿಗೆ ಸರಿಯಾದ ಪ್ರತಿಫಲ ಸಿಕ್ಕುವುದಕ್ಕೆ ಸಾಧ್ಯ. ಇಲ್ಲದೆ ಹೋದರೆ ಇಲ್ಲ. ನಾವು ಬಹಳ ಕಷ್ಟಪಟ್ಟು 2-3 ವರ್ಷಗಳ ಹಿಂದೆ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಬೇಕೆಂದು ಎಂಟುಲಕ್ಷ ರೂಪಾಯಿಗಳನ್ನು ಕಷ್ಟಪಟ್ಟು ವಸೂಲ್ಮಾಡಿದ್ದೇವೆ. ಸುಮಾರು ಮೂರು ವರ್ಷವಾದರೂ ಆಗಿಲ್ಲ—ದಯವಿಟ್ಟು ಸಹಕಾರ ಸಕ್ಕರೆ ಕಾರ್ಖಾನೆಯನ್ನು ನಮಗೆ ಕೊಡಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ಸಭೆಯಮುಂದೆ ಇಟ್ಟಿರುವ ಆಯವ್ಯಯದ ಪಟ್ಟಿಯನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕಳೆದ ಒಂದು ವರ್ಷದಲ್ಲಿ ಕೆಲವು ಇಲಾಖೆಗಳಲ್ಲಿ ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳು ತ್ವರಿತವಾಗಿ ಮತ್ತು ತೃಪ್ತಿಕರವಾಗಿ ನಡೆದಿದೆ ಎಂಬುದನ್ನು ಹೇಳಲು ಸಂತೋಷಪಡುತ್ತೇನೆ. ಆದರೆ ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ಸರಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಪ್ರತಿವರ್ಷ ಆಯವ್ಯಯ ಪಟ್ಟಿಯನ್ನು ತಯಾರುಮಾಡುವಾಗ ಯಾವ ಯಾವ ಜಿಲ್ಲೆಯಲ್ಲಿ ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಉದ್ದೇಶಪಟ್ಟಿದ್ದಾರೆ. ಎಂಬುದನ್ನು ಅಡಕ ಮಾಡುತ್ತಿದ್ದರು. ಆದರೆ ಈ ವರ್ಷದ ಪಟ್ಟಿಯಲ್ಲಿ ಈ ವಿವರಗಳೊಂದೂ ನಮೂದಾಗಿಲ್ಲ. ಕಾರಣ ನನಗೆ ಗೊತ್ತಾಗಲಿಲ್ಲ. ಈ ಸಭೆಯ ಮಾನ್ಯಸದಸ್ಯರಿಗೆ ತಮ್ಮ ಚುನಾವಣಾಕ್ಷೇತ್ರಗಳಲ್ಲಿ ಏನೇನು ಕಾರ್ಯಕ್ರಮಗಳು ಮುಂದಿನ ವರ್ಷ ನಡೆಯುತ್ತದೆ ಎನ್ನುವುದನ್ನು ತಿಳಿದುಕೊಳ್ಳತಕ್ಕ ಒಂದು ಆಸಕ್ತಿ ಇರುತ್ತದೆ ಮತ್ತು ಈ ಕಾರ್ಯಗಳ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಕೂಡ ವ್ಯಕ್ತಪಡಿಸತಕ್ಕದ್ದು ಅವಶ್ಯಕವಾಗಿರುತ್ತದೆ. ಇಂತಹ ವಿವರಗಳನ್ನು ನಮೂದು ಮಾಡಬೇಕಿತ್ತು ಎಂದು ನನಗಾದರೂ ಅನಿಸುತ್ತದೆ.

ಹಳೆಯ ಮೈಸೂರು ರಾಜ್ಯದಲ್ಲಿಯೂ ಕೆಲವು ಹಿಂದುಳಿದಿರುವ ಪ್ರದೇಶಗಳಿವೆ. ಈ ರಾಜ್ಯದಲ್ಲೆಲ್ಲಾ ಇರುವ ಹಿಂದುಳಿದ ಪ್ರದೇಶಗಳನ್ನು ಉತ್ತಮ ಸ್ಥಿತಿಗೆ ತರತಕ್ಕದ್ದು ಸರಕಾರದ ಕರ್ತವ್ಯ, ಆದರೆ ಹಳೆಯ ಮೈಸೂರು ರಾಜ್ಯದಲ್ಲಿರತಕ್ಕ ಮಲೆನಾಡು ಪ್ರದೇಶದಕಡೆಗೆ ಸರಕಾರದವರು ಹೆಚ್ಚು ಗಮನ ಕೊಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕೆಲವರಲ್ಲಿ ಒಂದು ಭಾವನೆ ಇದೆ. ಕಡಿದಾಳ್ ಮಂಜಪ್ಪನವರು ಪಿ. ಡಬ್ಲ್ಯು. ಡಿ- ಮಂತ್ರಿಗಳಾಗಿದ್ದಾಗ ಮಲೆನಾಡಿನ ಅಭಿವೃದ್ಧಿ ಹೇರಳ

ಹಾಗಿ ಆಗಿತ್ತು ಎನ್ನುವುದನ್ನು ಆ ಭಾವನೆ ತೋರಿಸುತ್ತದೆ. ಆಗಿನ ಕಾಲದಲ್ಲಿ ಒಂದೊಂದು ತಾಲ್ಲೂಕಿಗೆ ತಕ್ಕಂತೆ ಎರಡು, ಮೂರು ಲಕ್ಷ ರೂಪಾಯಿಗಳಷ್ಟು ಖರ್ಚುಮಾಡಿದುದೇ ದೊಡ್ಡದಾಗಿತ್ತು. ಅದೊಂದು ದೊಡ್ಡ ವಿಷಯವಾಗಿ ಜನ ತಿಳಿದುಕೊಂಡಿದ್ದರು. ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಬದಲಾವಣೆಯಾಗಿದೆ. ಕಾಲವೂ ಕೂಡ ಬದಲಾಗಿದೆ. ಹಳೆಯ ಮೈಸೂರಿನ ಮಲೆನಾಡಿನ ಪ್ರದೇಶ ಇನ್ನೂ ಹಿಂದುಳಿದಿದೆ, ಅದರಲ್ಲೂ ಸಂಚಾರ ಸೌಕರ್ಯಗಳ ದೃಷ್ಟಿಯಿಂದ ಬಹಳ ಹಿಂದುಳಿದಿದೆ ಎಂದು ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಸಾವಿರಾರು ಕಡೆಗಳಿಗೆ ಸೇತುವೆಗಳನ್ನೂ, ರಸ್ತೆಗಳನ್ನೂ ಮಾಡತಕ್ಕ ಅವಶ್ಯಕತೆ ಇದೆ ಎಂದು ಅವರಿಗೆ ತಿಳಿಸಲಿಚ್ಛಿಸುತ್ತೇನೆ. ಅಲ್ಲಿ ಅಲ್ಪ ಸ್ವಲ್ಪ ಕಾರ್ಯವಾಗಿದ್ದರೂ ನಡೆಯಬೇಕಾದ ಕೆಲಸ ಕಾರ್ಯಗಳು ಇನ್ನೂ ಹೇರಳವಾಗಿವೆ. ನಾನು ರಾಜ್ಯದ ಎಲ್ಲಾ ದೃಷ್ಟಿಯಿಂದಲೂ ಮಾತನಾಡುತ್ತಿದ್ದೇನೆ. ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳಿವೆಯೋ ಅಂತಹ ಕಡೆಗೆಲ್ಲಾ ಸರಕಾರದ ಸರಿ ಸಮಾನವಾದ ಗಮನ ಬೀಳತಕ್ಕದ್ದು ಅಗತ್ಯವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ತುರ್ತಿನ ಪರಿಸ್ಥಿತಿಯಿಂದಾಗಿ, ಈ ವರ್ಷ ಬಡ್ಜೆಟ್ಟಿನಲ್ಲಿ ನಮೂದಾಗಿರತಕ್ಕ ಕೆಲವು ಕಾಮಗಾರಿಗಳನ್ನೂ ತಡೆ ಹಿಡಿಯಲಾಗಿದೆ. ತಡೆ ಹಿಡಿಯಬೇಕಾದದ್ದು ಅವಶ್ಯಕ. ಆದರೆ ತಡೆ ಹಿಡಿಯುವಾಗ ನಿರ್ದಿಷ್ಟವಾದ ತತ್ವವನ್ನನುಸರಿಸಿ ತಡೆಹಿಡಿಯಬೇಕಾಗಿತ್ತೆಂದು ನನಗನಿಸುತ್ತದೆ. ಕೆಲವು ಕಡೆಗಳಲ್ಲಿ ಎರಡು ವರ್ಷಗಳಿಂದ ಬಡ್ಜೆಟ್ಟಿನಲ್ಲಿ ನಮೂದಾಗಿದ್ದೂ ಕೆಲಸಕಾರ್ಯಗಳನ್ನೂ ಕೂಡ ಈಚೆಗೆ ನಿಲ್ಲಿಸಿದ್ದಾರೆ. ಒಂದೆರಡು ಕಡೆಗಳಲ್ಲಿ ಕೇಂದ್ರ ಸರಕಾರದಿಂದ ಸಹಾಯ ದೊರೆಯತಕ್ಕ ಕೆಲವು ಕಾಮಗಾರಿಗಳನ್ನು ಕೂಡ ನಿಲ್ಲಿಸಲಾಗಿದೆ. ಯಾವಕಾರಣದಿಂದ ನಿಲ್ಲಿಸಿದ್ದಾರೆ ಎಂಬುದನ್ನು ಮಾನ್ಯ ಹಣಕಾಸಿನ ಸಚಿವರು ತಿಳಿಸುತ್ತಾರೆ ಎಂದು ನಾನು ನಂಬುತ್ತೇನೆ

ಭೂಸುಧಾರಣೆಯ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ಕೆಲವು ತಿದ್ದುಪಡಿಯಾಗುವುದು ಅವಶ್ಯಕವೆಂದೂ ಅವರು ಅಪ್ಪಣೆಕೊಡಿಸಿದ್ದಾರೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಮಾತನಾಡುತ್ತ ಭೂಸುದಾರಣೆ ಕಾಲವಿಳಂಬವಾಗುವುದಕ್ಕೆ ನಾನು ಮತ್ತು ಶ್ರೀಮಾನ್ ಜತ್ತಿಯವರು ಕಾರಣರೆಂದೂ, ಇದಕ್ಕಾಗಿ ನಮಗೆ ಶಿಕ್ಷೆಯಾಗಬೇಕೆಂದೂ ಮತ್ತು ನಮ್ಮ ಕತ್ತನ್ನು ಕತ್ತರಿಸಬೇಕೆಂದೂ ಹೇಳಿದ್ದಾರೆ. ಈ ಭೂಸುಧಾರಣೆಗೆ ಸಂಬಂಧಪಟ್ಟ ನೀತಿ ಶ್ರೀಮಾನ್ ಜತ್ತಿಯವರಿಗೆ ಅಥವಾ ನನಗೆ ಸಂಬಂಧಪಟ್ಟ ನೀತಿಯಲ್ಲ. ಇದು ಇಡೀ ಹಿಂದೂಸ್ಥಾನಕ್ಕೆ ಸಂಬಂಧಪಟ್ಟ ನೀತಿ. ಇದು ಕಾಂಗ್ರೆಸ್ಸು ಪಕ್ಷದವರು ಒಪ್ಪಿಕೊಂಡಿರುವ ನೀತಿ ಮತ್ತು ಈ ದೇಶದಲ್ಲಿರುವ ಎಲ್ಲ ರಾಜಕೀಯ ಪಕ್ಷಗಳೂ ಒಪ್ಪಿಕೊಂಡಿರತಕ್ಕ ನೀತಿ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಈ ಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಾ ಬಂದಿದ್ದೇವೆ. ಹಲವಾರು ಕಾರಣಗಳ ದೆಸೆಯಿಂದ ಈ ಸುಧಾರಣೆಯನ್ನು ಕಾರ್ಯಗತ ಮಾಡುವುದು ತಡವಾಗಿದೆ. ಯಾವದೇಶದಲ್ಲಿಯೇ ಆಗಲಿ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತರುವಾಗ ವಿಳಂಬವಿಲ್ಲದೆ ಜಾರಿಗೆ ತರತಕ್ಕದ್ದು ಅವಶ್ಯಕ. ಮೈಸೂರು ರಾಜ್ಯದಲ್ಲಿ ಪರಿಸ್ಥಿತಿ ಅನಿಶ್ಚಿತ ಪರಿಸ್ಥಿತಿಯಾಗಿದೆ. ಭೂ ಮಾಲೀಕನಿಗೆ ಸಹಾಯವಾಗಲಿಲ್ಲ. ಗೇಣಿದಾರರಿಗೆ ಸಹಾಯವಾಗಲಿಲ್ಲ. ಭೂ ಮಾಲೀಕನಿಗೆ ತಮಗೇನು ಬರುತ್ತದೆ ಎನ್ನುವುದು ಗೊತ್ತಿಲ್ಲ. ರೈತರಿಗೆ ತಾವು ಏನು ತೆಗೆದು ಕೊಳ್ಳುತ್ತೇವೆ ಎನ್ನುವುದು ಗೊತ್ತಿಲ್ಲ. ಇಂತಹ ಒಂದು ಅನಿಶ್ಚಿತ ಪರಿಸ್ಥಿಯನ್ನು ಇನ್ನೂ ಬಹಳ ಕಾಲ ಮುಂದುವರಿಸುವುದು ಒಳ್ಳೆಯದಲ್ಲ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರು ಅವರ ಭಾಷಣದಲ್ಲಿ ಪ್ಲಾನಿಂಗ್ ಕಮಿಷನ್ನಿನವರು ಮತ್ತೆ ಕೇಂದ್ರ ಸರಕಾರಕ್ಕೆ ಕಳುಹಿಸಿರತಕ್ಕ ಸೂಚನೆಗಳನ್ನು ಸರ್ಕಾರದವರು ಪರ್ಯಾಲೋಚನೆಮಾಡುತ್ತಾರೆಂದು ಹೇಳಿದ್ದಾರೆ. ೧೯೬೦ನೇ ಇಸವಿ, ಮಾರ್ಚಿ ಅಥವಾ ಫೆಬ್ರವರಿ ತಿಂಗಳುಗಳಲ್ಲಿ ಪ್ಲಾನಿಂಗು ಕಮಿಷನ್ನಿನವರು ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕಳುಹಿಸಿದ್ದರು, ವಿಧೇಯಕವನ್ನು ಜಾರಿಗೆ ಕೊಡುವುದಕ್ಕೆ ಮುನ್ನ ಅವರು ಸೂಚಿಸಿರತಕ್ಕ ವಿಷಯಗಳನ್ನು ಸರ್ಕಾರದವರು ಪರ್ಯಾಲೋಚನೆ ಮಾಡಬೇಕೆಂದು ಹೇಳಿದ್ದಾರೆ. ಒಂದು ವರ್ಷ ಗತಿಸಿದರೂ ಇನ್ನೂ ಆ ಸೂಚನೆಗಳನ್ನು ಸರ್ಕಾರದವರು ಇದನ್ನು ಪರ್ಯಾಲೋಚನೆ ಮಾಡುವುದರಲ್ಲೇ ಇದ್ದಾರೆ. ಆ ಸೂಚನೆಗಳ ವಿಚಾರದಲ್ಲಿ ಸರ್ಕಾರದವರು ಇದುವರೆಗೆ ಏಕೆ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಹೇಳುತ್ತೇನೆ.

ಸುಪ್ರೀಂ ಕೋರ್ಟಿನ ತೀರ್ಪಿನ ವಿಚಾರವನ್ನೂ ಪದೇ ಪದೇ ನಮ್ಮ ರೆವೆನ್ಯೂ ಮಂತ್ರಿಗಳು ಪ್ರಸ್ತಾಪ ಮಾಡುತ್ತಿದ್ದಾರೆ. ಸುಪ್ರೀಂ ಕೋರ್ಟಿನ ತೀರ್ಮಾನವನ್ನು ನಾನೂ ಓದಿದ್ದೇನೆ. ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ಸರ್ಕಾರದವರಿಗೆ ರೈತವಾರಿ ಪದ್ಧತಿ ಅನ್ವಯಿಸತಕ್ಕ ಜಮೀನುಗಳನ್ನು ವಶಪಡಿಸಿಕೊಳ್ಳುವ ಹಕ್ಕಿಲ್ಲ. ನಮ್ಮ ರಾಜ್ಯದಲ್ಲಿ ರೈತವಾರಿ ಪದ್ಧತಿ ಇರತಕ್ಕದ್ದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಹಾಗೂ ಕೊಳ್ಳೇಗಾಲ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಜಿಲ್ಲೆಯ ಜಮೀನನ್ನು ಬಿಟ್ಟು ಉಳಿದ ಪ್ರದೇಶಗಳಿಗೆ ಈ ಕಾನೂನನ್ನು

(ಶ್ರೀ ಕಡಿದಾಳ್ ಮಂಜಪ್ಪ)

ಜಾರಿ ಕೊಡುವುದರಲ್ಲಿ ಯಾವ ಆತಂಕವೂ ಇಲ್ಲ. ಇದು discriminatory ಆಗುವುದಿಲ್ಲ. ಏಕೆಂದರೆ, ಈಗ ಐದು ಪ್ರದೇಶಗಳಲ್ಲಿ ಐದು ವಿಧವಾದ ಕಾನೂನುಗಳು ನಮ್ಮಲ್ಲಿವೆ. ಗೇಣಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ರಾಜ್ಯದ ಎಲ್ಲ ಪ್ರದೇಶಗಳಿಗೂ ಜಾರಿಗೆ ಕೊಟ್ಟು ಉಳಿದ ವಿಚಾರಗಳನ್ನು ನಾವು ಯೋಚನೆ ಮಾಡಬಹುದು. ಆಯೋಜನಾ ಮಂಡಲಿಯವರು, ಕೇಂದ್ರ ಸರ್ಕಾರದವರು ಈ ಸರ್ಕಾರಕ್ಕೆ ಕಳುಹಿಸಿರುವ ಸೂಚನೆಗಳನ್ನು ವಿಮರ್ಶೆಮಾಡಿ ಗೇಣಿಗೆ ಸಂಬಂಧಪಟ್ಟ ಅಧ್ಯಾಯಗಳನ್ನು ಮಾತ್ರ ಜಾರಿಗೆ ಕೊಟ್ಟಿದ್ದಿದ್ದರೆ ಅಷ್ಟು ಮಟ್ಟಿಗೆ ರೈತರ ಮನಸ್ಸಿಗೆ ಮಾನಸಿಕವಾಗಿಯಾದರೂ ತೃಪ್ತಿ ದೊರಕುತ್ತಿತ್ತು.

ಈ ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ಪ್ರಜಾಪ್ರಭುತ್ವ ಉಳಿಯಬೇಕಾದರೆ ಜನ ಸಾಮಾನ್ಯರಿಗೆ ಮಾನಸಿಕವಾದ ತೃಪ್ತಿ ಬರಬೇಕು. ಎಲ್ಲೋ ಅಲ್ಲಲ್ಲಿ ಕೆಲವರಿಗೆ ತೃಪ್ತಿ ಬಂದರೆ ಸಾಲದು. ಭೂಸುಧಾರಣೆಗೆ ಸಂಬಂಧಪಟ್ಟ ಪ್ರಶ್ನೆ ಜನಸಾಮಾನ್ಯರಿಗೆ ಸಂಬಂಧಪಟ್ಟ ಪ್ರಶ್ನೆ. ಕೆಲವರು ಮೈಸೂರು ರಾಜ್ಯದಲ್ಲಿ ತಿಳಿದುಕೊಂಡಿದ್ದಾರೆ. ಈ ಭೂಸೂಧಾರಣೆ ಪ್ರಶ್ನೆಯನ್ನು ಹಿಡಿದು ಕೊಂಡಿರುವವರು ಶ್ರೀಮಾನ್ ಜತ್ತಿಯವರು ಮತ್ತು ಕಡಿದಾಳ್ ಮಂಜಪ್ಪ ಎಂದು. ಅದು ತಪ್ಪು ಅಭಿಪ್ರಾಯ. ಯಾವುದಾದರೂ ಒಂದು ನಿರ್ದಿಷ್ಟವಾದ ನೀತಿಯನ್ನನುಸರಿಸಬೇಕು. ಇಲ್ಲವಾದರೆ ನಮಗೆ ಧೈರ್ಯವಿದ್ದರೆ ನಾವು ಮಾಡುವುದು ಇಷ್ಟೇ, ಇನ್ನು ಮಾಡುವುದಿಲ್ಲವೆಂದು ಹೇಳಬೇಕು. ಇಂಥ ಅನಿಶ್ಚಿತ ನೀತಿಯನ್ನನುಸರಿಸುವುದರಿಂದ ಯಾರಿಗೂ ಪ್ರಯೋಜನವಿಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಕಳೆದ ಒಂದು ವರ್ಷದಿಂದ ರಾಜ್ಯದ ಅನೇಕ ಕಡೆಗಳಲ್ಲಿ ಭೂಮಾಲೀಕರು ರೈತರನ್ನು ಉಚ್ಚಾಟನೆ ಮಾಡಿದ್ದಾರೆ. ಇನ್ನು ವಿಳಂಬವಾದರೆ ಈ ಸುಧಾರಣೆಗಳಿಂದ ಯಾವ ಪ್ರಯೋಜನವೂ ಲಭಿಸುವುದಿಲ್ಲವೆಂದು ನಾನು ಬಹಳ ವಿನಯ ಪೂರ್ವಕವಾಗಿ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶಿಕ್ಷಣದ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದಿದ್ದೇನೆ. ನಮ್ಮ ಶಿಕ್ಷಣ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದಕ್ಕೆ ವಿರೋಧವಾಗಿ ಇನ್ನೊಬ್ಬ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಮೊನ್ನೆ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಬಹುಶಃ ಮುಖ್ಯ ಮಂತ್ರಿಗಳ ಹೇಳಿಕೆ ಅಖೈರು ಎಂದು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ನಾನು ಟೀಕೆ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಪದೇ ಪದೇ ಬದಲಾವಣೆ ಮಾಡತಕ್ಕದ್ದು ಅನುಚಿತ, ಒಳ್ಳೆಯದಲ್ಲವೆಂದು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ. ಯಾವುದಾದರೂ ಒಂದು ಪದ್ಧತಿ ಅನುಷ್ಠಾನಕ್ಕೆ ಬಂದರೆ ಆ ಪದ್ಧತಿ ಕೆಲವು ವರ್ಷಗಳ ಕಾಲವಾದರೂ ಇರತಕ್ಕದ್ದು ಆವಶ್ಯಕ. ಮುಖ್ಯವಾಗಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಓದುವುದನ್ನೂ ಬರೆಯುವುದನ್ನೂ ಕಲಿಸಿಕೊಡಬೇಕು; ಜೊತೆಗೆ ಸ್ವಲ್ಪ ಭೂಗೋಳ ಚರಿತ್ರೆಗಳನ್ನು ಹೇಳಿಕೊಡಬೇಕು, ಮಗ್ಗಿ ಕಲಿಸಿಕೊಡಬೇಕು. ಪೂರ್ವ ಕಾಲದಲ್ಲಿ ಈಗಿನ ಮಕ್ಕಳ ಹಾಗೆ ಹೇರಳವಾಗಿ ಪುಸ್ತಕಗಳನ್ನು ಓದತಕ್ಕ ಅವಕಾಶವಿಲ್ಲದೆ ಇದ್ದರೂ ಕೂಡ ಚೆನ್ನಾಗಿ ಓದುವುದನ್ನು ಬರೆಯುವುದನ್ನು ಕಲಿತುಕೊಳ್ಳತಕ್ಕ ಅವಕಾಶವಿತ್ತು. ಈಗ ಪುಸ್ತಕಗಳ ಹೊರೆ ಜಾಸ್ತಿಯಾಗುತ್ತ ಹೋಗುತ್ತಿದೆ. ಜೊತೆಗೆ ಒಂದೊಂದು ಸಂಸ್ಥಾನದಲ್ಲಿಯೂ ಒಂದೊಂದು ಹೇಳಿಕೆಯನ್ನು ಕೂಡುತ್ತಾ ಇರುತ್ತಾರೆ ಮತ್ತು ಮನಸ್ವಿಯಾಗಿ ಬದಲಾವಣೆಗಳನ್ನು ಮಾಡುತ್ತಾರೆ. ಬದಲಾವಣೆಗಳ ವಿಚಾರವನ್ನು ವಿದ್ಯಾಮಂತ್ರಿಗಳು ಅರಿತರೆ ವಾಸಿ ಎಂದು ಅಂದುಕೊಂಡಿದ್ದೇನೆ.

ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಇದು ಏಕೆ ಎಂದು ನನಗೆ ಅರ್ಥವಾಗುವುದಿಲ್ಲ. ಈಗ ಹಣಕಾಸಿನ ಅಡಚಣೆ ಇದೆ, ವಿಶ್ವ ವಿದ್ಯಾನಿಲಯದ ಕೊರತೆ ಇಲ್ಲ. ಕರ್ಣಾಟಕ ವಿಶ್ವ ವಿದ್ಯಾನಿಲಯ ಮತ್ತು ಮೈಸೂರು ವಿಶ್ವ ವಿದ್ಯಾನಿಲಯಗಳಿವೆ. ಹಾಗಿದ್ದರೂ ಬೆಂಗಳೂರಿನಲ್ಲಿ ಒಂದು ವಿಶ್ವ ವಿದ್ಯಾನಿಲಯವನ್ನು ಏಕೆ ಸ್ಥಾಪನೆ ಮಾಬೇಕು ? ಅದರ ಅವಶ್ಯಕತೆ ಏನು? ಖಾಸಗಿಯವರು ಹಣವನ್ನೊದಗಿಸಿ ಅದರ ಖರ್ಚು ವೆಚ್ಚಗಳನ್ನು ನಿರ್ವಹಿಸುವುದಾದರೆ ಪರವಾಯಿಲ್ಲ. ಸರ್ಕಾರದ ಬೊಕ್ಕಸದಿಂದ ಹಣವನ್ನು ಕೊಟ್ಟು ಅನಾವಶ್ಯಕವಾಗಿ ಏಕೆ ವಿಶ್ವ ವಿದ್ಯಾನಿಲಯವನ್ನು ಮತ್ತೆ ಸ್ಥಾಪಿಸಬೇಕೆಂದು ಸರ್ಕಾರವನ್ನು ಕೇಳುತ್ತೇನೆ. ಅದೇ ಕೆಲಸವನ್ನು ಮೈಸೂರು ವಿಶ್ವ ವಿದ್ಯಾನಿಲಯ ಮಾಡುವುದಕ್ಕಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ.

ಸರ್ಕಾರಿ ನೌಕರಿಗಳಿಗೆ ಸಂಬಳವನ್ನು ಮಾಡತಕ್ಕ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದಿದ್ದೇನೆ. ಶಾಲಾ ಉಪಾಧ್ಯಾಯರ ನೇಮಕ ಕಳೆದ ಒಂದು ಒಂದೂವರೆ ವರ್ಷದಿಂದ ಹಂಗಾಮಿಯಾಗಿ ನಡೆಯುತ್ತಿದೆ. ಹಾಗೆಯೇ ಕೆಲವು ಇಲಾಖೆಗಳಲ್ಲಿ ಗುಮಾಸ್ತರ ನೇಮಕವೂ ಹಂಗಾಮಿ

ಯಾಗಿ ನಡೆಯುತ್ತಿದೆ. ಹಾಗೆಯೇ ಕೆಲವು ಇಲಾಖೆಗಳಲ್ಲಿ ಗುಮಾಸ್ತರ ನೇಮಕವೂ ಹಂಗಾಮಿಯಾಗಿ ನಡೆಯುತ್ತಿದೆ. ಇದು ಒಳ್ಳೆಯದಲ್ಲ. ಸರಿಯಾದ ಉಮೇದುವಾರರನ್ನು ಆರಿಸಿ...

Mr. SPEAKER.—As for these temporary appointments,-since when it has been going on ?

Sri KADIDAL MANJAPPA.—Since a long time.

ಹಿಂದೆಯೂ ಕೂಡ ಹಂಗಾಮಿ ನೇಮಕಗಳಾಗುತ್ತಿದ್ದವು. ಆದರೆ ಕಳೆದ ಒ ದೂವರೆ ವರ್ಷ ದಿಂದ ವಿದ್ಯಾ ಇಲಾಖೆಯಲ್ಲಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ನೇಮಕ ಹಂಗಾಮಿಯಾಗಿ ನಡೆ ಯುತ್ತಿದೆ. ಹೀಗೆಯೇ ಗುಮಾಸ್ತರ ನೇಮಕಗಳೂ ಹಂಗಾಮಿಯಾಗಿ ನಡೆಯುತ್ತಿವೆ. ಸುಪ್ರೀಂ ಕೋರ್ಟ್ ತೀರ್ಮಾನವಾದ ನಂತರ ಯಾವ ಆಧಾರದ ಮೇಲೆ ನೌಕರರ ನೇಮಕವಾಗಬೇಕು ಎನ್ನು ವುದು ಇತ್ಯರ್ಥವಾಗಿಲ್ಲ. ಅಧಿಕಾರಿಗಳು ತಮಗೆ ಬೇಕಾದವರನ್ನು ನೇಮಕ ಮಾಡಿ ಕೊಂಡಿರು ತ್ತಾರೆ. ಒಂದು ಸಲ ನೇಮಕ ಮಾಡಿಕೊಂಡ ನಂತರ ಮನೆಗೆ ಕಳಿಸುವುದಕ್ಕೆ ಬಹಳ ಕಷ್ಟವಾಗು ತ್ತದೆ. ಯಾವುದಾದರೂ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಬೇಕಾಗುತ್ತದೆ. ಪರೀಕ್ಷೆ ಯಲ್ಲಿ ಪಡೆದ ನಂಬರುಗಳ ಆಧಾರದ ಮೇಲೆ ಅಥವಾ ಬಚತನದ ಆಧಾರದ ಮೇಲೆ ಯಾವುದಾದರೂ ಕೆಲವು ಅರ್ಹತೆಗಳನ್ನು ನಿಗದಿ ಮಾಡಬೇಕಾಗುತ್ತದೆ. ಹಂಗಾಮಿ ನೇಮಕವಾದರೂ ಕೂಡ ಒಂದು ನಿರ್ದಿಷ್ಟವಾದ ಆಧಾರ ಅವಶ್ಯಕ.

ಹೀಗೆಯೇ Collegiate Education Department ನಲ್ಲಿ ಯಾವ ಆಧಾರದ ಮೇಲೆ ಯಾರು ನೇಮಕ ಮಾಡುತ್ತಾರೆನ್ನುವುದು ನಮಗೆ ಗೊತ್ತಾಗಲಿಲ್ಲ. ಅದು ದೊಡ್ಡ ಇಲಾಖೆ. ಆ ಇಲಾಖೆಯಲ್ಲಿ ನೇಮಕ ಮಾಡುವಾಗ ಯಾವುದಾದರೂ ನೀತಿಯನ್ನನುಸರಿಸುವುದು ಅವಶ್ಯಕ. ಜೊತೆಗೆ ನೇಮಕಗಳನ್ನು ಮಾಡುವುದಕ್ಕೆ ಒಂದು ಕಮಿಟಿ ಇರತಕ್ಕದ್ದು ಬಹಳ ಅವಶ್ಯಕವೆಂದು ನನಗೆ ತೋರುತ್ತದೆ. ವಿಶ್ವವಿದ್ಯಾನಿಲಯಕ್ಕೆ ನೇಮಕ ಮಾಡುವಾಗ Appointing Committee ಎಂದು ಇದೆ, ಅದೇ ರೀತಿ ಈ ಇಲಾಖೆಯಲ್ಲಿಯೂ ಖಾಲಿಯಾದ ಸ್ಥಾನಗಳಿಗೆ ನೌಕರರನ್ನು ನೇಮಕಮಾಡು ವಾಗ ಒಂದು ಸಮಿತಿ ಇದ್ದರೆ ಬಹಳ ಒಳ್ಳೆಯದು. ಆ ರೀತಿ ಮಾಡುವುದು ಬಹಳ ಅವಶ್ಯಕವೆಂದು ನಾನು ಹೇಳುತ್ತೇನೆ.

ಶರಾವತಿ ಯೋಜನೆ ಸಂಬಂಧ ಒಂದು ಮಾತನ್ನು ನಿವರ್ಾಹವಿಲ್ಲದೆ ಹೇಳಬೇಕಾಗಿದೆ. ಕೆಲವು ಒಡಕು ಶಬ್ದಗಳನ್ನು ಅಲ್ಲಲ್ಲಿ ನಾನು ಕೇಳುತ್ತಿದ್ದೇನೆ. ಕಳೆದ ಮಹಾ ಚುನಾವಣೆಯಲ್ಲಿ ಒಬ್ಬೊಬ್ಬರು ರಾಜಕಾರಣಿಗಳು ಶರಾವತಿ ಯೋಜನೆಯಲ್ಲಿ ಕೆಲಸ ಮಾಡತಕ್ಕ ಒಬ್ಬೊಬ್ಬರು ಕಂಟ್ರಾಕ್ಟರುಗಳಿಂದ ತಮ್ಮ ಚುನಾವಣೆಗೋಸ್ಕರ ಧನ ಸಂಗ್ರಹ ಮಾಡಿದರು ಎಂದೂ, ಅವರು ಈ ಕಂಟ್ರಾಕ್ಟರುಗಳಿಗೆ ಕೆಲಸವನ್ನು ಕೊಡತಕ್ಕ ಸಂದರ್ಭಗಳಲ್ಲಿ ಮತ್ತು ಅವರಿಗೆ ಹಣವನ್ನು ಕೊಡತಕ್ಕ ಸಂದರ್ಭದಲ್ಲಿ ಕೈವಾಡ ನಡೆಸಿದ್ದಾರೆಂದು ಜನ ಆಡಿಕೊಳ್ಳುತ್ತಿದ್ದಾರೆ.

Sri C. J. MUCKANNAPPA.—Sir, I raise to a point of order. The other day, you were pleased to give a ruling on the word 'kaiwada' that it should not be used. How my friend, the learned Ex-Minister can use it under the circumstances now ? He says "kaiwada—there is something fishy about the deal". The other-day our able Chief Minister took objection and you were pleased to give a ruling. My appeal to the Chair is that these are occasions when these words could be used. At least now., when the learned Ex-Minister is using that word, let us not take objection for the use of the word 'kaiwada'. I want to know whether your ruling exists or is it by-passed.

ಶ್ರೀ ಜೆ. ವಿ. ಗೌಡ.—"ಕೈವಾಡ" ಎನ್ನುವುದನ್ನು ಉಪಯೋಗಿಸಿದ್ದು ತಪ್ಪು ಎಂದು ಹೇಳ ಲಿಲ್ಲ. ಸಂದರ್ಭಕ್ಕೆತಕ್ಕಂತೆ.........

Mr. SPEAKER.—I know what I have said. Let me not be briefed by others.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಸದಸ್ಯರು ಭಾಷಣ ಮಾಡುವಾಗ ರಾಜಕಾರಣಿ ಗಳು ಎಂದು ಹೇಳಿದರು. ಎಂದರೆ ಆಡಳಿತ ಪಕ್ಷಕ್ಕೆ ಸೇರಿದ ರಾಜಕಾರಣಿಗಳು ಎಂದು ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ.

Sri KADIDAL MANJAPPA.—I am not here to get inspiration from that end, Sir.

Sri C. J. MUCKANNAPPA.—What happened to my Point of Order, Sir ?

Mr. SPEAKER.—I have said that, it is not unparliamentary. It depends upon circumstances. That ruling still holds good.

Sri C. J. MUCKANNAPPA.—Sir, he says there is something fishy about Sharavathi. Who is that "*rajakarani*" Sir ? Under these circumstances, I leave it to the Chair once again because it carries a good lot of meaning, because there are some people who have given money to contractors and all that. I leave it to the Chair.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಹೇಳುತ್ತಾ ಇದ್ದೆ ಸ್ವಾಮಿ, ಕಂಟ್ರಾಕ್ಟರುಗಳಿಗೆ ಕೆಲಸ ಹಂಚುವುದರಲ್ಲಿ ಮತ್ತು ಕಂಟ್ರಾಕ್ಟರುಗಳಿಗೆ ಹೆಚ್ಚಿಗೆ ರೇಟ್ ಕೊಡುವ ವಿಚಾರದಲ್ಲಿ, ರಾಜಕಾರಣಿಗಳು ಸ್ವಲ್ಪ ಕೈವಾಡ ನಡೆಸಿದ್ದಾರೆಂದು ಜನತೆ ಹೇಳುತ್ತಾ ಇದ್ದಾರೆ ಎಂದು ಸರ್ಕಾರದವರು ಅಂಕಿ ಅಂಶಗಳ ಸಮೇತ ಸಾರ್ವಜನಿಕರ ಮನಸ್ಸಿನಲ್ಲಿರತಕ್ಕ ಸಂಶಯವನ್ನು ನಿವಾರಣೆ ಮಾಡತಕ್ಕಂಥಾದ್ದು ಬಹಳ ಅವಶ್ಯಕ. ಸರ್ಕಾರದ ಹಿತದೃಷ್ಟಿಯಿಂದ ಮತ್ತು ಆಡಳಿತ ಪಕ್ಷದ ದೃಷ್ಟಿಯಿಂದ ಸಮಸ್ತ ವಿವರಗಳನ್ನೂ ಸಾರ್ವಜನಿಕರಿಗೆ ಕೊಡತಕ್ಕಂಥಾದ್ದು ಅವಶ್ಯಕವೆಂದು ಮನವಿ ಮಾಡಿಕೊಳ್ಳುತ್ತೇನೆ. ಇತ್ತೀಚೆಗೆ ಕಂಟ್ರಾಕ್ಟರುಗಳ ಕಿಸೆಯಲ್ಲಿ ಕೆಲವರಿರುವುದು ಸ್ವಲ್ಪ ಜಾಸ್ತಿಯಾಗಿದೆ. ಇದರಿಂದ ದೇಶಕ್ಕೆ ಅಪಾಯ. ಈ ಅಪಾಯ ತಪ್ಪುವ ಹಾಗೆ ಸರ್ಕಾರದವರು ಮಾಡಬೇಕೆಂದು ಹೇಳಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಹರಿಜನ ವಸತಿ ಸೌಕರ್ಯದ ವಿಷಯದಲ್ಲಿ ಒಂದು ಮಾತು ಹೇಳಲು ಇಚ್ಛಿಸುತ್ತೇನೆ. 1½ ವರ್ಷಗಳ ಹಿಂದೆ ಸೊಸೈಟಿಗಳ ಮೂಲಕ ಅವರಿಗೆ ಮನೆ ಕಟ್ಟಿಕೊಳ್ಳತಕ್ಕ ಬಗ್ಗೆ ಸಹಾಯ ಮಾಡಬೇಕೆಂದು ಸರ್ಕಾರ ಆಜ್ಞೆ ಮಾಡಿತ್ತು. ಆದರೆ ಕೆಲವು ಕಡೆಗಳಲ್ಲಿ ಸೊಸೈಟಿಗಳನ್ನು ಮಾಡಿಕೊಂಡಿದ್ದಾಗ್ಯೂ ಕೂಡ ಹಣವನ್ನು ಒದಗಿಸತಕ್ಕ ವ್ಯವಸ್ಥೆ ಆಗಿಲ್ಲ. ಬಹಳ ಕಡೆಗಳಲ್ಲಿ ಹರಿಜನರು ಕಷ್ಟದಲ್ಲಿದ್ದಾರೆ. ಅವರಿಗೆ ವಸತಿ ಸೌಕರ್ಯ ಒದಗಿಸತಕ್ಕ ಬಗ್ಗೆ ಏನಾದರೂ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಮಲೆನಾಡಿಗೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇತ್ತೀಚೆಗೆ ಸರ್ಕಾರದವರು ರೆವಿನ್ಯೂ ಇಲಾಖೆಯ ಆಡಳಿತಕ್ಕೆ ಒಳಗಾಗಿದ್ದ ಕೆಲವು ಕಾಡುಗಳನ್ನು ಅರಣ್ಯ ಇಲಾಖೆಗೆ ಸೇರಿಸಿಕೊಳ್ಳತಕ್ಕ ಪ್ರಯತ್ನ ಮಾಡುತ್ತಾ ಇದ್ದಾರೆ. ರೆವಿನ್ಯೂ ಇಲಾಖೆಯ ಆಡಳಿತಕ್ಕೆ ಒಳಗಾಗಿದ್ದ ಕಾಡುಗಳಲ್ಲಿ ರೈತರಿಗೆ ಅನಾದಿಯಿಂದ ಬಂದ ಹಕ್ಕುಬಾಧ್ಯತೆಗಳು ಇವೆ. ಅವರು ಕಾಡುಗಳಲ್ಲಿ ದನಗಳನ್ನು ಮೇಯಿಸಬಹುದು, ಮತ್ತು ಆ ಕಾಡುಗಳಿಂದ ಸೊಪ್ಪುಸದೆ ತರುವ ಅವಕಾಶವಿದೆ. ಈಗ ಅವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿಬಿಟ್ಟರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಕೆಲವು ಕಡೆಗಳಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಅರಣ್ಯಗಳೂ ಇವೆ. ಅಂಥ ಅರಣ್ಯವನ್ನು ಭೂಮಿ ಇಲ್ಲದ ಹರಿಜನರಿಗೆ ಮತ್ತು ಇತರರಿಗೆ ವ್ಯವಸಾಯಕ್ಕೆ ಕೊಡುವುದು ಅವಶ್ಯಕವೆಂತ ಅರಣ್ಯ ಮಂತ್ರಿಗಳಲ್ಲಿ ಹೇಳುತ್ತೇನೆ.

ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ದೇವಯ್ಯ (ಮಲ್ಲೇಶ್ವರ).—ಸ್ವಾಮಿ, ಅಧ್ಯಕ್ಷರೆ, ನಮ್ಮ ಮುಂದೆ ಏನು ಒಂದು ಬಜೆಟ್ ಇಟ್ಟಿದ್ದಾರೆಯೋ ಅದರಲ್ಲಿ ಅಡಕವಾಗಿರತಕ್ಕ ವಿಚಾರಗಳ ಬಗ್ಗೆ ನಮ್ಮ ಸ್ನೇಹಿತರು ಆಗಲೇ ಭಾಷಣ ಮಾಡಿದ್ದಾರೆ. ನಾನಾದರೂ ಬೆಂಗಳೂರು ಕಾರ್ಪೊರೇಷನ್ ಏರಿಯಾದಿಂದ ಎಲೆಕ್ಟ್ ಆಗಿ ಬಂದಿರುವುದರಿಂದ, 14 ಲಕ್ಷ ಜನಸಂಖ್ಯೆ ಉಳ್ಳ ಬೆಂಗಳೂರು ಸಿಟಿ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕೆಂದು ಕೇಳಿ ಮಾತನಾಡುವುದು ನನ್ನ ಕರ್ತವ್ಯ.

ಎಲ್ಲದಕ್ಕಿಂತ ಮೊದಲು ಕಳೆದ ವರ್ಷ ಬಜೆಟ್ ಭಾಷಣದಲ್ಲಿ ಮತ್ತು ಈ ಸಭೆಯಲ್ಲಿ ಕೊಶ್ಚನ್ ಟೈಮಿನಲ್ಲಿ ಕೂಡ ಬೆಂಗಳೂರು ನೀರಿನ ಸಮಸ್ಯೆ ವಿಚಾರವಾಗಿ ಅನೇಕ ಸ್ನೇಹಿತರುಗಳು ಮಾತನಾಡಿ ಸರ್ಕಾರದ ಗಮನವನ್ನು ಆ ಕಡೆಗೆ ಸೆಳೆದದ್ದನ್ನು ಸದಸ್ಯರ ಜ್ಞಾಪಕಕ್ಕೆ ತರುತ್ತಿದ್ದೇನೆ. ಆ ಸಮಯದಲ್ಲಿ ಸರ್ಕಾರದ ಮುಂದೆ ಹಳ್ಳಿಮಾಲ, ಶಿಂಶ ಮತ್ತು ಕಾವೇರಿ,

ಈ ಮೂರು ಸಮಸ್ಯೆಗಳು ಇದ್ದುವು. ನಮ್ಮ ಕಾರ್ಪೊರೇಷನ್ನಿನಲ್ಲಿ ಬೆಂಗಳೂರಿನ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಕಾವೇರಿ ನದಿಯ ಮೂಲಕವೇ ಆಗಬೇಕು ಎಂದು ಠರಾವು ಮಾಡಿತು. ಇದನ್ನು long range scheme ನಲ್ಲಿ ಸೇರಿಸಿದಾಗ್ಯೂ ಕೂಡ, ಅದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಹೇಳಿಬಿಟ್ಟು ಈ ಸಭೆಯಲ್ಲಿ ನಾವು ಮಾತನಾಡಿದೆವು. ಈ ವಿಚಾರದಲ್ಲಿ ನಾನು ಸರ್ಕಾರವನ್ನು ಪ್ರಶಂಸೆ ಮಾಡಬೇಕಾಗಿದೆ. ಏಕೆಂದರೆ ಹಳ್ಳಿಮಾಲಾ ಅಥವ ಶಿಂಶ ಯೋಜನೆಗಳಿಂದ ನಮಗೆ ನೀರು ಒದಗಿಸುವ ಭರವಸೆ ಏನು ಇತ್ತೋ, ಖಂಡಿತವಾಗಿಯೂ ಆ ಭರವಸೆ ಕಾರ್ಯಗತವಾಗುತ್ತಾ ಇಲ್ಲ. ಒಂದು ವೇಳೆ ಕಾರ್ಯಗತವಾಗುವ ಸಂದರ್ಭವಿದ್ದರೂ ಕೂಡ, ಬೆಂಗಳೂರು ಜನತೆಗೆ ಏನೂ ಪ್ರಯೋಜನವಾಗುತ್ತಿರಲಿಲ್ಲ. ಈಗ ಸರ್ಕಾರದವರು 13 ಕೋಟಿ ರೂಪಾಯಿಯ ಒಂದು ಯೋಜನೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಆ ಯೋಜನೆಯನ್ನು ನಾನು ಮಾತ್ರವಲ್ಲ, ಬೆಂಗಳೂರು ನಗರ ಮತ್ತು ನಮ್ಮ ಮೈಸೂರು ಸಂಸ್ಥಾನದ ಪ್ರಜಾಕೋಟಿ ಮಾತ್ರವಲ್ಲ, ಇಡೀ ಭಾರತದೇಶದಿಂದ ಸನ್ಮಾನವಾಗಿದೆ. ಬೆಂಗಳೂರು ಯಾತ್ರಿಕರ ಒಂದು ಸ್ಥಳವಾಗಿದೆ, ನಮ್ಮ ಸ್ನೇಹಿತರೊಬ್ಬರು ಕೇವಲ 14 ಲಕ್ಷ ಜನಸಂಖ್ಯೆ ಇರತಕ್ಕಂಥ ಬೆಂಗಳೂರಿಗೆ ನೀರನ್ನೊದಗಿಸಲು ಸರ್ಕಾರ ಬಹಳ ತೀವ್ರತೆಯಿಂದ ಯೋಚನೆ ಮಾಡುತ್ತಾ ಇದ್ದು ಅದೇ ಹಳ್ಳಿಗಾಡಿನ ಕಡೆಗೆ ಏನೂ ಗಮನ ಕೊಡುತ್ತಾ ಇಲ್ಲವೆಂದು ಹೇಳಿದ್ದಾರೆ. ಸುಮಾರು 14 ಲಕ್ಷ ಜನಸಂಖ್ಯೆ ಉಳ್ಳ ಬೆಂಗಳೂರಿಗೆ ನೀರೊದಗಿಸುವ ಕಾತುರತೆಯನ್ನು ಅವರು ಟೀಕೆ ಮಾಡಿದರು. ತಮ್ಮ ತಮ್ಮ ಸಂಬಂಧಿಕರೂ, ತಮ್ಮ ಕಡೆಯವರೂ ಎಲ್ಲಾ ಕಡೆಗಳಿಂದ ವಿದ್ಯಾಭ್ಯಾಸಕ್ಕೆ ಉದ್ಯೋಗಕ್ಕೆ ಬೆಂಗಳೂರಿನಲ್ಲಿ ಬಂದು ನೆಲೆಸಿದ್ದಾರೆ. ಇನ್ನೂ ಹೊರಗಡೆಯಿಂದ ಬರುತ್ತಿದ್ದಾರೆ. ಬೆಂಗಳೂರಿನಲ್ಲಿ ಅವರಿಗೆ ಸನ್ಮಾನ ಬೇಡವೇನು ? ಕೈಗಾರಿಕೆಗಳಾಗಲಿ, ಸರ್ಕಾರಿ ನೌಕರಿಗಳಿಗಾಗಲಿ ಬೆಂಗಳೂರಿನಲ್ಲಿ ಬಹಳ ಅವಕಾಶವಿದೆ, ಇದನ್ನು ಮರೆಯಬಾರದು. ಈ ಒಂದು ದೃಷ್ಟಿಯಿಂದ ಬೆಂಗಳೂರು ನಗರ ದಿನಂಪ್ರತಿ ಅಭಿವೃದ್ಧಿ ಹೊಂದುತ್ತಾ ಇರುವುದು ಒಂದು ಶುಭ ಸೂಚನೆ. ಇದರಿಂದ ಬೆಂಗಳೂರು ನಗರ ಆದರ ನೀರಿನ ಕುಂದು ಕೊರತೆಗಳನ್ನು ಸಹಿಸಿಕೊಂಡು ಬರಬೇಕಾಗಿದೆ. ಈ ದಿನ ಇಲ್ಲಿಯ ಜನತೆಯಲ್ಲಿ ನೀರಿನ ಒಂದು ಹಾಹಾಕಾರ ಎದ್ದಿದೆ, ಎಲ್ಲಿ ಹೋದರೂ ನೀರಿನ ಅಭಾವ, ಈ ನೀರಿನ ಅಭಾವ ತೀರಿಸುವುದಕ್ಕೆ ಬಹಳ ಕಷ್ಟವಾಗಿದೆ.

ಕಾರ್ಪೊರೇಷನ್ ಸಭೆಯಲ್ಲಿ ಅನೇಕ ಸಲ ಈ ನೀರಿನ ವಿಚಾರವಾಗಿ ತಿಕ್ಕಾಟ ನಡೆಯುತ್ತಾ ಇದೆ. ಇದನ್ನು ಬಹಳ ತೀವ್ರತೆಯಿಂದ, ಸರ್ಕಾರದವರೇ ಗಮನವನ್ನು ಸೆಳೆಯಬೇಕೆಂದು ಇಚ್ಛಿಸುತ್ತೇನೆ.

ಎರಡನೆಯದಾಗಿ ಕಳೆದ ವರ್ಷ ಬಡ್ಜೆಟ್ಟಿನ ಸಮಯದಲ್ಲಿ ನಮಗೆ ಇನ್ನೊಂದು ಆಶ್ವಾಸನ ಸರ್ಕಾರದವರು ಕೊಟ್ಟಿದ್ದರು. ಅದೇನೆಂದರೆ 1962ನೇ ಡಿಸೆಂಬರ್ ಕೊನೆಯ ಹೊತ್ತಿಗೆ ಟ್ರಿಪ್ಲಿಕೇಟ್ ಲೈನು ಮುಗಿದು ಜನವರಿ ಅಥವಾ ಫೆಬ್ರವರಿ ಹೊತ್ತಿಗೆ 16 ಮಿಲಿಯನ್ ಗ್ಯಾಲನ್ ನೀರು ಕೊಡುತ್ತಿರುವಕಡೆ 20 ಮಿಲಿಯನ್ ಗ್ಯಾಲನ್ ನೀರು ಕೊಡುವ ಭರವಸೆ ಇತ್ತು. ಟ್ರಿಪ್ಲಿಕೇಟ್ ಲೈನ್ ಹಾಕುವುದು ಇದ್ದಾಗ್ಯೂ ಕೂಡ ಇನ್ನೂ ಸ್ವಲ್ಪ ದೂರ ಹಾಕುವುದಕ್ಕೆ ಪೈಪು ಬರದೇ ಇದ್ದುದರಿಂದ ಕೆಲಸ ನಿಂತು ಹೋಗಿದೆ. ಪೈಪು ಮತ್ತು ಇದಕ್ಕೆ ಬೇಕಾದ ವಾಲ್ವುಗಳನ್ನು ತರಿಸುವುದಕ್ಕೆ ಸರ್ಕಾರ ಹಿಂದು ಮುಂದು ನೋಡುತ್ತಾ ಇದೆ ಎಂದು ಜನರಲ್ಲಿ ಬೇಸರ ವುಂಟಾಗಿದೆ. ಒಂದು ವೇಳೆ ಅದು ನಿಜವಾಗಿದ್ದರೆ ಸರ್ಕಾರದವರು ತಿವ್ರ ಗಮನಕೊಟ್ಟು ಆ ವಾಲ್ವ್‌ನ್ನು ಆದಷ್ಟು ಬೇಗ ತರಿಸಿ ಟ್ರಿಪ್ಲಿಕೇಟ್ ಲೈನ್ ಎಲ್ಲಿ ಬೈಪಾಸ್ ಮಾಡಿದ್ದಾರೆ. ಅದನ್ನು ಹೊಂದಿಸಿ ಬೆಂಗಳೂರು ನಗರದ ನೀರಿನ ಅಭಾವವನ್ನು ಕಡಿಮೆ ಮಾಡಬೇಕೆಂದು ಸರ್ಕಾರದವರ ಗಮನವನ್ನು ಸೆಳೆಯುತ್ತೇನೆ. ಇದರಂತೆಯೇ 180 ಸಿಟಿಗಳ ಪೈಕಿ 69 ಸಿಟಿ ಗಳಿಗೆ ಪರಿಶುದ್ಧವಾದ ನೀರನ್ನು ಕೊಡುವ ಯೋಚನೆ ಮಾಡಿದ್ದೀರಿ. ಅದನ್ನು ಮುಂದುವರಿಸಿಕೊಂಡು ಹೋಗಬೇಕು. ಎಲ್ಲರಿಗೂ ಕೂಡ ಶುಚಿಯಾದ ನೀರನ್ನು ಒದಗಿಸಿ ಕೊಡಬೇಕೆಂದು ಸೂಚಿಸುತ್ತೇನೆ.

ಎರಡನೆಯದಾಗಿ ನಮ್ಮ ಬೆಂಗಳೂರು ನಗರಕ್ಕೆ ಇನ್ನೊಂದು ದೊಡ್ಡ ಕೊರತೆ ಎಂದರೆ ಸರಿಯಾದ ಅಂಡರ್ ಗ್ರೌಂಡ್ ವ್ಯವಸ್ಥೆ ಇಲ್ಲ. ಈ ಸೂಯೇಜ್ ಡಿಸ್ಪೋಸಲ್ ಇಲ್ಲದೇ ಇರುವುದು, ಪ್ರಾಯಶಃ ಮೈನರ್ ಇರಿಗೇಷನ್ ಡೆಪ್ಯುಟಿ ಮಿನಿಸ್ಟರು ಮೊದಲು ಒಂದು ಕಡೆ ವಾಸವಾಗಿದ್ದರು ಈಗ ಬೇರೆಕಡೆ ಹೋಗಿದ್ದಾರೆ ಎಂದು ತಿಳಿದು ಕೊಂಡಿದ್ದೇನೆ, ಅವರು ಇದ್ದ ಮನೆಗೆ ಸ್ವಲ್ಪ ದೂರದಲ್ಲಿ ವೈತರಣಿ ನೀರು ಹರಿಯುತ್ತಾ ಇದೆ. ಸ್ವಿಮ್ಮಿಂಗ್‌ಪೂಲ್‌ನಿಂದ ಮಾಗಡೀ ರಸ್ತೆವರೆಗೂ ಜನಗಳು ಮೂಗಿನ ಮೇಲೆ ಕೈ ಇಟ್ಟುಕೊಂಡು ಓಡಾಡ ಬೇಕಾಗಿದೆ. ಸ್ವಿಮಿಂಗ್‌ಪೂಲ್ ಪೈಪ್ ಲೈನ್, ಶೇಷಾದ್ರಿಪುರಂ ಲಿಂಕ್‌ರೋಡ್, ಸೆಂಟ್ರಲ್ ಟಾಕೀಸ್ ಓಕಳೀ ಪುರ ಈ ಮಾರ್ಗದಲ್ಲಿ open drain ಇದು ಕಕ್ಕಸದ ನೀರು ನದೀ ಹರಿದಹಾಗೆ ಹರಿದರೆ ಜನ ಹೇಗೆ ವಾಸ ಮಾಡಬಹುದು ಎಂಬುದನ್ನು ನಮ್ಮ ಸ್ನೇಹಿತರು ತಿಳಿದುಕೊಂಡಿದ್ದರೆ ಪ್ರಯೋಜನವಾಗುತ್ತಿತ್ತು. ಹಳ್ಳಿಗಾಡಿನಲ್ಲಿ ಮರದ ಕೆಳಗೆ, ಗದ್ದೆಗೆ ಹೋಗಿ ಕಕ್ಕಸ ಮಾಡುತ್ತಾರೆ, ಯಾವ ತೊಂದರೆಯೂ ಆಗುವುದಿಲ್ಲ.

(ಶ್ರೀ ಕೆ. ದೇವಯ್ಯ)

ಸಿಟಿಯಲ್ಲಿ ದಿನಂಪ್ರತಿ ಬರುವ ಜನರು ರೈಲ್ವೇ ಲೈನ್ ಪಕ್ಕದಲ್ಲಿ ಕುಳಿತುಕೊಂಡು ಕಕ್ಕಸ ಮಾಡುವುದು ಅದರ ವಾಸನೆ ಆ ದೃಶ್ಯ ನೋಡುವುದಕ್ಕೆ ಕೂಡ ಕಷ್ಟವಾಗುತ್ತದೆ. ಇದು ಬೆಂಗಳೂರು ಸಿಟಿಯೋ, ಅಲ್ಲವೋ ಅಂತ ಯೋಚನೆ ಮಾಡಬೇಕಾಗಿದೆ. ಬೆಂಗಳೂರು ನಗರ ಎಂದರೆ ಕಲ್ಯಾಣ ನಗರ ಎಂದು ಹೇಳುತ್ತಾರೆ. ರೈಲಿನಲ್ಲಿ ಬರುತ್ತಾ ಇರುವಾಗ ಇಲ್ಲಿನ ದೃಶ್ಯ ನೋಡಿದರೆ ಖಂಡಿತವಾಗಿಯೂ ಜನರು ಅಸಹ್ಯ ಪಟ್ಟು ಕೊಳ್ಳುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದು ಕೊಳ್ಳಬೇಕಾದ್ದು ಅವರ ಮುಖ್ಯ ಕರ್ತವ್ಯವಾಗಿದೆ.

ಟೌನ್ ಪ್ಲಾನಿಂಗ್ ವಿಚಾರದಲ್ಲಿ ಮಾಸ್ಟರ್ ಪ್ಲಾನ್ ಅಂತ ಇದೆ. ಹುಬ್ಬಳ್ಳೀ, ಧಾರವಾಡ, ಗುಲ್ಬರ್ಗ, ಮತ್ತು ಬೆಳಗಾಂ ಸಿಟಿಗಳಿಗೂ ಮಾಸ್ಟರ್ ಪ್ಲಾನ್ ಮಾಡಬೇಕೆಂದು ಯೋಚನೆ ಮಾಡಿದ್ದೀರಿ. ಇದನ್ನು ಯಶಸ್ವಿಯಾಗಿ ಮಾಡಬೇಕಾದ್ದು ನಿಮ್ಮ ಕರ್ತವ್ಯ, ಆದರೆ ಬೆಂಗಳೂರು ಕಾರ್ಪೊರೇಷನಂಥ ದೊಡ್ಡ ನಗರದಲ್ಲಿ ಮಾಸ್ಟರ್ ಪ್ಲಾನ್ ಇಲ್ಲ ಎಂದರೆ ಅದು ನಗುಪಾಟಲು. ನಾವು ಸರ್ಕಾರದವರಲ್ಲಿ ಆಗಿಂದಾಗ್ಗೆ ಕೇಳಿಕೊಳ್ಳುತ್ತಾ ಇರುವುದು ಏನೆಂದರೆ ಬೆಂಗಳೂರು ನಗರದ ರಸ್ತೆಗಳು ಬಹಳ ಚಿಕ್ಕದಾಗಿವೆ. ಅಲ್ಲಿ ಓಡಾಡುವುದಕ್ಕೆ ಬಹಳ ಕಷ್ಟವಾಗಿದೆ. ಜನಸಂದಣಿ ಬಹಳ ಜಾಸ್ತಿ. ಆದಷ್ಟು ಮಟ್ಟಿಗೆ ಅಲೈನ್‌ಮೆಂಟ್ ಫಿಕ್ಸ್ ಮಾಡಬೇಕೆಂದು ಕಾರ್ಪೊರೇಷನಿಗೆ ಹೇಳಿದ್ದರೂ ಕೂಡ ಆ ರೀತಿ ಮಾಡದೇ ಮೆಜೆಸ್ಟಿಕ್ ಹತ್ತಿರ ಧೊಂಡೂಸಾ ರಸ್ತೆಯ ಪಕ್ಕದಲ್ಲಿ ಯಾರಿಗೆ ಮನೆ ಕಟ್ಟಲಿಕ್ಕೆ ಲೈಸನ್ಸ್ ನಿರಾಕರಿಸಿದ್ದರೋ ಅವರಿಗೇ ಲೈಸನ್ಸ್ ಕೊಟ್ಟಿದ್ದಾರೆ. ಧೊಂಡೂಸಾ ಟ್ರಸ್ಟೀಸ್ ಅವರು ಮೂರು ಮಹಡಿ ಮನೆ ಕಟ್ಟುತ್ತಾ ಇದ್ದಾರೆ. ಇದು ನಮ್ಮ ಕಾರ್ಪೊರೇಷನ್ ಅವರ ಮಾಸ್ಟರ್ ಪ್ಲಾನು. ಟ್ರಸ್ಟು ಬೋರ್ಡ್ ವಿಚಾರ ಹೇಳುವುದಾದರೆ ಈಗಿನ ಆರ್ಥಿಕ ಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಾಗ ರಾಜಾಜಿ ನಗರದಲ್ಲಿ 1961ನೇ ಇಸವಿ ಏಪ್ರಿಲ್ 31ನೇ ತಾರೀಖು ವರ್ಕ್ಸ್ ಕಾಲೋನಿ ಎಂಬುದನ್ನು open ಮಾಡಿದರು. ಅಲ್ಲಿ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 150 ಮನೆಗಳನ್ನು ಕಟ್ಟಿದ್ದಾರೆ. ನನ್ನ ಕಾನ್ಸ್‌ಟಿಟ್ಯೂಯನ್ಸಿಯಲ್ಲಿದ್ದ ಪಿಟ್ ಕಾಲೋನಿಯಲ್ಲಿ ವಾಸ ಮಾಡುತ್ತಿದ್ದ ಜನರು ಆ ಮನೆಗಳಿಗೆ ಹೋಗಿದ್ದಾರೆ. ಅಗ್ರಿಮೆಂಟ್ ಆಗಿಲ್ಲ. 3000 ದಿಂದ 5000 ದೊಳಗೆ ಮನೆಕೊಡಿ ತಿಂಗಳಿಗೆ ಇಷ್ಟಿಷ್ಟು ಕೊಡುತ್ತೇವೆ ನಮ್ಮದೇ ಮನೆ ಆಗುತ್ತದೆ ಎಂಬ ಭರವಸೆಯಿಂದ ಅವರು ಅಲ್ಲಿಗೆಹೋಗಿ ಸೇರಿದ್ದಾರೆ, ಇದುವರೆಗೂ ಒಂದು ತಿಂಗಳಿಗೆ ನೀವು ಇಷ್ಟು ಬಾಡಿಗೆ ಕೊಡಬೇಕು ಎಂಬುದನ್ನು ನಿಗದಿ ಮಾಡಿಲ್ಲ, ಒಂದೊಂದು ಮನೆಗೆ ಬೆಲೆ ಇಷ್ಟಾಗುತ್ತದೆ ಎಂಬುದು ನಿಗದಿ ಆಗಿಲ್ಲ, ಹೀಗಾದರೆ 10 ಲಕ್ಷ ರೂಪಾಯಿ ಖರ್ಚು ಮಾಡಿದಕ್ಕೆ ರಿಟರ್ನ್ ಏನು ಬಂದಹಾಗೆ ಆಯಿತು ! ಇನ್ನೊಂದು ಮಲ್ಲೇಶ್ವರಂ ರೈಲ್ವೇ ಸ್ಟೇಷನ್ ಪಕ್ಕದಲ್ಲಿ ಕಾರ್ಪೊರೇಷನವರು ಜಮೀನು ಅಕ್ವೈರ್ ಮಾಡಿಕೊಂಡು 164 ರೂಪಾಯಿ 10 ಆಣೆ 8 ಕಾಸಿನಂತೆ ಬೇರೆ ಕಡೆ ಸೈಟ್ ಮಾಡಿಕೊಟ್ಟರು. ಈ ದಿವಸ ಅವರು ಅಲ್ಲಿ ಮನೆ ಕಟ್ಟಿಕೊಂಡು ಸುಖವಾಗಿ ವಾಸಮಾಡುತ್ತಾ ಇದ್ದಾರೆ. ಓಕಳೀ ಪುರದ ಹತ್ತಿರ ಒಂದು ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಕಟ್ಟಿದ್ದಾರೆ. ಒಂದು ವರ್ಷ ಆಯಿತು ಯಾರು ಹೋಗಿ ಅಲ್ಲಿ ಇದ್ದಾರೋ ; ಏನು ಅಲ್ಲಿ ಅವ್ಯವಸ್ಥೆಯಾಗಿದೆಯೋ ಗೊತ್ತಿಲ್ಲ. ಒಂದು ರೂಮಿಗೆ 16 ರೂಪಾಯಿ ಕೊಡಬೇಕೆಂದು ಹೇಳುತ್ತಾರೆ. ಅದರ ಪಕ್ಕದಲ್ಲೇ ಇನ್ನೊಂದು ಸ್ಲಂ ಇದೆ. ಈ ರೀತಿ ಆಗ ಬಾರದು, ಇದನ್ನು ಸಂಬಂಧಪಟ್ಟವರು ಯೋಚನೆ ಮಾಡಬೇಕು. ಹೀಗೆಯೇ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು 3.9 ಕೋಟಿ ರೂಪಾಯಿ ಖರ್ಚುಮಾಡಿ 2,144 ಸೈಟುಗಳನ್ನು ವಿಲೇವಾರಿ ಮಾಡಿದ್ದಾರೆ. 8 ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ಸ್ ಹಾಕಬೇಕೆಂದು ಮಾಡಿದ್ದಾರೆ. ಖಂಡಿತವಾಗಿಯೂ ಮಾಡಲಿ. ಬೆಂಗಳೂರು ನಗರದಲ್ಲಿ ಎಷ್ಟೋ ಜನ ಸರ್ಕಾರಿ ನೌಕರರು ಇದ್ದಾರೆ. ಎಷ್ಟೋ ಜನ ಜವಾನರು ಇದ್ದಾರೆ. ಸ್ಕೂಲು ಉಪಾಧ್ಯಾಯರುಗಳು ಇದ್ದಾರೆ ಒಂದು ಕಡೆ ಟೀಚರ್ಸ್ ಕಾಲೋನಿ, ಇನ್ನೊಂದು ಕಡೆ ಜವಾನರುಗಳ ಕಾಲೋನಿ, ಮತ್ತೊಂದು ಕಡೆ ವಿಧಾನಸೌಧದಲ್ಲಿ ಕೆಲಸ ಮಾಡುವ ನೌಕರರ ಕಾಲೋನಿ ಅಂತಮಾಡಿ. ಮೊನ್ನೆದಿನ 5 ರೂಪಾಯಿ ಅಲೋಯನ್ಸು ಕೊಡುತ್ತೇವೆ ಎಂದು ಹೇಳಿದಿರಿ. ಬೆಂಗಳೂರಿನಲ್ಲಿ ಮನೆ ಬಾಡಿಗೆ ಎಷ್ಟು ಅಂತ ತಮಗೆ ಗೊತ್ತೆ ? ಕನಿಷ್ಟ ಪಕ್ಷ ಮುನ್ನೂರು ರೂಪಾಯಿ ಸಂಬಳ ಇದ್ದವರೂ ಕೂಡ ಇಲ್ಲಿ ಜೀವನ ಮಾಡುವುದು ಕಷ್ಟವಾಗಿದೆ.

ನಿಜವಾಗಿಯೂ ನಮ್ಮ ಸರ್ಕಾರ ಈ ನೌಕರರಿಗೆ, ದೇಶದ ಕೆಲಸಕಾರ್ಯಗಳನ್ನು ಮಾಡತಕ್ಕವರೆಗೆ, ಅದರಲ್ಲೂ ಈ ದೇಶಾಡಳಿತದ ಕೆಲಸ ಕಾರ್ಯಗಳನ್ನು ಮಮತೆಯಿಂದ ಮಾಡತಕ್ಕ ಮನೋಭಾವ ಅವರಲ್ಲಿ ಉಂಟಾಗುವಂತೆ ಮಾಡಬೇಕಾದರೆ ನಾವು ಅವರಿಗೆ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕು, ಅವರಲ್ಲಿ ತೃಪ್ತಿ ಉಂಟಾಗುವಂತೆ ಮಾಡಬೇಕು. ಅದಕ್ಕಾಗಿ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ ಆದರೆ ಈ ದಿವಸ ಪೋಲೀಸ್ ಕಾನ್ಸ್‌ಟೇಬಲ್‌ಗೆ ತಿಂಗಳಿಗೆ 80 ರೂಪಾಯಿ

ಗಳನ್ನು ಕೊಟ್ಟರೆ ಅವನು ಸಂಸಾರವಮಾಡುವುದು ಹೇಗೆ? ಬಡವೋಷ್ಟರುಗಳಿದ್ದಾರೆ ಅಂಥಾ ಸಾಮಾನ್ಯ ನೌಕರುಗಳಿಗೆಲ್ಲ ಸರ್ಕಾರದವರು ಹೆಚ್ಚಿನ ನಿಗಾಕೊಟ್ಟು ಅವರಿಗೆ ಸ್ಕೈಟು ಇತ್ಯಾದಿ ಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

5-30 P.M.

ಇನ್ನು ನಮಗೆ ಬಹಳ ಮುಖ್ಯವಾದ ಮತ್ತೊಂದು ವಿಚಾರ ಎಂದರೆ ಅದು ಕಮ್ಯುನಿಕೇಷನ್ ವಿಚಾರ. ಬೆಂಗಳೂರು ನಗರದಲ್ಲಿ ಈ ಹೊತ್ತು 14 ಲಕ್ಷ ಪ್ರಜಾಸಂಖ್ಯೆಇದೆ. ಒಂದು ದಿವಸ ಕಂಡಕ್ಟರುಗಳಿಗೆ ಏನೋ ಸೌಕರ್ಯ ಸರಿಯಾಗಿ ಈ ಬಸ್‌ಇಲಾಖೆಯವರು ಕೊಡಲಿಲ್ಲವೆಂದು ಒಂದು ದಿವಸ 2 ಗಂಟೆಗಳ ಕಾಲ ಬಸ್‌ಗಳು ಎಲ್ಲಿಯೂ ಓಡದೆ ಹಾಗೇ ನಿಂತುಹೋಗಿದ್ದುವು, ಈ ಬಸ್ ಸೌಕರ್ಯ ಸರಿಯಾಗಿರಬೇಕಾ ದರೆ ಡ್ರೈವರ್‌ಗಳಿಗೂ, ಕಂಡಕ್ಟರುಗಳಿಗೂ ಸರಿಯಾದ ಸಂಬಳ ಸಾರಿಗೆಗಳನ್ನು ಕೊಡಬೇಕು. ಅಲ್ಲದೆ ಬಸ್ಸಿನಲ್ಲ ಪ್ರಯಾಣಮಾಡತಕ್ಕ ಜನರು ಟಿಕೆಟ್‌ಗಳನ್ನು ಕೊಂಡುಕೊಳ್ಳಬೇಕೆಂಬ ಮನೋಭಾವ ಇರ ಬೇಕು. ಈ ಬಸ್‌ಗಳಲ್ಲಿ ಕೆಲಸಮಾಡತಕ್ಕ ಡ್ರೈವರು-ಕಂಡಕ್ಟರುಗಳು ಪ್ಯಾಸೆಂಜರುಗಳಿಗೋಸ್ಕರ ವಾಗಿರುತ್ತಾರೆಂಬ ಭಾವನೆ ನಮ್ಮ ಜನರಲ್ಲಿಲ್ಲ. ಇಲ್ಲಿಯ ಜನರು ಕಂಡಕ್ಟರ್ ಟಿಕೆಟ್ ಕೊಡಲಿಲ್ಲ ಎಂಬ ನೆಪದಲ್ಲಿ ಟಿಕೆಟ್‌ಕೊಳ್ಳದೆ ಹಾಗೇ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದ ಲುಕ್ಸಾನು ಹೆಚ್ಚಾಗುತ್ತಿದೆ. ಆದಕಾರಣ ಈಗ ಆ ಬೊಂಬಾಯಿರಾಜ್ಯದಲ್ಲಿ ಯಾರಾದರೂ ಟಿಕೆಟ್ ಇಲ್ಲದ ಪ್ರಯಾಣಿಕರು ಸಿಕ್ಕಿ ಬಿದ್ದರೆ ಅವರು ಎಲ್ಲೇ ಹತ್ತಿರಲಿ; ಆ ಬಸ್ ಎಲ್ಲಿಂದ ಹೊರಡುತ್ತದೋ ಆ ಪಾಯಿಂಟ್ ನಿಂದ ದುಡ್ಡನು ವಸೂಲ್ಮಾಡತಕ್ಕ ಕಾನೂನು ಜಾರಿಯಲ್ಲಿರುವಂತೆ ಇಲ್ಲಿಯೂ ಕಾನೂನು ಮಾಡಿದರೆ ಒಳ್ಳೆಯದು. ಹಾಗೆ ಮಾಡಿದರೆ ಇಲ್ಲಿ ಜನಗಳು ತಪ್ಪುದಾರಿಗೆ ಹೋಗಲು ಅವಕಾಶವಿರುವುದಿಲ್ಲ. ಹಾಗೆ ಒಂದು ಒಳ್ಳೆಯ ಕಾನೂನನ್ನು ಜಾರಿಗೆ ತಂದರೆ ಬಸ್ ಫೇರುಗಳನ್ನು ಮೂರು ನಯಾಪೈಸೆಯಿಂದ ಆರು ನಯಾಪೈಸೆಗೂ, ಆರನ್ನು ಹನ್ನೆರಡಕ್ಕೂ ಏರಿಸುತ್ತಾ ಹೋದರೆ ಈ ಕಷ್ಟ ಕಾಲದಲ್ಲಿ ಈ ಹೆಚ್ಚಿನ ದರ ವನ್ನು ಕೊಟ್ಟು ಪ್ರಯಾಣ ಮಾಡುವುದಕ್ಕಾಗುವುದಿಲ್ಲ.

ಹೀಗೇ ಈ ಬೆಂಗಳೂರು ನಗರದಲ್ಲಿರತಕ್ಕ ಜನರಿಗಿರತಕ್ಕ ಜನರಿಗಿರುವ ಇನ್ನೊಂದು ದೊಡ್ಡ ಅಭಾವವೇನೆಂದರೆ-ಅದು ಹಾಲು ಸರಬರಾಯಿಯ ವಿಚಾರ. ಈ ಬಗ್ಗೆ ಬೆಂಗಳೂರಿನಲ್ಲಿ ಒಂದು ದೊಡ್ಡ ಡೈರಿಫಾರಂನ್ನು ಪ್ರಾರಂಭಿಸಲಾಗುವುದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕೆ 50 ಸಾವಿರ ಟನ್ ಹಾಲನ್ನು ಸರಬರಾಯಿ ಮಾಡತಕ್ಕ ಶಕ್ತಿ ಇದೆಎಂದು ಹೇಳಿದ್ದಾರೆ. ಈ ಸರಬ ರಾಯಿ ವ್ಯವಸ್ಥೆಯನ್ನು ಇನ್ನು ಎರಡು ವರ್ಷಗಳಲ್ಲೇ ಎರಡೂವರೆ ಲಕ್ಷಕ್ಕೆ ಏರಿಸಲಾಗುತ್ತದೆಂದು ಹೇಳಿದ್ದಾರೆ. ಬಹಳ ಸಂತೋಷ. ಇದರಿಂದ ಜನರಿಗೆ ಬಹಳ ಅನುಕೂಲವಾಗುತ್ತದೆ. ನಲವತ್ತು ಮೈಲಿ ದೂರದಿಂದಲೂ ಹಾಲನ್ನು ಕಲೆಕ್ಟ್ ಮಾಡಲು ಅನುಕೂಲವಾಗುತ್ತದೆ. ಇದರಿಂದ ಹಸು ಗಳನ್ನು ಸಾಕತಕ್ಕವರಿಗೆ ಅನುಕೂಲವಾಗುತ್ತದೆ. ಸರ್ಕಾರದವರು ಈ ಯೋಜನೆಯನ್ನು ಬೇಗ ಕಾರ್ಯಗತಮಾಡಿ ಜನರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿಕೊಡುತ್ತಾರೆಂದು ನಂಬಿದ್ದೇನೆ.

ಹೀಗೆ ಆ ಕಾಂಪೋಸ್ಟ್ ಗೊಬ್ಬರವನ್ನು ಡಿಸ್‌ಪೋಸ್ ಆಫ್ ಮಾಡಲು ಮುಂದೆ ಬಂದಿದ್ದಾರೆ. ಆದರೆ ಈ ಬೆಂಗಳೂರು ನಗರಕ್ಕೆ ಇರತಕ್ಕ ಇನ್ನೊಂದು ಬಾಟಲ್‌ನೆಕ್ ಏನೆಂದರೆ-ಇದೇವಿಚಾರದಲ್ಲಿ ನಾನು ಕಳೆದ ಅಧಿವೇಶನದಲ್ಲಿ ಒಂದು ಷಾರ್ಟ್ ನೋಟೀಸ್ ಸಹ ತಂದಿದ್ದೆ. ಅದು ಶೇಷಾದ್ರಿಪುರದ ಅಂಡರ್‌ಬ್ರಿಡ್ಜಿನ ವಿಚಾರ. ಈ ಪ್ಲಾನನ್ನು ಹಿಂದೆ ಕಾರ್ಪೊರೇಷನ್ನಿನವರೂ ಮತ್ತು ಸರ್ಕಾರ ದವರೂ ಇಬ್ಬರೂ ಅಪ್ರೂವ್ ಮಾಡಿದ್ದರು. ಇವರ ಅಪ್ರೂವಲ್ ಪ್ರಕಾರ ರಸ್ತೆ ಅಗಲ ಕೇವಲ 25 ಅಡಿಗಳು ಮಾತ್ರ ಇರುತ್ತೆ. ಇದಕ್ಕೆ ಪ್ಲಾನಿಂಗ್ ಕಮಿಷನ್ನಿನ ಅಧಿಕಾರಿಗಳು ನಿಮ್ಮ ಪ್ಲಾನು ಇದು ಎಂಥ ಪ್ಲಾನು? ಹೀಗೆನೀವು ಮಾಡುತ್ತಾ ಹೋದರೆ ನಿಮ್ಮ ದೇಶ ಯಾವರೀತಿ ಉದ್ಧಾರವಾಗುತ್ತದೆ ಎಂತ ಅವರು ಕೇಳಿದರು. ನಮಗೆ ನಮ್ಮ ಜಮೀನಿನಲ್ಲಿ ಇನ್ನೂ ಎರಡಡಿ ಹೆಚ್ಚಿಗೆ ಹೋದರೂ ಪರ ವಾಗಿಲ್ಲ. ನಮ್ಮ ರಸ್ತೆಗಳು ಅಗಲವಾಗಿರಬೇಕು. ಆದರೆ ಅವರು ಈ ಲೋಕಲ್ ಬೋರ್ಡುಗಳಿಗೆ ಈ ಅಂಡರ್‌ಬ್ರಿಡ್ಜ್ ಮತ್ತು ಓವರ್‌ಬ್ರಿಡ್ಜ್‌ಗಳನ್ನು ಕಟ್ಟಿಸಲು ಶೇಕಡ ನಾಲ್ಕರಂತೆ ಬಡ್ಡಿದರದಲ್ಲಿ ಎಷ್ಟು ಹಣಬೇಕಾದರೂ ಸಾಲವಾಗಿ ಕೊಡುತ್ತೇವೆಂತ ಹೇಳಿದರು. ಆದರೆ ನಮ್ಮಲ್ಲಿ ಒಂದು ಸರಿಯಾದ ವ್ಯವಸ್ಥೆಇಲ್ಲದೆ ಐದು ಲಕ್ಷ ರೂಪಾಯಿಗಳಲ್ಲಿ ಆಗತಕ್ಕ ಕೆಲಸಕ್ಕೆ ಈಗ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾದ ಪ್ರಮೇಯ ಬಂದಿದೆ. ಅಂಥಾ ಒಂದು ಅಧ್ವಾನದ ಸೇತುವೆಯನ್ನು ಮಾಡಿ ದ್ದಾರೆ. ಈಗ ಇದನ್ನು ಬದಲಾಯಿಸ ಬೇಕಾಗಿದೆ. ಆದರೆ ನಾನು ಹೇಳಬೇಕಾದ್ದು ಇನ್ನೂ ಬಹಳ ವಾಗಿತ್ತು. ಆದರೆ ಕಾಲಾವಕಾಶವಿಲ್ಲ. ಇಷ್ಟನ್ನಾದರೂ ಹೇಳಲು ನನಗೆ ಅವಕಾಶಮಾಡಿಕೊಟ್ಟದ್ದ ಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾಡೋರ್ಗಲ್—ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ, ನಾನು ಸಭೆಯಮುಂದಿಟ್ಟಿರತಕ್ಕ 1963-64ನೇ ಸಾಲಿನ ಅಂದಾಜು ಪಟ್ಟಿಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಈ ನಮ್ಮ ಬಡ್ಜೆಟ್‌ನಲ್ಲಿ 40ಲಕ್ಷ ರೂಪಾಯಿಗಳು ಖೋತಾ ಆಗಿದೆ ಅಂತ ಹೇಳಿದ್ದರು. ಒಂದು ಸಂತೋಷದ ಸುದ್ದಿಏನೆಂದರೆ ನಮ್ಮಸರ್ಕಾರ ಯಾವ ಒಂದು ಹೊಸತೆರಿಗೆ ಯನ್ನೂ ಹಾಕದಂತೆ ಈ ಬಡ್ಜೆಟನ್ನು ಮಂಡಿಸಿರುವುದು ನಿಜವಾಗಿಯೂ ಸಂತೋಷದ ವಿಚಾರ. ಈ ಖೋತಾಬಿದ್ದಿರತಕ್ಕ ಹಣವನ್ನು ಕೇಂದ್ರದಿಂದ ಬರತಕ್ಕ ತೆರಿಗೆಹಣದಿಂದಲೂ, ಮಾರಾಟತೆರಿಗೆಮೇಲೆ ಬರತಕ್ಕ ಹಣದಿಂದಲೂ ಭರ್ತಿ ಮಾಡಿಕೊಳ್ಳಬಹುದೆಂದು ಹೇಳಲಾಗಿದೆ. ಈ ಮುಂಗಡ ಪತ್ರದಲ್ಲಿ N.G.O. ಗಳಿಗೂ ಶಾಲಾ ಶಿಕ್ಷಕರಿಗೂ ತ್ರಿವಿಧ ಸೌಲಭ್ಯಗಳನ್ನು ರೈತರಿಗೆ ಹೆಚ್ಚು ನೀರಾವರಿ ಸೌಲಭ್ಯಗಳನ್ನು ನಡೆಸಲು ಹೆಚ್ಚಿನಪ್ರಾಶಸ್ತ್ಯ ಕೊಡುವುದಾಗಿ ಹೇಳಿದ್ದಾರೆ. ಸರ್ವೀಸಿನಲ್ಲಿರತಕ್ಕವರಿಗೆ ಒಂದು ಹೆಚ್ಚಿನ ಇಂಕ್ರಿಮೆಂಟನ್ನು ಕೊಡುವುದಾಗಿ ಇದರಲ್ಲಿ ಸೂಚಿಸಿದ್ದಾರೆ. ಇದು ಒಂದು ಸಂತೋಷದ ವಿಷಯ. ಆದರೆ ಈದಿವಸ ಈತುಟ್ಟಿ ಭತ್ಯವನ್ನು ಕೊಡತಕ್ಕ ವಿಚಾರದಲ್ಲಿ ಕಡಮೆ ಸಂಬಳ ಬರತಕ್ಕವರಿಗೆ ಕಡಮೆ ತುಟ್ಟಿ ಭತ್ಯವನ್ನುಹೆಚ್ಚು ಸಂಬಳ ಬರತಕ್ಕವರಿಗೆ ಹೆಚ್ಚಿನದರದ ತುಟ್ಟಿ ಭತ್ಯವನ್ನು ಕೊಟ್ಟಿದ್ದಾರೆ. ಆದರೆ ಈ ನೀತಿಸರಿಯಾಗಿಲ್ಲ. ಇದು ತಿರುವು ಮುರುವಾಗಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಭಾವನೆ. ಆದರೆಈಗ ಸರ್ವೀಸಿನಲ್ಲಿರತಕ್ಕವರಿಗೆ ಒಂದು ಅಡ್ವಾನ್ಸ್ಇನ್‌ಕ್ರಿಮೆಂಟ್—ಕೊಡಲಾಗುತ್ತೆಂದು ಏನುಹೇಳಿದ್ದಾರೆ ಅಂಥವರಿಗೆ 1963ನೇ ಜನವರಿ ಒಂದನೇ ತಾರೀಖಿಗೆ 27ವರ್ಷ ಸರ್ವಿಸ್ ಆಗಿರಬೇಕೆಂಬ ನೇಮಕವನ್ನು ಹಾಕಿದ್ದಾರೆ. ಆದರೆ ಈ ಸೌಲಭ್ಯವು ಕೇವಲ ಯಾರು 1935ನೇ ಡಿಶಂಬರ್ 31ನೇ ತಾರೀಖಿನ ದಿನ ಸರ್ವಿಸಿಗೆ ಸೇರಿದ್ದಾರೋ ಅಂಥವರಿಗೆ ಮಾತ್ರವೇ ಸಿಗುತ್ತದೆ. ಈ ಹಿಂದೆ ಮುಂಬೈ ರಾಜ್ಯದಲ್ಲಿ ಈ ಇಸವಿಯಲ್ಲಿ ಯಾರು ಕೆಲಸಕ್ಕೆ ಸೇರಬೇಕಾಗಿದ್ದರೂ ಅವರಿಗೆ 25 ವರ್ಷಗಳ ಏಜ್‌ಲಿಮಿಟ್ಟಿತ್ತು. ಆದರೆ ಷೆಡ್ಯೂಲ್ಡ್ ಪಂಗಡದವರಿಗೆ ನೌಕರಿಗೆ ಸೇರತಕ್ಕ ಏಜ್‌ಲಿಮಿಟ್ಟು 28ವರ್ಷಗಳ ವರೆಗಿತ್ತು. ಇಂಥವರಿಗೂಕೂಡ ಈ ಹಿಂದೆ ಅಲ್ಲಿ ಮೂರುವರ್ಷ ಜಾಸ್ತಿ ಸೇರಿಸಿ ಅವರಿಗೆ ಈ ಸೌಲಭ್ಯಗಳನ್ನು ಕೊಡುತ್ತಿದ್ದರು. ಆದರೆ ಇಲ್ಲಿ ಈ ದಿವಸ ಈ ಸೌಲಭ್ಯವೇನಿದ್ದರೂ ಯಾರು 25ವರ್ಷ ಸರ್ವೀಸ್ ಮುಗಿಸಿದ್ದಾರೋ ಅಂಥವರಿಗೆ ಮಾತ್ರವೇ ಈ ಇನ್‌ಕ್ರಿಮೆಂಟಿನ ಸೌಲಭ್ಯ ಸಿಗುತ್ತದೆ. ಆದರೆ ನಮ್ಮವರಿಗೆ ಯಾರಿಗೂ ಈ ಸೌಲಭ್ಯ ಸಿಗುವುದಿಲ್ಲ. ಕಾರಣ ಇವರು ಕೆಲಸಕ್ಕೆ ಸೇರುವಾಗ ಇವರಿಗೆ ಏಜ್ ಲಿಮಿಟ್ 28ವರ್ಷಗಳೆಂದು ಇತ್ತು. 28ವರ್ಷ ವಯಸ್ಸಿನವರು ಕೆಲಸಕ್ಕೆ ಸೇರಿದ್ದರೆ ಅವರಿಗೆ 1963ಕ್ಕೂ 25ವರ್ಷ ಸರ್ವೀಸ್ ಆಗುವುದಿಲ್ಲ. ಆದ್ದರಿಂದ ಈ ಬೆನಿಫಿಟ್ ಏನಿದ್ದರೂ ಮುಂದುವರಿದ ಜನಾಂಗಕ್ಕೆಮಾತ್ರ ಸಿಗತಕ್ಕದ್ದಾಗಿದೆ. ನಮ್ಮ ಜನಾಂಗ ತಾವು 35ವರ್ಷ ಸರ್ವಿಸ್ ಸೇರಿಸಿಕೊಟ್ಟರೆ ಅನುಕೂಲಸಿಗುತ್ತದೆ. ಇಲ್ಲವೇ ಈ ಸೌಲಭ್ಯವನ್ನು 30ವರ್ಷದ ಸರ್ವಿಸ್ ಆದವರಿಗೆ ಅಥವಾ 28ನೇ ವಯಸ್ಸಿನಲ್ಲಿ ನೌಕರಿಗೆ ಸೇರಿದವರಿಗೆ ಮಾತ್ರ ದೊರೆಯುತ್ತದೆ ಎಂತ ಹೇಳಿದ್ದರೆ, ಆಗ ಅನುಕೂಲವಾಗುತ್ತಿತ್ತು. ಆದರೆ ಈ ದಿವಸ ಈ ನಿರ್ಬಂಧ ಹಾಕಿರತಕ್ಕದ್ದರಿಂದ ನಮಗೆ ಬಹಳ ಅನ್ಯಾಯವಾಗಿದೆ. ಇದರಿಂದ ಸರ್ಕಾರದವರು ಹಿಂದುಳಿದ ಜನಾಂಗಕ್ಕೇನೂ ಅನುಕೂಲ ಮಾಡಿದಂತಾಗಲಿಲ್ಲ.

Sri B. D. JATTI.—You are not in favour of giving that advantage to Government servants ?

ಶ್ರೀ ಜೆ. ಎಲ್. ಕಬಾಡಿ.—ನಾನು ಹೇಳುವುದು ಇಷ್ಟೇ. ಈಗ ಹಿಂದುಳಿದವರಿಗೆ ಸಿಕ್ಕುವದಿಲ್ಲ. ಆದುದರಿಂದ ಅವರಿಗೆ ಕೊಡುವಹಾಗೆ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ. ಒಟ್ಟು 25 ವರ್ಷ ಸರ್ವಿಸ್ ಆಗಿದ್ದರೂ ಕೂಡ ಒಂದು ಇನ್‌ಕ್ರಿಮೆಂಟ್ ಸಿಕ್ಕುವದಿಲ್ಲ. ಇದನ್ನು ಸರಕಾರ ಯೋಚನೆಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಇಂಟಿಗ್ರೇಟೆಡ್ ಏರಿಯಾದಿಂದ ಬಂದವರು ಹೊಸಸ್ಕೇಲಿಗೆ ಆಪ್ಟ ಆಗದೇ ಇದ್ದರೆ ಇನ್‌ಕ್ರಿಮೆಂಟ್ ಸಿಕ್ಕುವದಿಲ್ಲ. ಈ ಬಗ್ಗೆ ರಿಪ್ರೆಜೆಂಟೇಷನ್ ಮಾಡಿದ್ದರೆ ಯೋಚನೆ ಮಾಡಲಾಗುವುದು. ಇದರಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್, ಷೆಡ್ಯೂಲ್ಡ್‌ಕ್ಲಾಸ್ ಎಂಬುದು ಬರುವದಿಲ್ಲ, ಮಾನ್ಯ ಸದಸ್ಯರು ತಪ್ಪುಕಲ್ಪನೆ ಮಾಡಿಕೊಂಡ ಹಾಗೆ ಇದೆ.

ಶ್ರೀ ಜೆ. ಎಲ್. ಕಬಾಡಿ.—ಯಾವಾಗ ಸರ್ವಿಸ್ ಸೇರಲು 25ವರ್ಷ ವಯೋಮಿತಿ ಇದ್ದಿತೋ ಅದನ್ನು 28 ವರ್ಷದವರೆಗೆ ಹಿಂದುಳಿದವರಿಗೆ ಅನುಕೂಲಮಾಡಿದ್ದಾಗ ಈ ಪ್ರಶ್ನೆಯನ್ನು ಯೋಚನೆ ಮಾಡಬೇಕಾಗಿದೆ.

ಇನ್ನು ಕನ್‌ಸಾಲಿಡೇಷನ್ ಸ್ಕೀಂ ಏನು ಇದೆಯೋ ಅದನ್ನು ಈ ತುರ್ತು ಪರಿಸ್ಥಿತಿಯಲ್ಲಿ ಕಡಿಮೆ ಮಾಡಲಾಗಿದೆ. ಕೇಂದ್ರ ಸರಕಾರದಿಂದ ಬರತಕ್ಕ ಹಣ ಕಡಿಮೆಯಾಗಿ ನಮ್ಮ ವಿಜಾಪುರ ಜಿಲ್ಲೆಯ

ಇಂಡಿ, ಬಾಗೇವಾಡಿ, ತಾಲ್ಲೂಕುಗಳಲ್ಲಿ ಎಷ್ಟು ಕೆಲಸವಾಗಬೇಕೋ ಅಷ್ಟು ಕೆಲಸವಾಗಿಲ್ಲ. ಈ ಯೋಜನೆ ಯಶಸ್ವಿಯಾಗುವದಕ್ಕೆ ಪ್ರಯತ್ನ ಮಾಡುವುದು ಅಗತ್ಯ. ಯಾಕೆಂದರೆ ಈ ಯೋಜನೆಯಿಂದ ದೇಶದಲ್ಲಿ ಉತ್ಪತ್ತಿ ಹೆಚ್ಚಾಗುತ್ತದೆ. ಕೇಂದ್ರ ಸರಕಾರದಿಂದ ಹೆಚ್ಚು ಹಣ ಪಡೆಯಲು ಪ್ರಯತ್ನ ಮಾಡಬೇಕು. ಈ ಯೋಜನೆಯಲ್ಲಿ ಕೆಲಸಮಾಡುವ 150ಜನರಲ್ಲಿ 110ಜನರನ್ನು ಮನೆಗೆ ಕಳಿಸಿದ್ದಾರೆ. ಈ ಜನರಿಗೆ ಏನು ಅನ್ಯಾಯವಾಗಿದೆ ಅದನ್ನು ವಿಚಾರ ಮಾಡಬೇಕು.

ಇನ್ನು Town Planning. ಈ ಟೌನ್ ಪ್ಲಾನಿಂಗ್ ಬಗ್ಗೆ ಈಗ್ಗತಾನೆ ಮಾತನಾಡಿದ ಶ್ರೀ ದೇವಯ್ಯನವರು ವಿವರವಾಗಿ ಹೇಳಿದರು. ಬೆಂಗಳೂರು ಸಿಟಿ ಕಾರ್ಪೋರೇಷನ್ ಇದೆ. ಹುಬ್ಬಳ್ಳಿ ಧಾರವಾಡ ಕಾರ್ಪೋರೇಷನ್ ಆಗಿದೆ. ಈ ನಿಯಮಗಳನ್ನು ಎಲ್ಲಕಡೆ ಅನ್ವಯಿಸಲಾಗುವುದು ಮತ್ತು ಹಣ ಒದಗಿಸುತ್ತೇವೆಂದು ಹೇಳಿದರು. Putting the cart before the horse ಎನ್ನುವ ಹಾಗೆ ಇದು ಆಗುತ್ತದೆ. ಯಾಕಂದರೆ ಯಾವದೇ ಟೌನ್ ಪ್ಲಾನಿಂಗ್ ಸ್ಕೀಂ ಪ್ರಾರಂಭಿಸುವುದಕ್ಕೆ ಮೊದಲು ಸರ್ವೆ ಕೆಲಸವಾಗಬೇಕು. ಸರ್ವೆಯಾಗದೆ ಟೌನ್ ಪ್ಲಾನಿಂಗ್ ಹೇಗೆ ಮಾಡುತ್ತೀರಿ ? ಆದ್ದರಿಂದ ಸರ್ವೆ ಮೊದಲು ಮಾಡಿಸಬೇಕು. ಆ ಮೇಲೆ ಇದನ್ನು ಜಾರಿಗೆ ತರಬೇಕು. ಆದ್ದರಿಂದ ಇದಕ್ಕಾಗಿ ಹಣ ಒದಗಿಸಿರುವುದು ಸರಿಯೆಂದು ಕಾಣುವದಿಲ್ಲ.

ಇನ್ನು ಇರಿಗೇಷನ್ ವಿಚಾರ, ಮೈಸೂರು ರಾಜ್ಯದಲ್ಲಿ ಬೆಟರ್‌ಮೆಂಟ್ ಲೆವಿ ಆಕ್ಟ್‌ಪ್ರಕಾರ water rate 1-9-1960ರಿಂದ ಜಾರಿಗೆ ಬಂದಿದೆ. ಆದರೆ ಅದು ಇಂಪ್ಲಮೆಂಟ್ ಆಗಿಲ್ಲ ಇನ್ನೂ ರೂಲ್ಸ್ ಫ್ರೇಮ್ ಆಗಿಲ್ಲ. ಹಳೇ ಮೈಸೂರು ಪ್ರದೇಶದಲ್ಲಿ ಲಕ್ಷಾಂತರ ರೂಪಾಯಿ ಬಾಕಿ ಉಳಿದಿದೆ. ಇದರಿಂದ ಎಷ್ಟು ಅನ್ಯಾಯವಾಗುತ್ತಿದೆ ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು.

ಇನ್ನು ಎಲೆಕ್ಟ್ರಿಸಿಟಿ ಪವರ್ ಸಪ್ಲೈ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ವಿಜಾಪುರ ಜಿಲ್ಲೆಯಲ್ಲಿ ಪವರ್ ಸಪ್ಲೈ ಸರಿಯಾಗಿಲ್ಲ. ಎಲೆಕ್ಟ್ರಿಸಿಟಿ ಇದ್ದರೂ ಸಹ ಚಿಮಣಿ ಲಾಟಿನ್ ಇಟ್ಟುಕೊಂಡು ಕೆಲಸಮಾಡುವ ಪರಿಸ್ಥಿತಿ ಬಂದಿದೆ. ಅನೇಕ ಕಡೆ ವಿದ್ಯುತ್‌ಶಕ್ತಿ ಅಭಾವದಿಂದ ಯಂತ್ರಗಳು ಫಿಟಿಂಗ್ ಆಗಿಲ್ಲ. ಮೆಷಿನರಿ ಬಂದು ಒಂದು ವರ್ಷವಾಗಿದ್ದರೂ ಕೂಡ ಇನ್ನು ಫಿಟಿಂಗ್ ಆಗಿಲ್ಲ. ಈ ಕೆಲಸ ಬಹಳ ನಿಧಾನವಾಗಿದೆ. ಇದರಿಂದ ಜನರಿಗೆ ತೊಂದರೆಯಾಗಿ ಅನ್ಯಾಯವಾಗುತ್ತಿದೆ.

ನಮ್ಮ ಮೈಸೂರು ರಾಜ್ಯದಲ್ಲಿ 82 ತಾಲ್ಲೂಕುಗಳಲ್ಲಿ ಕೆಲಸಮಾಡಬೇಕಾಗಿದೆ. 53ತಾಲ್ಲೂಕುಗಳಲ್ಲಿ ಕೆಲಸವಾಗಿದೆ. 29ತಾಲ್ಲೂಕುಗಳಲ್ಲಿ ಕೆಲಸವಾಗಬೇಕಾಗಿದೆ. ಅದರಲ್ಲಿ 1-ತಾಲ್ಲೂಕುಗಳಲ್ಲಿ ಕೆಲಸ ಪ್ರಗತಿಪರವಾಗಿ ನಡೆದಿದೆ. ಹಿಂದಕ್ಕೆ ಶ್ರೀ ಎಂ. ಪಿ. ಪಾಟೀಲರು ಕಂದಾಯ ಮಂತ್ರಿಗಳಾಗಿದ್ದಾಗ್ಗೆ ಈ ಕೆಲಸವನ್ನು ಮೂರುವರ್ಷಗಳಲ್ಲಿ ಮುಗಿಸುತ್ತೇವೆಂದು ಹೇಳಿದ್ದರು. ಈಗ ಅದಕ್ಕಾಗಿ 500 ಸರ್ವೇಯರ್ಸ್ ನೇಮಿಸಿದ್ದಾರೆ. ಸರ್ವೆಯರ್ಸ್ ನೇಮಕ ಮಾಡಿದರೆ ಕೆಲಸ ಮುಗಿಯುತ್ತದೆಯೆ ? ಈ ಕೆಲಸವನ್ನು ಸರ್ವೆ ಡಿಪಾರ್ಟಮೆಂಟಿಗೆ ಒಪ್ಪಿಸಿದ್ದಾರೆ.

ಇನ್ನೂ ನಮ್ಮ ಬಿಜಾಪುರ ಇಂಡಿ ತಾಲ್ಲೂಕದೊಳಗೆ Consolidation and Fragmentation of Small Holdings Scheme ಎಂದು ಇದೆ. 9000 ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿಯೂ ನೀರಿನ ಕೊರತೆ ಇದೆ. ಇಲ್ಲಿ ನೀರನ್ನು ಕಲ್ಲಿನಿಂದ ಕೆರೆದು ಹೋಗುವಂತೆ ಮಾಡುವುದು ಅಸಾಧ್ಯ. ಇದನ್ನು ನಾವು ಚೀಫ್ ಮಿನಿಸ್ಟರವರು ಈ ಊರಿಗೆ ಬಂದಿದ್ದಾಗ್ಗೆ ಗಮನಕ್ಕೆ ತಂದಿದ್ದೆವು. ಅವರು ಇದರ ಬಗ್ಗೆ ಪ್ರೊವೈಡುಮಾಡುತ್ತೇವೆಂದು ಹೇಳಿದರೂ ಸಹ ಇಲ್ಲಿಯವರೆಗೂ ಏನೂ ಆಗಿಲ್ಲ 1962-63 ನೇ ಸಾಲಿಗಾಗಿ ಹತ್ತುಸಾವಿರದಷ್ಟು ಬಡ್ಜೆಟ್ಟು ಪ್ರಾವಿಜನ್ನು ಮಾಡಿದ್ದರೂ ತ್ವರಿತದಿಂದ ಕೆಲಸ ನಡೆಯುತ್ತಿಲ್ಲ.

ಇನ್ನು ಕೆರೆಗಳ ಸಲುವಾಗಿ ಹೇಳುವುದಾದರೆ, ನಮ್ಮಲ್ಲಿ ಆಗಬೇಕಾದ ಕೆರೆಗಳು ಬಹಳ ಅವೆ. ಕೃಷ್ಣಾ ಪ್ರಾಜೆಕ್ಟು ಬರತಕ್ಕ ಏರಿಯಾ ಬಿಟ್ಟು ಇನ್ನು ಕೆಲವು ಕೆರೆಗಳು ಅಪ್ಪರ್ ಲೆವಲ್ಲಿನಲ್ಲಿವೆ, ಇನ್ನು ಕೆಲವು ಲೋಯರು ಲೆವೆಲ್ಲಿನಲ್ಲೂ ಬರುತ್ತವೆ. ಇದನ್ನು ಈಚೆಗೆ ನಮ್ಮ ಮಾನ್ಯ ಚೀಫ್‌ಮಿನಿಸ್ಟರವರ ಗಮನಕ್ಕೂ ತಂದು ಲೋಯರು ಟ್ಯಾಂಕಿನ ಬಗ್ಗೆ ಎಷ್ಟು ನೀರು ಎಷ್ಟು ಎಕರೆ ಭೂಮಿಗೆ ಬರುತ್ತದೆ ಎನ್ನುವುದನ್ನೆಲ್ಲಾ ವಿಶದಪಡಿಸಿದ್ದೇವೆ. ಕೊಟ್ನಾಳ ಕೆರೆಗೆ ಎಸ್ಟಿಮೇಟು ಆಗಿದ್ದದ್ದು 5,56,000 ರೂಪಾಯಿಗಳು. Area to be irrigated 670 ಎಕರೆಗಳು. ಇದಕ್ಕೆ ಕಾಂಪೆನ್‌ಸೇಷನ್ನು ಕೊಡಬೇಕಾದದು ಎಷ್ಟೆಂದರೆ 69,000 ಇದು ಕೆಳಗಿನದು. ಮೇಲಿನ ಕೆರೆಯಲ್ಲಿ 1.100 ಎಕರೆಗಳಷ್ಟು ಭೂಮಿಗಾಗಿ ತೊಂದರೆಯಾಗುತ್ತೆ ಎನ್ನುತ್ತಾರೆ. 670ಎಕರೆಗಳಷ್ಟು ಭೂಮಿಗಾಗಿ ಖರ್ಚು 5,50,000 ರೂಪಾಯಿಗಳಷ್ಟು ಬರುತ್ತದೆ. ಇದನ್ನು ಮಾಡುವುದಕ್ಕೆ ಬದಲು 7,70,000 ರೂ. ಗಳಷ್ಟು ಖರ್ಚುಮಾಡಿ 1,100 ಎಕರೆಗಳಷ್ಟು ಭೂಮಿಗೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಈಗ ತಡೆಹಿಡಿಯಲಾಗಿದೆ. ಇದರಿಂದ ನ್ಯಾಯ ತೋರಿದಂತೆ ಆಗಲಿಲ್ಲ. ಹಂಚಿನಾಳದ ಹತ್ತಿರ ಇರುವ ಕಂದನಾಳ ಕೆರೆಯಿಂದ ಸುಮಾರು ಹತ್ತು ಲಕ್ಷ ಎಕರೆ ಭೂಮಿಗೆ ಉಪಯೋಗವಾಗುವ ಈ ಇರಿಗೇಷನ್ನು ಟ್ಯಾಂಕನ್ನು ಮಾಡಬೇಕೆಂದು ಮತ್ತು ತ್ವರಿತದಿಂದ ತೆಗೆದುಕೊಳ್ಳ

(ಶ್ರೀ ಜೆ. ಎಲ್. ಕಬಾಡಿ)

ಬೇಕೆಂದು ಮಾನ್ಯ ಚೀಫ್ ಮಿನಿಸ್ಟರನ್ನು ಹಾಗೂ ಸಣ್ಣ ನೀರಾವರಿ ಶಾಖೆಯ ಉಪಮಂತ್ರಿಗಳಲ್ಲಿಯೂ ವಿನಂತಿಸಿಕೊಂಡಿದ್ದರೂ, ಇದಕ್ಕೆ ಈಸಾರಿ ಬಡ್ಜೆಟ್ಟಿನಲ್ಲಿ ಏನನ್ನು ಪ್ರೊವೈಡುಮಾಡಿಲ್ಲ. ಇದರಿಂದ ನನಗೆ ತುಂಬಾ ವಿಷಾದವಾಗುತ್ತಿದೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಬಿ. ಎಲ್. ಗೌಡರು ಮಾತನಾಡುತ್ತ ಈ ದೇಶಕ್ಕೆ ಮುಂಬಯಿ ಕರ್ನಾಟಕದ ಭಾಗದವರು ಈ ಮೈಸೂರು ರಾಜ್ಯಕ್ಕೆ ಬಂದುದರಿಂದ ಅನೇಕರಿಗೆ ನಿಜವಾಗಿಯೂ ಅನ್ಯಾಯವಾಗಿದೆ ಎಂದು ಹೇಳಿದರು. ಇದು ತೀರಾತಪ್ಪು ಎನ್ನುವುದನ್ನು ನಾನು ಮತ್ತು ಇನ್ನೂ ಕೆಲವು ಜನ ಮಾನ್ಯ ಸದಸ್ಯರುಗಳು ಒಂದು ಮೆಮೊರಾಂಡಂನ್ನು ತಯಾರಿಸಿ ಚೀಫ್ ಮಿನಿಸ್ಟರವರ ಕಡೆಗೆ ಒಂದು ಷಾರ್ಟ್ ನೋಟಿನಂತೆ ಕಳುಹಿಸಿದ್ದೇವೆ. ಅದನ್ನು ಮಾನ್ಯ ಅಧ್ಯಕ್ಷರ ಅಪ್ಪಣೆತೆಗೆದು ಕೊಂಡು ಇಲ್ಲಿ ಓದುತ್ತೇನೆ.

Mr. SPEAKER.—Give the substance ; that will do. Members are all very intelligent.

ಶ್ರೀ ಜೆ. ಎಲ್. ಕಬಾಡಿ.—ಈ ಷಾರ್ಟ್ ನೋಟಿನಲ್ಲಿ ನಾನ್‌ಗೆಜೆಟೆಡ್ ಆಫೀಸರಾಗಿರುವವರನ್ನು ಗೆಜೆಟೆಡ್ ಆಫೀಸರಾಗಿ ಬಡತಿಕೊಟ್ಟಿರುವುದರ ಬಗೆಗೆ ಯಾವರೀತಿ ಇರಬೇಕು ಎನ್ನುವುದರ ವಿವರಗಳನ್ನು ವಿವರಿಸಿ ಮೂವತ್ತು ಜನ ಎಂ. ಎಲ್. ಎ. ಗಳ ರುಜು ಪಡೆದು ಮುಖ್ಯಮಂತ್ರಿಗಳಿಗೆ ಹಾಗೂ ವ್ಯವಸಾಯಖಾತೆ ಮಂತ್ರಿಗಳಿಗೂ ಕಳುಹಿಸಿಕೊಡಲಾಗಿದೆ. ಇದು ಅಗ್ರಿಕಲ್‌ಚರ್ ಇಲಾಖೆಗೆ ಸಂಬಂಧಪಟ್ಟ ವರದಿ ಈ ಡಿಪಾರ್ಟ್‌ಮೆಂಟಿನಲ್ಲಿ ಯಾರಿಗೂ ಅನ್ಯಾಯವಾಗದಂತೆ, ಡೈರೆಕ್ಟರುಗಳು, ಸೆಕ್ರೆಟರಿಗಳು ಮತ್ತು ಇದರ ಸಂಬಂಧಪಟ್ಟ ಆಫೀಸರುಗಳು ಕೂಡಿಕೊಂಡು ನ್ಯಾಯವಾದ ತೀರ್ಮಾನ ಕೈಗೊಳ್ಳಬೇಕೆಂದು ಮಾಡಿ ಅದರಂತೆ ಸೆಂಟ್ರಲ್ ಗವರ್ನ್‌ಮೆಂಟಿನವರನ್ನು ಒಪ್ಪಿಸುವುದು ಕಷ್ಟವೇನೂ ಆಗಲಾರದು. ಆದರೆ ಶ್ರೀಮಾನ್ ಬಿ. ಎಲ್. ಗೌಡರು ಸುಮ್ಮ ಸುಮ್ಮನೆ ಹೇಳುತ್ತಿದ್ದಾರೆ. ಇದರಲ್ಲಿ ಯಾರಿಗೆ ನ್ಯಾಯವಾಗಿರುವಂತೆ ಇದೆಯೋ ಅವರಿಗೆ ಕೊಡಬೇಕು. ಅಲ್ಲದೆ ಹಳೆಯ ಮೈಸೂರು ಮತ್ತು ಹೊಸಮೈಸೂರು ಎನ್ನುವ ಭೇದಭಾವವನ್ನು ಇಲ್ಲಿ ತಂದು ಹೇಳುವುದು ಉಚಿತವಲ್ಲ. ಬೊಂಬಾಯಿಕರ್ಣಾಟಕದವರನ್ನು ತಂದು ನಮ್ಮಮೇಲೆ ಹಾಕಿದ್ದಾರೆಂದು ಆಭಾವನೆಯನ್ನು ತಾರದೆ ಎಲ್ಲರಿಗೂ ಅನುಕೂಲವಾಗುವಂತೆ ಹೇಳಿದರೆ ಈ ದೇಶಕ್ಕೆ ಕಲ್ಯಾಣವಾದೀತು. I will give one instance in every department. ಯಾವುದೋ ಒಂದು ಕಾಲೇಜಿನಲ್ಲಿ ಒಬ್ಬರು ನಾನ್ ಗೆಜೆಟೆಡ್ ಅಧಿಕಾರಿಗಳನ್ನು ಗೆಜೆಟೆಡ್ ಅಧಿಕಾರಿಗಳಾಗಿ ಪ್ರಮೋಷನ್ನು ಕೊಟ್ಟಿದ್ದಾರೆ. ಅಗ್ರಿಕಲ್‌ಚರು ಇಲಾಖೆಗೆ ಸಂಬಂಧಿಸಿದಂತೆ ಒಂದು ಉದಾಹರಣೆ ಕೊಡುತ್ತೇನೆ. ಅನೇಕ ಜೂನಿಯರ್‌ಗೆ ನಾನ್ ಗೆಜೆಟೆಡ್ ಅಧಿಕಾರಿಗಳನ್ನು ಗೆಜೆಟೆಡ್ ಅಧಿಕಾರಿಗಳಾಗಿ ಪ್ರಮೋಷನನ್ನು ಕೊಟ್ಟಿರುವುದು in accordance with the principles ನ್ಯಾಯವೇ ಎಂದು ಕೇಳಬೇಕಾಗಿದೆ. ಇದರಲ್ಲಿ ಯಾವ ವ್ಯಕ್ತಿಯ ಹೆಸರನ್ನೂ ತೆಗೆದುಕೊಂಡು ಹೇಳುವುದು ಉಚಿತವಲ್ಲ. ಹಾಗೂ ಹೇಳಬಾರದು ಎಂದು ಅದನ್ನು ಇಲ್ಲಿ ನಾನು ತೆಗೆದುಕೊಳ್ಳಲಿಲ್ಲ. ನಾನು ವಿನಂತಿ ಮಾಡಿಕೊಳ್ಳುವುದು ಸರಕಾರಕ್ಕೆ ಇಷ್ಟೇ ಯಾವುದಾದರೂ ಅನ್ಯಾಯವಾಗಿದ್ದರೆ, ಹಳೆಯ ಮೈಸೂರಿನವರಿಗಾಗಲೀ, ಹೊಸ ಮೈಸೂರಿನವರಿಗಾಗಲೀ, ಸರಿಯಾದ ಯೋಗ್ಯವಾದಂತಹ ನ್ಯಾಯವನ್ನು ದೊರಕಿಸಿ ಕೊಡಲು ಸರಕಾರದವರು ಆಲೋಚನೆ ಮಾಡಬೇಕೆಂದು ನಾನು ಇಲ್ಲ ವಿನಂತಿ ಮಾಡಿಕೊಳ್ಳುತ್ತೇನೆ. ೧೯೫೬ ನೇ ಇಸವಿಯಿಂದ ಇಂಟೆಗ್ರೇಟು ಆದ ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನ ಕೆಲವು ಕೇಡರುಗಳ ಪಟ್ಟಿಯನ್ನು ಪ್ರಕಟಿಸಿದ್ದಾರೆ ಇದರಲ್ಲಿರುವಂತೆ.

Class I Cadre ನಲ್ಲಿ 600–1000 ಒಂದು ಗ್ರೇಡಿನಲ್ಲಿ three ಸ್ಕೇಲ್ಸ ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ Class I Cadre ಎಂದಿರುವುದು.

600—1000 ಒಂದು ಗ್ರೇಡ್
350—1100 ಒಂದು ,,
400— 900 ಒಂದು ,,
350— 800 ಒಂದು ,,

ಏಕೆ ಹೀಗೆ ಈಗ ಈ class I ಗ್ರೇಡಿನಲ್ಲಿ ಕೊಟ್ಟಿದ್ದಾರೆ ಎನ್ನುವ ಪಟ್ಟಿಯನ್ನು ವಿಚಾರ ಮಾಡೋಣ. ಈಗ ಇಲ್ಲಿ ಕೊಟ್ಟಿರುವುದು 600-1000 ಗ್ರೇಡಿಗೆ ಒಂದು ಭಾಗ 350-1100 ರವರೆಗೆ ಕೊಟ್ಟಿರುವುದು ಮೂರು ಬಾಗಗಳು ಇದರಲ್ಲಿ old Mysoreನ ಭಾಗಕ್ಕೆ ಸೇರಿದವರಿಗೆ ಮಾತ್ರ 600-1000 ಇರುವ ಭಾಗ ಇತರ ಭಾಗದಿಂದ ಬಂದಿರುವವರಿಗೆ 350-1100 ರಷ್ಟು ಬಾಗ ಎಂದು

ಹೇಳಿದ್ದರಿಂದ ಇದನ್ನು ಒಪ್ಪಿಕೊಳ್ಳದೆ ತೊಂದರೆಯಾಗಿದೆ ಅಲ್ಲದೆ ಇವೆಲ್ಲವನ್ನು ಪೂರ್ತಿಯಾಗಿ ಅಲ್ಲಿಯ ಇಲಾಖೆಯವರಿಗೆ ಬಿಟ್ಟುಬಿಟ್ಟಿದ್ದರೆ ಆವರೇ ಸೇರಿಕೊಂಡು ಒಂದು ನಿರ್ಧಾರಕ್ಕೆ ಬಂದು ಒಪ್ಪಿಕೊಳ್ಳುತ್ತಿದ್ದರು. ಹಾಗೆ ಮಾಡಿದರೆ, ಹಳೆಯ ಮೈಸೂರಿನ ಭಾಗಕ್ಕೆ 600-1000ದ ಗ್ರೇಡ್ ಇತರ ಭಾಗದಿಂದ ಬಂದವರಿಗೆ 350-1100ರ ಗ್ರೇಡ್ ಎಂದು ಬೇರೆ ಬೇರೆಯಾಗಿ ಈ lass I ಗ್ರೇಡಿರುವುದರಿಂದ, ಇವೆಲ್ಲವನ್ನೂ ಸರಿಪಡಿಸುವುದು ಯೋಗ್ಯವೆಂದು ತೋರುತ್ತೆ. ಆ ರೀತಿಯಾದ ಪಟ್ಟಿಯನ್ನು ಇಲ್ಲಿ ಮಾಡಿಯೇ ಇಲ್ಲ.

Sri B. D. JATTI.—Sir, this controversy is unnecessary because the procedure has been laid down in the S.R. Act and the Government of India is the final authority. Before the Central Government takes a final decision, they will take the opinion of the Appellate Advisory Committee and after taking the opinion of the Appellate Advisory Committee, the lists are published in the Gazette and all the Government servants will have an occasion to give their representations with regard to their grievances, if any. So, I request the Hon'ble Member not to enter into controversy, because the final authority is not the State Government, but it is the Government of India.

ಶ್ರೀ ಜೆ. ಎಲ್. ಕಬಾಡಿ.—ನಾನು ಪರ್ಸನಲ್ ಆಗಿ ಕೇಳುತ್ತಿಲ್ಲ. ಪ್ರಮೋಷನ್ನು ಕೊಟ್ಟಿದ್ದಾರೆ ಇವೊತ್ತು ಸರಿಪಡಿಸಲು ಹೈಕೋರ್ಟಿದೆ.

ಶ್ರೀ ಎಸ್. ಗೋಪಾಲ ಗೌಡ.—ಎಸ್. ಆರ್. ಸಿ. ಆಕ್ಟಿನಲ್ಲಿ ಒಂದು ನಿಯಮವಿದೆ. ಸಂಬಳವನ್ನು ಕ್ರೈಟೀರಿಯಾ ಆಗಿ ತೆಗೆದುಕೊಂಡಿದ್ದೀರಾ ಅಥವಾ ಆತನ ಶಕ್ತಿಯನ್ನು ತೆಗೆದುಕೊಂಡಿದ್ದೀರಾ ಅಥವಾ ಆತನ ಸರ್ವಿಸ್ಸನ್ನು ಗಣನೆಗೆ ತೆಗೆದುಕೊಂಡು ಮಾಡಿದ್ದೀರಾ ಎನ್ನುವುದು ಇಲ್ಲಿರುವ ಪ್ರಶ್ನೆ, ಇದರ ಬಗ್ಗೆ ಕೇಂದ್ರಸರಕಾರದ ತೀರ್ಮಾನವೇ ಕೊನೆಯದು ಎಂದಿದ್ದರೂ ನಮ್ಮ ಸರಕಾರದವರು ಈ ಕ್ಲೇಟ್ ಮಾಡುವಾಗ ಏನು ನಿಯಮಕ್ಕೆ ಬಂದರು ಎನ್ನುವುದನ್ನು ಹೇಳಿದ್ದರೆ ಇಲ್ಲಿ ಈ ರೀತಿ ಕಾಂಟ್ರೊವರ್ಸಿ ಬರುತ್ತಿರಲಿಲ್ಲ.

ಶ್ರೀ ಬಿ. ಡಿ. ಜತ್ತಿ.—ಆ ನಿಯಮದಲ್ಲಿ ಮೂರು ನಾಲ್ಕು ತತ್ವಗಳಿವೆ. ಒಂದು ಕ್ವಾಲಫಿಕೇಷನ್ನು, ಒಂದು ಯಾವ ದಿವಸದಿಂದ ಆ ಗ್ರೇಡಿನಲ್ಲಿ ಕೆಲಸ ಮಾಡುತ್ತಾರೆ, ಇನ್ನೊಂದು ಸಂಬಳ ಮತ್ತೆ ಇನ್ನೂ ಅವನ ಬಗ್ಗೆ ಇರುವ opinion and merits ಗಳನ್ನುಕೂಡ ನೋಡಬೇಕೆಂದು ಈಚೆಗೆ ಹೈಕೋರ್ಟಿನ ಒಂದು ಡಿಸಿಷನ್ನೂ ಕೂಡ ಬಂದಿದೆ. ಅದರೊಳಗೂ ಕೂಡ ಇವೆಲ್ಲ clear ಆಗಿ ಇಂತಹ ಪ್ರಿನ್‌ಸಿಪಲ್ಸ್‌ಗಳನ್ನು ಅನುಸರಿಸಬೇಕೆಂದಿದೆ.

6-00 P.M.

ಶ್ರೀ ಜೆ. ಎಲ್. ಕಬಾಡಿ.—ತಾವು ಹೇಳುವಂತೆ ಸರಿಯಾದ ಪ್ರಿನ್ಸಿಪಲ್‌ಗಳಿವೆ. ಆದನ್ನೆಲ್ಲ ಸರಿಯಾಗಿ ಪರಿಶೀಲನೆಮಾಡಿ ಎಲ್ಲರಿಗೂ ಅನುಕೂಲವಾದ ನ್ಯಾಯ ದೊರೆಯಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ. ಈಗಲಾದರೂ ಕೂಡ ತೀವ್ರ ಗಮನಕೊಟ್ಟು ಇದನ್ನು ಇತ್ಯರ್ಥ ಮಾಡಬೇಕೆಂದು ನನಗೆ ಅನ್ನಿಸುತ್ತದೆ.

ಇನ್ನು ಟ್ರಾನ್ಸ್ ಪೋರ್ಟ್ ಇಲಾಖೆಯ ವಿಷಯ ಎರಡು ಮಾತು ಹೇಳಲು ಇಚ್ಛಿಸುತ್ತೇನೆ. ಕೆಲವರನ್ನು ರೈಟರ್ ಎಂದು ನೇಮಕ ಮಾಡಿಕೊಂಡು ಒಂದೆರಡು ವರ್ಷಕೆಲಸವಾಡಿದ ಮೇಲೆ ಅಂಥವರನ್ನು ಮನೆಗೆ ಕಳುಹಿಸಿದ್ದಾರೆ. ಇದಲ್ಲದೆ ಕಂಡಕ್ಟರುಗಳ ಹಣವನ್ನೂಲ್ಯಾಮಾಡುವವರಲ್ಲಿ ಮೋಸವಾಗ ಬಾರದು ಎಂದು ಪಂಚ್ ಮಾಡುವ ಪದ್ಧತಿಯನ್ನು ಜಾರಿಗೆತರಲು ತಿಳಿಸಿದ್ದಾಗ ೧-೨ – ೬೩ರಂದು ಬಿ. ಟಿ. ಎಸ್. ನವರು ಎರಡು ಗಂಟೆ ಕಾಲ ಟೂಲ್ಸ್ ಡೌನಮಾಡಿ ಬಸುಗಳು ಓಡಾಡುವುದು ನಿಲ್ಲುವಂತಾಯಿತು. ಈಗ ಪುನಃ ಮೊದಲು ಇರುವ ಹಾಗೆ ಟಿಕೇಟ್ ಹರಿಯುವವನ್ನು ಒಪ್ಪಿಕೊಂಡಮೇಲೆ ಕೆಲಸಗಾರರು ಕೆಲಸಕ್ಕೆ ಹೋದರು, ಪಂಚ ಮಾಡುವ ಪದ್ಧತಿ ಬೇಡ ಎಂದು ಪ್ರತಿ

(ಶ್ರೀ ಜೆ. ಎಲ್. ಕಬಾಡಿ)

ಭಟಿಸಿದರು, ಇದು ಯಾವ ನ್ಯಾಯ. ಇದಕ್ಕೆ ಕಾರಣಯಾರು ಎನ್ನುವುದನ್ನು ಸರಕಾರ ಪರಿಶೀಲನೆ ಮಾಡಿಯಾರು ಜವಾಬ್ದಾರರೋ ಅವರ ಮೇಲೆ ತಕ್ಕಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—The House will now rise and meet again at 1 P.M. tomorrow.

The House adjourned at Six of the Clock to meet again at One of the Clock on Wednesday, the 6th March 1963.